Clause 2

MR. SPEAKER.—The question is :

"That Clause 2 stand part of the Bill."

The motion was adopted.

Clause 2 was added to the Bill.

Clause 1 and Preamble.

Mr. SPEAKER.—The question is:

"That Clause 1 and the Title and the Preamble stand part of the Bill."

The motion was adopted.

Clause 1 the Title and the Preamble were added to the Bill.

Motion to pass

Sri J. H. SHAMSUDDIN.—I beg to move :

"That the Mysore Contingency Fund (Temporary Amendment) Bill, 1961, be passed."

Mr. SPEAKER.—The question is :

"That the Mysore Contingency Fund (Temporary Amendment) Bill, 1961, be passed."

The motion was adopted.

MOTION *Re*: FLOOD SITUATION IN THE STATE.

Debate (*contd.*)

MR. SPEAKER.— Nagan Gowda will speak now. The time-limit is 15 minutes.

†Dr. R. NAGAN GOWDA (Hospet).— Sir, in the first place, I wish to thank the Government for the speedy action taken by them for meeting the great hardships caused by the floods in the State. I would, in particular, thank the Minister for Revenue for the work done by him in the Malnad area and also the Minister for Transport for the speed with which attempts were made to rescue marooned people in some of the villages in Dharwar district I wish to have it recorded–the work that the Government has done in meeting the situation, not merely the Ministers of the Government but also the various Government officers who have more or less risked danger and gone into these flood areas and rescued the people. In my own district, Kampli when the whole fortress was surrounded by water, many arrangements were made by the Deputy Commissioner and others to help the people out of the situation. Though we have no experience of the suffering of the people of Chickmagalur and other districts, still the heavy floods that occur in the Tungabhadra have affected some of the parts of Mallapur Taluk of

(Dr. R. NAGAN GOWDA)

Bellary District. This is a taluk which has been newly formed as the Hon'ble House knows, by the people of these villages which were submerged in the Tungabhadra Reservoir. These people were just now rehabilitating themselves when these floods have come and caused damage to the crops that they were growing. For instance in Muthakur and other places. Water has entered into the villages of Nowle, Madalkatte and Honnur and people have come out immediately. Nowle is a village which has been ordered to be evicted because of the Tungabhadra Reservoir. Arrangements have not been made to rehabilitate them. I would suggest to the Government to offer some building materials immediately for these people so that they could have temporary accommodation. I was glad when the Government said the other day that they had been making arrangements to get old corrugated zinc sheets which come very handy in these circumstances and enable people to put up a shelter over their heads. I would like to suggest to the Government to supply some of these materials immediately to the people of these villages–Nowle, Madalkatte and Honnur. Similarly, people in Kampli Fort are subjected to floods; they want to leave that area and rehabilitate themselves somewhere. Some arrangement should be made to remove them immediately and enable them to build for themselves a better accommodation.

I thank you very much for having given me an opportunity to speak.

†Sri V. SRINIVASA SHETTY (Coondapur).— I thank the Chair for having given me a chance to express a few remarks on this very important subject. I wish I could say a little more than the time would permit me; but since the time is limited, I will restrict my remarks since most of my friends on this side or that side have expressed very elaborately on the damages that have been caused and on the action that has to be taken in the matter. I am very surprised that neither the Government nor any of the members have touched one important aspect. Floods are not a new matter in this country or for that matter, in any country in the world. Perhaps this country came into the picture very late for planned flood prevention measures. In China or America they had under taken these measures long ago. In China, for example, thousands and thousands of years ago they had taken measures and they had been very successful. In America, T. V. Valley is one of the schemes taken up, dealing with flood prevention measures. When I go through the Second Five-Year Plan or through the Draft Third Five-Year Plan, I find that ample provisions have been made for flood prevention measures. Rs. 60 crores have been set apart in the Second Five-Year Plan towards flood prevention measures and Rs. 80 crores are set apart in the Draft Third Five-Year Plan. I have no time to read certain excerpts. An Hon'ble Member of the Central Government Sri Hafiz Ibrahim spoke on this measure last year elaborately. I find every State had some plans, but this State had no plans. If

plans were there they were not mentioned by the Minister. I find that hundreds of schemes have been submitted by the State Governments to the Central Government I have with me two copies of the publication of Bhagirath, which mention the various schemes published by every State but Mysore. How can I describe the actions of this Government? Friends on that side or this side have paid encomiums to the Ministers for their activities.

Dr. R. NAGAN GOWDA.— They deserve it.

Sri V. SRINIVASA SHETTY.— My friend has paid encomiums to his party Ministers. I am very glad they have taken some action in the matter; but even the responsible and respected colleague of mine, the ex-Minister Dr. Nagan Gowda who was a Minister in Madras, who was a Minister here has not said a single word about the long range measures with regard to flood control. Rs. 60 crores and 80 crores are set apart; but what is the plan that this Government has enumerated?

Dr. R. NAGAN GOWDA.— Too early to think of it.

9-00 A. M.

Sri V. SRINIVASA SHETTY.— Too early to think of it this year or is it too late for it? This is a very serious matter. This is not the first time I am mentioning this matter. Vast amounts have been set apart for certain schemes by the Central Government. We are not taking advantage of it. We are callous and we are always sleeping. I have no time to enumerate all these things. The Leader of the Opposition has suggested a committee, either Inter-State Committee or a State Committee to plan these schemes. In the year 1953 the Government of India sent a committee of two members to China to study flood control measures. They have submitted a very big report. I am told in China for each river they have got a committee with thousands of engineers. What have we got here? Are we tackling the problem in a systematic manner? Flood is a chronic think in our State. In my own dictrict we have umpteen rivers. Some are blessings; some are curses. A little more or a little less we are beset with floods. One river had caused the greatest havoc in my own taluk last year. I took the Hon'ble Minister to the river and he said that it would be included in scheme (Halar Scheme) under the flood the control scheme. Now I learn that the whole think is dropped. Sir, it is not a question of giving charity. I have seen blankets being distributed, langoties being distributed. But, they are being swallowed by the middle men also. We are not always having honest men. I am not making any allegations against any individual. What I say is that we should not treat flood relief measures as a charity. Sir, I am also a humble limb of this Government. We should not think that we have discharged our responsibility by simply distributing a bit of rice or clothing. The Government say that they have set apart 20 lakhs of rupee for giving loans. If the damage is colossal, the statement of the Hon'ble Minister in the Upper House and in this House is still more colossal. Sir, my friend Sri Mallappa,

(SRI V. SRINIVASA SHETTY)

yesterday, mentioned the damages caused in Coorg by floods. He is an ex-Minister of Coorg and he has not given an over-statement He is a member of the ruling party. He has collected the information from the Tahsildars and the Deputy Commissioner. He has given the figures here as he has collected from them. But there is a vast difference between the figures given by him and those given by the Hon'ble Minister. Sir, there is something wrong in the information the Government has received. It is not given up-to-date. There is no pl nning for the future; there is no planning for the prevention of floods. But, even in the matter of getting information, there is something wrong. Sir, Government, says that allotments are made, but when we approach the Deputy Commissioner, he says there are no funds. This is what happened last year. He says funds are exhausted.

Sri KADIDAL MANJAPPA (Minister for Revenue).—Sir, last time, all the funds that were allotted were distributed in the district of my friend. I may inform the House that the scheme of relief that we are now following is not adopted anywhere.

Sri V. SRINIVASA SHETTY.—I am very glad that our Government is the best in that matter I hope there is an improvement. What I say is, simply because the Government has sanctioned certain amount, it does not mean that it reaches the parties.

Sri KADIDAL MANJAPPA.—I will see that the money given is distributed within ten days.

Sri V. SRINIVASA SHETTY.—Very good, Sir. The point is that there is such an inertia, such a red-tape and slow motion in this matter that the needy person will not get the help in time. The rich do not require immediate help; it is the poor man who has last everything including his hut, that requires immediate help. The poor who had their huts on the coast line have lost their huts. They have nothing: they should depend on the charity of the public. They go begging for their food even. Sir, we should not allow the poor to go begging. They may be poor but they have self-respect. I do not know whether people are made to go begging on such occasions. I can undersrand voluntary contributions; but people go begging for their khana for a few days. This should be the position. My friend was saying that the Ministers should go to the affected places and stay there and look to the relief works. Whether it is a P.S.P. Minister or a Congress Minister, instead of remaining in the headquarters, he must go and remain on the spot and see that the needy are given immediate help. Why should it be ten or twenty days; why not immediate relief be given? Sir, a sense of lacking is prevailing in this matter. My district has got a surfeit of rivers. The people there have lost their everything. They are very poor people. I suggest that they should be given free sites as near as

possible to their houses. It is no use giving them sites 2 or 3 miles away. Free timber and other house building materials must be given to them immediately. I know cases where it took two to three years to give them these materials on previous occasions. The red-tape is there. This should not happen again. Sir, last year ten rupees were given as relief.

Sri KADIDAL MANJAPPA.—There is no provision to give only ten rupees. Building material can be supplied up to 300 rupees. Now, we are thinking of giving cash where timber is not available.

Sri V. SRINIVASA SHETTY.—Very good, Sir. Then, Sir, instead of charity, it is better that you give a bigger interest-free loan. I know, a majority of people are willing to take interest-free loan. Sir, I have not said anything about my district or my constituency. My district has suffered considerably last year and this year also. Government must have an overall plan and whatever help is given, must be given immediately without any red-tape. Thank you, Sir.

†ಶ್ರೀ ಎ. ಆರ್. ಬದರೀನಾರಾಯಣ್ (ತೀರ್ಥಹಳ್ಳಿ).—ಮಾನ್ಯ ಸಭಾಪತಿಗಳೆ, ಪ್ರಕೃತಿಯ ವಿಕೋಪದಿಂದ ಉಂಟಾದಂಥ ಅನಾಹುತ ಪರಿಸ್ಥಿತಿಯಲ್ಲಿ, ದೇಶದಲ್ಲಿ ಎಲ್ಲ ಕಡೆ ಯಲ್ಲಿಯೂ ಉಂಟಾದಂಥ ಹೆಚ್ಚಿನ ಮಳೆ, ಅದರ ಪರಿಣಾಮವಾಗಿ ಉಂಟಾದಂಥ ಪ್ರವಾಹಗಳು, ಅದರಿಂದ ಉಂಟಾದಂಥ ಅನಾಹುತಗಳು, ಇವುಗಳ ವಿಚಾರವಾಗಿ ನಾವು ಮೂರು ದಿನಗಳಿಂದಲೂ ಚರ್ಚೆ ಮಾಡುತ್ತಾ ಇದ್ದೇವೆ. ಮಾನ್ಯ ರೆವಿನ್ಯೂ ಮಂತ್ರಿಗಳ ಮತ್ತಿತರ ಮಂತ್ರಿಗಳೂ ಈ ವಿಚಾರದಲ್ಲಿ ಹೆಚ್ಚಿನ ಶ್ರದ್ಧೆ ಮತ್ತು ಆಸಕ್ತಿವಹಿಸಿ ಸ್ಥಳಕ್ಕೆ ಹೋಗುವುದಲ್ಲದೆ, ಯಾವ ಸಹಾಯವನ್ನು ಕಷ್ಟದಲ್ಲಿರತಕ್ಕವರು ನಿರೀಕ್ಷಣೆ ಮಾಡುತ್ತಾ ಇದ್ದಾರೋ ಆ ಸಹಾಯವನ್ನು ಬಹಳ ಶೀಘ್ರದಲ್ಲಿ, ಯಾವ ವಿಧಾನಕ್ಕೂ ಅವಕಾಶಕೊಡವಂತೆ, ಅವರಿಗೆ ಸ್ಥಳದಲ್ಲಿಯೇ ಕೊಡುವ ಬಗ್ಗೆ ಸಾಕಾದಷ್ಟು ಕಾರ್ಯಕ್ರಮಗಳನ್ನು ತೆಗೆದು ಕೊಂಡಿದ್ದಾರೆ.

ಮಳೆಯ ವಿಚಾರದಲ್ಲ ಹೇಳುವುದಾಗಿದ್ದರೆ, ಸಾಮಾನ್ಯವಾಗಿ ಹಳ್ಳಿಗಳಲ್ಲಿ ವಯಸ್ಸಾಗಿರು ವವರನ್ನು ವಿಚಾರಿಸಿದ್ದುದರಲ್ಲಿ ಅವರುಗಳು ನಮ್ಮ ಜೀವಮಾನದಲ್ಲೇ ಇಂತಹ ಮಳೆಯನ್ನು ನೋಡಿಯೇ ಇರಲಿಲ್ಲ ಮತ್ತು ನಮ್ಮ ಜೀವಮಾನದಲ್ಲೇ ಇಂತಹ ತೊಂದರೆಯನ್ನು ಅನುಭವಿಸಿಯೇ ಇರಲಿಲ್ಲ ಎಂದು ಹೇಳಿದರು. ಇದನ್ನು ಹೇಳಿದವರು 90-100 ವರ್ಷ ವಯಸ್ಸಾದ ವಯೋವೃದ್ಧರುಗಳು ಒಬ್ಬ ಮನುಷ್ಯನ ಜೀವಮಾನ ಪರ್ಯಂತ ಆಗದೇ ಇದ್ದಂತಹ ತೊಂದರೆ ಮತ್ತು ಅನಾಹುತ ಈಗ ಆಗಿದೆ ಎನ್ನುವದನ್ನು ಎಲ್ಲರೂ ಮನಗಂಡು ಯಾವ ಕಾರ್ಯಕ್ರಮ ವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ. ಅನೇಕ ಮಾನ್ಯ ಸದಸ್ಯರು ಈ ಸಭೆಯಲ್ಲಿ ಮಾತನಾಡುತ್ತಾ, ಇದಕ್ಕೆ ಕಾರಣಗಳು ಅನೇಕ ಇವೆ. ಜನಗಳಲ್ಲಿ ಈಚೆಗೆ ಅನ್ಯಾಯ, ಅಧರ್ಮ ಮತ್ತು ಅನೀತಿಗಳು ಹೆಚ್ಚಾಗಿ ದೇವರು ಈ ಜನಗಳ ವಿಚಾರದಲ್ಲಿ ಹೆಚ್ಚಿನ ಒಂದು ಕ್ರೋಧವನ್ನು ಇಟ್ಟುಕೊಂಡಿರುವುದರ ಪರಿಣಾಮವಾಗಿ ಈ ರೀತಿ ಆಗಿದೆ ಎಂದು ಹೇಳಿದರು. ಕೆಲವರು ಹೇಳಿವರು: ಇದು ಏನೋ ಸ್ವಾಭಾವಿಕವಾದುದು ಎಂದು. ಮತ್ತೆ ಕೆಲವರು It is only an accident, ಎಂದು ಹೇಳಿದರು. ಅದು ಹೇಗಾದರೂ ಇರಲಿ, ಆಗಿರತಕ್ಕ ಅನಾಹುತವೇನೋ ಆಗಿದೆ. ಇದನ್ನು ಪರಿಶೀಲನೆ ಮಾಡಿ ಕ್ಷಿಪ್ರದಲ್ಲಿ ಆಗಬೇಕಾದ ಪರಿಹಾರಗಳನ್ನು ಕಲ್ಪಿಸಿಕೊಡಬೇಕು ಮತ್ತು ಮುಂದೆ ಇದು ಆಗದ ಹಾಗೆ ಯಾವ ರೀತಿಯಾದ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳು

(ಶ್ರೀ ಎ. ಆರ್. ಬದರೀನಾರಾಯಣ್)

ವುದರಲ್ಲಿ ಯಾವ ರೀತಿಯಾದ ಕ್ರಮವನ್ನು ಅನುಸರಿಸಬೇಕು ಎನ್ನುವದನ್ನು ನಾವು ಯೋಚನೆ ಮಾಡಬೇಕು. ಸರಕಾರದವರಿಗೆ ಈ ವಿಚಾರದಲ್ಲಿ ನನ್ನ ವೈಯುಕ್ತಿಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಾ ನಾನೂ ಈ ಶಾಸನ ಸಭೆಯು ನಡೆಯುತ್ತಿದ್ದಾಗಲೇ ನಮ್ಮ ಅರಣ್ಯ ಶಾಖಾ ಮಂತ್ರಿಗಳ ಸಂಗಡ ಶಿವಮೊಗ್ಗಾ ಜಿಲ್ಲೆಯಲ್ಲಿ ಮೂರು-ನಾಲ್ಕು ದಿವಸಗಳು ಪ್ರವಾಸವನ್ನು ಕೈಕೊಂಡಾಗ ಅಲ್ಲಿ ನೋಡಿದುದನ್ನು ಈ ಸಭೆಯ ಮುಂದೆ ವಿವರವಾಗಿ ಹೇಳುವುದಕ್ಕಾಗಿ ಇಂದು ನಿಂತಿದ್ದೇನೆ. ಈ ವರ್ಷದ ಒಂದು ಮಳೆಯ ವೈಶಿಷ್ಟ್ಯವೇನೆಂದರೆ ತುಂಗ ಮತ್ತು ಭದ್ರಾ ನದಿಗಳಲ್ಲಿ ಯಾವತ್ತೂ ವರ್ಷದಲ್ಲಿ ಹೆಚ್ಚಿನ ಮಳೆಯಾದಾಗ ಪ್ರವಾಹ ಬರುತ್ತಿದ್ದುದನ್ನು ಪ್ರತಿ ವರ್ಷವೂ ಕೇಳುತ್ತಿದ್ದೆವು. ಮತ್ತು ಪ್ರವಾಹದಿಂದಾಗಿ ಶಿವಮೊಗ್ಗದ ಊರಿನೊಳಗೆ ನೀರು ನುಗ್ಗಿದ್ದನ್ನು ಕೇಳಿದ್ದೇವೆ. ಆದರೆ ಇತರ ಕಡೆಗಳಲ್ಲಿ ಎಂದರೆ, ವರದಾ ನದಿ, ಕುಮುದ್ವತಿ ಈ ನದಿಗಳಿಂದ ಅದಷ್ಟು ಅನಾಹುತ ಈ ಕಡೆಗಳಲ್ಲಿರಲಿಲ್ಲ. ಈ ತುಂಗಾ ಮತ್ತು ಭದ್ರಾ ನದಿಯಿಂದ ಹೆಚ್ಚಿನ ಅನಾಹುತವೇನೂ ಆಗಲಿಲ್ಲ. ಇದಕ್ಕೆ ಕಾರಣ, ಕೊಪ್ಪಾ, ಶೃಂಗೇರಿ, ಹೊಸನಗರ, ತೀರ್ಥಹಳ್ಳಿ ಈ ತಾಲ್ಲೂಕುಗಳಲ್ಲಿ ಹೆಚ್ಚಿನ ಮಳೆ ಬಿದ್ದುದರಿಂದ ಇಲ್ಲಿ ಹೆಚ್ಚಿನ ಅನಾಹುತವಾಗಲಿಲ್ಲ. ಸಾಗರ, ಹೊಸನಗರ, ಸೊರಬ ತಾಲ್ಲೂಕುಗಳಲ್ಲಿ ಬಹಳ ಮಳೆಯಾದುದರ ಪರಿಣಾಮವಾಗಿ ಕುಮುದ್ವತಿ, ವರದಾ ನದಿಗಳಲ್ಲಿ ಹೆಚ್ಚಿನ ಪ್ರವಾಹವಾಗಿ ಧಾರವಾಡ ಜಿಲ್ಲೆಗಳಲ್ಲಿ ಆದಷ್ಟು ಅನಾಹುತ ನಮ್ಮ ಜಿಲ್ಲೆಯಲ್ಲಿ ಆಗಲಿಲ್ಲ ಎಂದುಕೊಂಡಿದ್ದೇನೆ. ಶಿವಮೊಗ್ಗ ಜಿಲ್ಲೆಯ ಹೊಸನಗರ ದಲ್ಲಿ ಒಂದು ದಿವಸದಲ್ಲಿ 26 ಇಂಚು ಮಳೆ ಬಿದ್ದಿದೆ ಎಂದು ರಿಕಾರ್ಡು ಆಗಿದೆ. ಈ ರೀತಿ ಒಂದು ದಿವಸದಲ್ಲಿ ಹೆಚ್ಚಿನ ಮಳೆಯಾದುದೂ ಅಲ್ಲದೆ ಈ ಮಳೆ ಸುಮಾರು 15-20 ದಿವಸಗಳಿಂದ ಅವಿಚ್ಛಿನ್ನವಾಗಿ ಹೊಡೆಯುತ್ತಿರುವುದರ ಪರಿಣಾಮವಾಗಿ ಬಹಳವಾದ ತೊಂದರೆ ಮತ್ತು ಅನಾಹುತಗಳಾಗಿವೆ. ಅಂಕಿಅಂಶಗಳನ್ನು ಹೇಳುವುದಾಗಿದ್ದರೆ, ಸಾಗರ ತಾಲ್ಲೂಕಿನಲ್ಲಿ ಒಂದಕ್ಕೆ ಮೂರರಷ್ಟು ಮಳೆಯಾಗಿದೆ, ಸೊರಬ ತಾಲ್ಲೂಕಿನಲ್ಲಿ ಒಂದಕ್ಕೆ ಮೂರರಷ್ಟು ಮಳೆ ಯಾಗಿದೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಒಂದಕ್ಕೆ ಎರಡರಷ್ಟು ಮಳೆಯಾಗಿದೆ. ಹೊಸನಗರ ತಾಲ್ಲೂಕಿನಲ್ಲಿ ಒಂದಕ್ಕೆ ನಾಲ್ಕರಷ್ಟು ಮಳೆಯಾಗಿದೆ. ಪ್ರತಿವರ್ಷವೂ ಎಷ್ಟು ಮಳೆಯಾಗು ತ್ತಿತ್ತೋ ಅದಕ್ಕೆ ನಾಲ್ಕರಷ್ಟು ಹೆಚ್ಚಿಗೆ ಮಳೆಯ ಪ್ರಮಾಣ ಹೊಸನಗರ ತಾಲ್ಲೂಕು ಒಂದರಲ್ಲಿಯೇ ಆಗಿದೆ. ಇನ್ನು ಕೆಲವು ತಾಲ್ಲೂಕುಗಳ ಬಗ್ಗೆ ಕೆಲವು ವಿಚಾರಗಳನ್ನು ಇಲ್ಲಿ ಹೇಳಬೇಕಾಗಿದೆ. ಶಿವಮೊಗ್ಗಾ ತಾಲ್ಲೂಕಿನಲ್ಲಿ ತುಂಗಾ ನದಿಯಿಂದ ಸಾಮಾನ್ಯವಾಗಿ ಬರುವ ಪ್ರವಾಹಕ್ಕಿಂತ ಈ ಸಾರಿ ಹೆಚ್ಚಾಗಿ ಬಂದಿದೆ. ಇದರ ಪರಿಣಾಮವಾಗಿ ಉಂಟಾಗಿರತಕ್ಕ ತೊಂದರೆಗಳು ಏನು ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು. ನಮ್ಮ ಶಿವಮೊಗ್ಗಾ ಜಿಲ್ಲೆಯ ನಗರದಲ್ಲಿರುವ ತುಂಗಾ ಸೇತುವೆಗೆ ಬಹಳ ಡ್ಯಾಮೇಜು ಆಗಿದೆ ಮತ್ತು ಅದರಲ್ಲಿ ಬಿರುಕುಗಳು ಬಂದಿವೆ. ಇದು ಬಹಳ ಹಳೆಯ ಸೇತುವೆ. ಹೀಗೆಯೇ ಪ್ರವಾಹ ಬರುತ್ತಿದ್ದರೆ ಒಂದಲ್ಲ ಒಂದು ದಿವಸ ಇದು ಬೀಳುವ ಪರಿಸ್ಥಿತಿ ಇದೆ. ಇದಕ್ಕೆ ಬದಲಾಗಿ ಬೇರೊಂದು ಕಡೆ ಜನಗಳ ಅನುಕೂಲಕ್ಕಾಗಿ ಕಟ್ಟಬೇಕೆಂದು ಶಿವಮೊಗ್ಗದ ಪ್ರಮುಖರುಗಳು ಕೇಳಿದ್ದರು. ಒಂದು ಕಾಲದಲ್ಲಿ ಶ್ರೀ ಪಾರ್ಕ ವೀರಣ್ಣ ಗೌಡರು ಮಂತ್ರಿಗಳಾಗಿದ್ದಾಗ ಇದನ್ನು ಹಿಂದೆಯೇ ಕಟ್ಟಬೇಕು ಮತ್ತು ಇದಕ್ಕಾಗಿ ಆ ಮುನಿಸಿಪಾಲಿಟಿಯವರು ನಾಲ್ಕನೆಯ ಒಂದು ಭಾಗದಷ್ಟು ಹಣವನ್ನು ಕೊಡಬೇಕು ಎಂದು, ಇದಕ್ಕಾಗಿ ಬೇರೆ ಸೇತುವೆ ಆಗಬೇಕು ಎಂದು ಹೇಳಿದ್ದುದು ಯಾವುದೋ ಕಾರಣಗಳಿಂದಾಗಿ ಇನ್ನೂ ಮುಂದೂಡುತ್ತಾ ಹೋಗಿದೆ. ಆದುದರಿಂದ ಶಿವಮೊಗ್ಗಾ ಸೇತುವೆ ಬಹಳ ಮುಖ್ಯವಾದುದು, ಇದು ಆಗದೇ ಹೋದರೆ ಒಂದಲ್ಲ ಒಂದು ದಿನ ಇದರಿಂದ ಇಲ್ಲಿನ ಜನಕ್ಕೆ ತೊಂದರೆ ಸಂಭವಿಸುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ತುಂಗಾ ನದಿಯ ನೀರು ಬೀದಿ ಬೀದಿಗಳಲ್ಲಿ ನುಗ್ಗಿ ತೊಂದರೆಯಾಗಿದೆ ಮತ್ತು ನದಿಯು ಹರಿಯುವ ನೀರಿನ

ಪಾತ್ರವೂ ದೊಡ್ಡದಾಗುತ್ತದೆ. ಇಲ್ಲಿರುವ ಚಿಕ್ಕ ಬ್ರಾಹ್ಮಣರ ಬೀದಿ ಮತ್ತು ಇನ್ನೂ ಕೆಲವು ಬೀದಿಗಳಲ್ಲಿ ನೀರು ನುಗ್ಗಿ ಮಣ್ಣುಗಳನ್ನು ತಂದುಹಾಕಿ ನದಿ ಪಾತ್ರ ದೊಡ್ಡದಾಗುತ್ತಿದೆ. ಇದರಿಂದ ಈ ಊರಿನ ಮನೆಗಳಿಗೆ ತೊಂದರೆಯಾಗಿದೆ. ನದಿಯ ಸುತ್ತಮುತ್ತಲಿರುವ ಮನೆಗಳನ್ನು ಬದಲಾಯಿಸಿ ಬೇರೆ ಕಡೆಗೆ ಹಾಕದೇ ಹೋದರೆ ಈ ಮನೆಗಳ ಜನಗಳಿಗೆ ತೊಂದರೆ ಖಚಿತ ಎಂದು ಹಿಂದೆಯೇ ಒಂದು ಪ್ರಾಜೆಕ್ಟನ್ನು ತಯಾರು ಮಾಡಿದ್ದಾರೆ. ಅದೇಕೋ ಇನ್ನೂ ಆಗಲಿಲ್ಲ. ಇದಾಗದೇ ಹೋದರೆ ಮುಂದೆ ಬಹಳ ತೊಂದರೆಯಾಗಿ ಅನಾಹುತವಾಗುತ್ತದೆ ಎಂದು ಈಗಿನಿಂದಲೇ ನಿರೀಕ್ಷೆ ಮಾಡಬಹುದು. ಇದು ಕೂಡಲೇ ಆಗಬೇಕು. ಅಲ್ಲದೆ ಶಿವಮೊಗ್ಗಾದಲ್ಲಿ ಅನೇಕ ಅನಾಹುತಗಳಾಗಿವೆ. ತುಂಗ ಮತ್ತು ಭದ್ರಾ ನದಿಗಳಿಂದ ಆದ ಪ್ರವಾಹವನ್ನು ನೋಡುವಾಗ ಇಲ್ಲಿರತಕ್ಕ ಜಮೀನುಗಳಿಗೆ ನೀರು ನುಗ್ಗಿ ಅನೇಕ ಕಡೆ ಫಸಲು ಹಾಳಾಗಿಹೋಗಿದೆ ಎನ್ನುವುದು ಕಂಡುಬರುತ್ತಿದೆ. ಈ ಶಿವಮೊಗ್ಗಾದಲ್ಲಿರುವ low lying ಪ್ರದೇಶಗಳನ್ನು ತೆಗೆದು ಅವರಿಗೆ ಬೇರೆ ವಸತಿ ಸೌಕರ್ಯಗಳನ್ನು ಕಲ್ಪಿಸಿ ಅವರಿಗೆ ಮನೆಗಳನ್ನು ಕಟ್ಟಿಸಿ ಕೊಡಬೇಕು. ಈ ಬಗ್ಗೆ ಸರ್ಕಾರ ಬೇಗನೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಇಲ್ಲಿ ಒತ್ತಾಯ ಮಾಡಬೇಕಾಗಿದೆ. ಆದರೆ ಈ ಸಾರಿ ಶಿವಮೊಗ್ಗಾದಲ್ಲಿ ಹೆಚ್ಚು ಮನೆಗಳು ನಾಶವಾಗಿಲ್ಲ. ದನಕರುಗಳಿಗೆ ಮತ್ತು ಇತರ ಜಾನುವಾರುಗಳಿಗೆ ಸರಿಯಾದ ಮೇವು ಇಲ್ಲದೆ ಕೆಲವು ತಾಲ್ಲೂಕುಗಳಲ್ಲಿ ತೊಂದರೆಯಾಗಿದೆ. ಆದರೆ ಜಾಸ್ತಿ ಜನ ಜಾನುವಾರುಗಳಿಗೆ ಹೆಚ್ಚಿನ ತೊಂದರೆಯಾಗಿ ತಲೆಕೆಳಕಾಗುವ ಪರಿಸ್ಥಿತಿ ಏನೂ ಇಲ್ಲದೇ ಇದ್ದರೂ ಸ್ವಲ್ಪ ತೊಂದರೆಗಳಾಗಿರುವುದನ್ನು ನೋಡಿದ್ದೇನೆ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಶಿವಮೊಗ್ಗ–ಆಗುಂಬೆ ಘಾಟಿ ರಸ್ತೆ ಐದು ಕಡೆಗಳಲ್ಲಿ ಹೋಗಿ ಸಂಚಾರಕ್ಕೆ ತೊಂದರೆಯಾಗಿ ನಾಲ್ಕೈದಾರು ದಿನಗಳ ಕಾಲ ನೀರು ನಿಂತು ತೊಂದರೆಯಾಗಿತ್ತು. ಇದಕ್ಕೆ ಕಾರಣವೇನು ಎನ್ನುವುದನ್ನು ನೋಡಿ ಮುಂದೆ ಬರತಕ್ಕ ಮಳೆಗಳಿಂದ ಅನಾಹುತವಾಗದ ಹಾಗೆ ತಕ್ಕ ಕಾರ್ಯಕ್ರಮವನ್ನು ಈಗಿನಿಂದಲೇ ಸರ್ಕಾರ ತೆಗೆದುಕೊಳ್ಳಬೇಕು ಎಂದು ಅವರ ಗಮನಕ್ಕೆ ತಂದು ಕೇಳಿಕೊಳ್ಳುತ್ತಿದ್ದೇನೆ. ಅಲ್ಲದೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ನಮಗೆಲ್ಲರಿಗೂ ಗೊತ್ತಿರುವ ಹಾಗೆ ಇದು ಅಡಕೆ ಬೆಳೆಯುವ ಪ್ರದೇಶ ಎನ್ನುವುದು ನಿಮಗೂ ತಿಳಿದಿದೆ. ಆ ಪ್ರದೇಶಗಳಲ್ಲಿ ಮಳೆ ಜಾಸ್ತಿಯಾಗಿ, ಗಾಳಿ ಜಾಸ್ತಿಯಾಗಿ ಎಕರೆಗೆ 50–60–100 ಮರಗಳಿಗಿಂತ ಹೆಚ್ಚಾಗಿ ಮರಗಳು ಬಿದ್ದು ಹೋದುದರ ಪರಿಣಾಮವಾಗಿ ಅಡಕೆ ಬೆಳೆಯುವ ಜಮೀನುಗಳಲ್ಲಿ ಅಡಕೆ ಬೆಳೆ ಚೆನ್ನಾಗಿ ಆಗದೆ ಅಡಕೆ ಮರಗಳಿಂದ ವಿಶೇಷವಾಗಿ ಲುಕ್ಸಾನು ಆಗಿದೆ. ಅಡಕೆ ಸಸಿಗಳಿಗೆ ಲುಕ್ಸಾನು ಜಾಸ್ತಿ ಆಗಿರುವುದರಿಂದ ಅಲ್ಲಿ ಮಳೆ ಜಾಸ್ತಿಯಾಗಿ ಕೊಳೆ ರೋಗ ಆ ಬೆಳೆಗೆ ಬಂದು ಹೆಚ್ಚಾಗಿ ಅಡಿಕೆ ಬೆಳೆಯೇ ಈಗ ಹೋಗಿದೆ. ಇದರಿಂದ ಬಾಗಾಯತುದಾರರಿಗೆ ಬಹಳ ತೊಂದರೆಯುಂಟಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಎಲ್ಲದಕ್ಕಿಂತ ಹೆಚ್ಚಾಗಿ ತೊಂದರೆಯಾಗಿರುವುದು ಎಲ್ಲರಿಗೂ ಗೊತ್ತಿರುವ ಹಾಗೆ ಶಿವಮೊಗ್ಗ ಜಿಲ್ಲೆಯ ಗುಡ್ಡಗಾಡಿನ ಪ್ರದೇಶ. ಹೆಚ್ಚಿನ ಮಳೆಯಿಂದ ಅಲ್ಲಿ ಬೀಳತಕ್ಕ ನೀರು, ಹಳ್ಳಿಗಳಿಂದ ಹೋಗತಕ್ಕ ನೀರು, ನದಿಗಳಿಗೆ ಹೋಗಿ ಸೇರುವುದಲ್ಲದೆ ಜಮೀನುಗಳ ಮೇಲೆ ಕೊಚ್ಚಿ ಹರಿದು ಜಮೀನುಗಳೆಲ್ಲಾ ನೀರಿನಲ್ಲಿ ಮುಳುಗಡೆಯಾಗಿರುವುದಲ್ಲದೆ ಜಮೀನುಗಳೇ ಅನೇಕ ಕಡೆಗಳಲ್ಲಿ ಕೊಚ್ಚಿಹೋಗಿ ಕಣ್ಣಿಗೇ ಅವು ಕಾಣುತ್ತಿಲ್ಲ. ಬಹಳವಾಗಿ ಆ ಜಮೀನುಗಳು ಒಂದು ರೀತಿಯ ಅರೂಪಸ್ಥಿತಿಗೆ ಬಂದಿರುವುದು ಕಾಣಬರುತ್ತಿದೆ. ಈ ವಿಚಾರವನ್ನು ಸರ್ಕಾರದವರು ಚೆನ್ನಾಗಿ ಗಮನಿಸಬೇಕೆಂದು ನಾನು ಹೇಳುತ್ತೇನೆ. ಬಹಳ ಮುಖ್ಯವಾಗಿ ಆಗುಂಬೆ ಘಾಟಿ ರಸ್ತೆಯನ್ನು ಅಗಲ ಮಾಡಬೇಕು. ಅದನ್ನು ತುಂಬಾ ಬಂದೋಬಸ್ತು ಮಾಡಬೇಕು. ಅದರ ಮೇಲೆ ಬಸ್ಸುಗಳು ಓಡಾಡಬೇಕು. ಆ ರಸ್ತೆಯಲ್ಲಿ ವಿಶೇಷವಾಗಿ ನೀರು ತುಂಬಿ ಅದು ಕುಸಿದುಬೀಳುವ ಪರಿಸ್ಥಿತಿ ಇದೆ. ಇದಕ್ಕೆ ಪೂರ್ಣ ಗಮನ ಕೊಡಬೇಕು. ಇದನ್ನು ಅನೇಕ ವರ್ಷಗಳಿಂದ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

(ಶ್ರೀ ಎ. ಆರ್. ಬದರೀನಾರಾಯಣ್)

ಆದುದರಿಂದ ಆಗುಂಬೆ ಘಾಟಿ ರಸ್ತೆ ದುರಸ್ತನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ನಾನು ಕೇಳುತ್ತೇನೆ.

ಇನ್ನು ಹೊಸನಗರ ತಾಲ್ಲೂಕಿನ ವಿಚಾರ. ಅಲ್ಲಿ ಮಳೆ ಜಾಸ್ತಿ ಇದೆ. ಹೆಚ್ಚು ಮಳೆ ಹೊಸನಗರ ಮತ್ತು ಸಾಗರ ತಾಲ್ಲೂಕ್‍ಗಳಲ್ಲಿ ಬೀಳುತ್ತದೆ. ಅಲ್ಲಿ ಸಾಮಾನ್ಯವಾಗಿ ಒಂದು ಗದ್ದೆಯ ಬಯಲನ್ನು ನೋಡುವುದಾದರೆ ಅರಣ್ಯ ಶಾಖೆಯವರು ಕೆಲವು ಗದ್ದೆಗಳ ಫೋಟೋಗಳನ್ನೂ ಸಹ ತೆಗೆದಿದ್ದಾರೆ. ಅದನ್ನು ನೋಡಬಹುದು ಅಲ್ಲಿ ಬತ್ತದ ಬೆಳೆ ದೊಡ್ಡ ಸಮುದ್ರ ನೋಡಿದ ಹಾಗೆ ಇದೆ. ಎಲ್ಲಾ ಕಡೆಗಳಲ್ಲಿಯೂ ಬತ್ತದ ಗದ್ದೆಗಳಲ್ಲಿ ನೀರು ಆವರಿಸಿಕೊಂಡಿದೆ. ಗದ್ದೆಗಳಲ್ಲಿ ನೀರು ಎರಡು–ಮೂರು ಅಡಿಗಳಷ್ಟು ತುಂಬಿಕೊಂಡಿದೆ. ಸಾವಿರಾರು ಎಕರೆಗಳು ನೀರಿನಿಂದ ಮುಳುಗಡೆಯಾಗಿ ಬೆಳೆ ಬಂದಿರತಕ್ಕ ಫಸಲು ನಷ್ಟವಾಗಿದೆ. ಈಗ ಸರ್ಕಾರದ ಅಧಿಕಾರಿಗಳ ಅಂದಾಜಿನ ಪ್ರಕಾರ ಸುಮಾರು 15–20 ಸಾವಿರ ಎಕರೆ ಜಮೀನುಗಳು ನೀರಿನಲ್ಲಿ ಮುಳುಗಡೆಯಾಗಿ ಅದರಲ್ಲಿ ಫಸಲು ಬರುವುದಕ್ಕೆ ಯೋಗ್ಯವಾಗಿಲ್ಲ. ಅಂದ ಮೇಲೆ 20 ಸಾವಿರ ಎಕರೆ ಜಮೀನುಗಳು ಎಂದು ಹೇಳಿದರೆ ಒಂದು ಲಕ್ಷ ಐದು ಪಲ್ಲ ಎಂದು ಮಲೆನಾಡಿನಲ್ಲಿಟ್ಟು ಕೊಂಡರೂ ಬತ್ತ ಬರತಕ್ಕದ್ದು ಎಷ್ಟು ಲುಕ್ಸಾನು ಆಗಿದೆ ಎಂಬುದನ್ನು ಸರ್ಕಾರದವರು ಗಮನಿಸಬೇಕು. ಇಂತಹ ಸಂದರ್ಭದಲ್ಲಿ ಗೇಣಿದಾರರು ಮತ್ತು ಬಡ ಜನಗಳು ಯಾವ ರೀತಿಯಲ್ಲಿ ಜೀವನ ಮಾಡಬೇಕು, ಅಂತಹವರಿಗೆ ಯಾವ ರೀತಿ ಪರಿಹಾರ ಕೊಡಬೇಕು ಎನ್ನುವುದಕ್ಕೂ ಕೂಡ ಸರ್ಕಾರದವರು ಗಮನ ಕೊಡಬೇಕು. ಹೊಸನಗರ ತಾಲ್ಲೂಕಿನಲ್ಲಿ ನಗರಸೊಪ್ಪ ಘಾಟಿಯ ರಸ್ತೆಯ ಎರಡು ಕಡೆಗಳಲ್ಲಿಯೂ ಸಂಚಾರ ಸಾರಿಗೆಕ್ಕೆ ಬಹಳ ತೊಂದರೆಯಾಗಿದೆ. ಸುಮಾರು ನಾಲ್ಕೈದು ಸಾವಿರ ಜನರು ಆ ಪ್ರಾಂತದಿಂದ ಹೊರಗೆ ಬರುವ ಹಾಗಿಲ್ಲ. ಇದನ್ನೂ ಕೂಡ ಸರ್ಕಾರದವರು ಗಮನಿಸಬೇಕು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಮಲೆನಾಡು ಡೆವಲಪ್‍ಮೆಂಟ್ ಬೋರ್ಡ್ ಇದ್ದಾಗ್ಗೆ ಈ ತರಹ ತೊಂದರೆ ಇದ್ದಿತೇ?

ಶ್ರೀ ಎ. ಆರ್. ಬದರೀನಾರಾಯಣ್.—ಮಲೆನಾಡು ಡೆವಲಪ್‍ಮೆಂಟ್ ಬೋರ್ಡ್ ಇದ್ದಾಗ್ಗೆ ಈ ರೀತಿ ಮಳೆ ಬರುತ್ತಿರಲಿಲ್ಲ. ಸಾಮಾನ್ಯ ಮಳೆ ಬರುತ್ತಿತ್ತು. ಈಗ ವಿಶೇಷ ಪರಿಸ್ಥಿತಿ ಉಂಟಾಗಿರುವಾಗ ವಿಶೇಷವಾಗಿ ಈ ಬಗ್ಗೆ ಮಾತನಾಡುವ ಪರಿಸ್ಥಿತಿ ಬಂದಿದೆ. ಅಲ್ಲಿ ಏನೇನಾಗಿದೆ ಎಂಬುದನ್ನು ಸಹ ತಿಳಿಸಬೇಕು. ನಾನು ಇನ್ನು ಹೆಚ್ಚು ಹೇಳುವುದಿಲ್ಲ. ಮಾನ್ಯ ಸಭಾಧ್ಯಕ್ಷರು ಕಾಲ ಹೆಚ್ಚಾಗಿದೆ. ಜಾಗ್ರತೆ ಮುಗಿಸಬೇಕು ಎಂದು ಹೇಳಿದ್ದಾರೆ. ಸೊರಬ ತಾಲ್ಲೂಕಿನಲ್ಲಿ ಬಹಳ ಅನಾಹುತವಾಗಿದೆ. ನಲ್ಲಿಕೊಪ್ಪದಲ್ಲಿ 108 ಮನೆಗಳು, ಮೂಡಿ ಗ್ರಾಮದಲ್ಲಿ 50 ಮನೆಗಳು—ಹೀಗೆ ಅನಾಹುತಗಳು ಉಂಟಾಗಿವೆ. ಮುಖ್ಯವಾಗಿ ಸರ್ಕಾರದವರು ಈ ವಿಚಾರದಲ್ಲಿ ಹೆಚ್ಚಿಗೆ ಗಮನಕೊಡಬೇಕು. ಇಂತಹ ಸಂದರ್ಭದಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬುದನ್ನು ಸರ್ಕಾರದವರು ಯೋಚಿಸಬೇಕು. ಜಾಗ್ರತೆ ಜಾಗ್ರತೆಯಾಗಿ ಏನೇನು ಆಗಬೇಕು, ಸಾವಧಾನವಾಗಿ ಮತ್ತು ದೀರ್ಘಾವಧಿಯಾಗಿ ಏನೇನು ಆಗಬೇಕು ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು.

ಯಾರು ಯಾರು ಫಸಲನ್ನು ಬಹಳವಾಗಿ ಲುಕ್ಸಾನು ಮಾಡಿಕೊಂಡಿದ್ದಾರೋ ಮತ್ತು ಯಾರು ಯಾರಿಗೆ ಫಸಲು ಬರುವುದಿಲ್ಲವೋ ಅಂತಹವರಿಗೆ ಕಂದಾಯ ರೆಮಿಷನ್ ಮಾಡಿಕೊಡಬೇಕೆಂಬುದನ್ನು ಮಾನ್ಯ ಕಂದಾಯ ಮಂತ್ರಿಗಳು ಗಮನಿಸಬೇಕು. ಅಲ್ಲದೆ ಅಲ್ಲಿನ ರಸ್ತೆಗಳು ಬಹಳವಾಗಿ ಕೆಟ್ಟುಹೋಗಿರುವುದರಿಂದ ಅಕ್ಕಿಯನ್ನು ಸರಿಯಾಗಿ ಸರಬರಾಜು ಮಾಡುವುದಕ್ಕೆ ಆಗುತ್ತಿಲ್ಲ. ಆದುದರಿಂದ ಅಕ್ಕಿ ಜಾಗ್ರತೆಯಾಗಿ ಪಟ್ಟೆತ್ರಿ ಮಾಡುವುದಕ್ಕೆ ಸರ್ಕಾರದವರು

ಪೂರ್ಣ ಗಮನಕೊಡಬೇಕು. ಬೀಜದ ಬತ್ತವನ್ನು ರೈತರಿಗೆ ಮತ್ತು ಗೇಣೀದಾರರಿಗೆ ಮುಫತ್ತಾಗಿ ಕೊಡಬೇಕು. ಗ್ರ್ಯಾಟ್ಯುಯಿಟಿ ರಿಲೀಫನ್ನು 100 ರೂಪಾಯಿಗಳಾದರೂ ಕೊಡಬೇಕು. ಈಗ 100 ರೂಪಾಯಿಗಳನ್ನು ಕೊಟ್ಟರೆ ಕೇವಲ 1½ ಪಲ್ಲ ಬತ್ತ ಮಾತ್ರ ಬರುತ್ತದೆ. ಕೆಲವು ಕಡೆಗಳಲ್ಲಿ 20-25 ಪಲ್ಲ ಭತ್ತ ನಾಶವಾಗಿರುವಾಗ 1½ ಪಲ್ಲ ಅಥವಾ 100 ರೂಪಾಯಿಗಳನ್ನು ಕೊಟ್ಟರೆ ಎಷ್ಟರಮಟ್ಟಿಗೆ ರೈತರಿಗೆ ಅನುಕೂಲವಾಗುತ್ತದೆ? ಅದಕ್ಕೋಸ್ಕರ ಯಾವ ರೀತಿ ಸರ್ಕಾರದವರು ಸಹಾಯ ಮಾಡಬೇಕೆಂಬುದನ್ನು ಚೆನ್ನಾಗಿ ಯೋಚನೆ ಮಾಡಬೇಕು. ಗದ್ದೆಗಳ ಕಡೆ ಹೋಗಿ ನೋಡಿದರೆ ಅಲ್ಲಿನ ರೈತರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಅದಕ್ಕಾಗಿ ರೈತರಿಗೆ ಸಾಲವನ್ನು ಇಂಟರೆಸ್ಟ್ ಫ್ರೀಯಾಗಿ ಕೊಡಬೇಕು. ಏಕೆಂದರೆ ಅವರು ತಮ್ಮ ಗದ್ದೆಗಳನ್ನು ಸರಿಪಡಿಸಿಕೊಂಡು ಮುಂದೆ ಚೆನ್ನಾಗಿ ಬೆಳೆ ಬೆಳೆಯುವುದಕ್ಕೆ ತಕ್ಕ ಅನುಕೂಲವಾಗಬೇಕು. ಹೀಗೆ ಇನ್ನೂ ಅನೇಕ ಕೆಲಸ ಕಾರ್ಯಗಳನ್ನು ಸರ್ಕಾರದವರು ಕ್ಷಿಪ್ರದಲ್ಲಿ ಮಾಡಬೇಕಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಮಾತನಾಡುತ್ತಾ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳ ಪೈಕಿ ಬಹಳ ಮುಖ್ಯವಾಗಿ ಒಂದು ಇಂಟರ್ ಸ್ಟೇಟ್ ಕಾನ್ಫರೆನ್ಸ್ ಮಾಡಿ ಎಂದು ಹೇಳಿದ್ದಾರೆ. ಮೈಸೂರು ದೇಶದಲ್ಲಿ ಹರಿಯುತಕ್ಕ ನದಿಗಳು, ಮದ್ರಾಸಿನಲ್ಲಿ ಆಂಧ್ರಪ್ರಾಂತದಲ್ಲಿ ಮತ್ತು ಇತರ ಕಡೆಗಳಲ್ಲಿಯೂ ಹರಿಯುತ್ತಿರುವುದರಿಂದ ನಮ್ಮ ಪರಸ್ಪರ ಪ್ರಾಂತಗಳಲ್ಲಿ ಉಂಟಾಗುವ ಒಂದು ರೀತಿಯಾದಂತಹ ಈ ಪ್ರವಾಹಗಳನ್ನು ಯಾವ ರೀತಿ ತಡೆಗಟ್ಟಬೇಕು, ಏತಕ್ಕೋಸ್ಕರ ಈ ಪ್ರವಾಹಗಳು ಆಗುತ್ತಿವೆ? ಇವುಗಳ ಹಾವಳಿಯನ್ನು ತಪ್ಪಿಸುವುದಕ್ಕೆ ಏನೇನು ಮಾಡಬೇಕು, ಇವುಗಳಿಂದ ಜನಗಳಿಗೆ ತೊಂದರೆಯಾಗುವುದನ್ನು ತಪ್ಪಿಸುವುದಕ್ಕೆ ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದನ್ನು ಕೂಡಲೇ ಸರ್ಕಾರದವರು ಯೋಚನೆ ಮಾಡಬೇಕೆಂದೂ ಸಹ ಹೇಳಿದ್ದಾರೆ. ಇದಕ್ಕಾಗಿ ಈಗಲೇ ಒಂದು ಕಾನ್ಫರೆನ್ಸ್ ಮಾಡಿದರೆ ಬಹಳ ಸುಖ. ಇಂತಹ ಪ್ರವಾಹಗಳು ಆಗುವುದಕ್ಕೆ ಮುಖ್ಯ ಕಾರಣಗಳೇನೆಂಬುದನ್ನು ಕೂಡಲೇ ಸರ್ಕಾರದವರು ವಿಮರ್ಶೆ ಮಾಡಬೇಕು. ಯಾವ ರೀತಿ ಮಾಡಿದರೆ ಇವೆಲ್ಲವೂ ಸರಿಹೋಗುತ್ತವೆಂಬುದನ್ನು ಯೋಚನೆ ಮಾಡಬೇಕು. ಅಲ್ಲದೆ ಕೇಂದ್ರ ಸರ್ಕಾರದಿಂದಲೂ ಈ ವಿಚಾರದಲ್ಲಿ ಹೆಚ್ಚಿನ ಸಹಾಯವನ್ನು ನಿರೀಕ್ಷಣೆ ಮಾಡಬೇಕು. ಕೇಂದ್ರ ಸರ್ಕಾರದವರಲ್ಲಿ ಈ ವಿಚಾರವನ್ನು ತಿಳಿಸಿ ಅವರನ್ನು ಒತ್ತಾಯಮಾಡಿ ಹೆಚ್ಚಿನ ಹಣ ಸಹಾಯವನ್ನು ಅವರಿಂದ ಪಡೆದು ನಮ್ಮ ಜನರಿಗೆ ಕೈಯಲ್ಲಾದಷ್ಟು ಸಹಾಯವನ್ನು ಜಾಗ್ರತೆಯಾಗಿ ಮಾಡಿಕೊಡಬೇಕೆಂದು ಹೇಳಿದ್ದಾರೆ. ಅದಕ್ಕೆ ನಾನು ಬೆಂಬಲ ಕೊಡುತ್ತೇನೆ. ಇದನ್ನೆಲ್ಲಾ ಅಗತ್ಯವಾಗಿ ಮಾಡಬೇಕಾಗಿದೆ. ಮುಖ್ಯವಾಗಿ ಸರ್ಕಾರದವರು ಬೇಕಾದಷ್ಟು ತಮಗೆ ತೋಚಿದ ರೀತಿಯಲ್ಲಿ, ಸಾಕಾದಷ್ಟು ಪ್ರಮಾಣದಲ್ಲಿ ಅನೇಕ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಆದರೆ ಅವರು ಹಾಕಿಕೊಂಡಿರತಕ್ಕ ನೀತಿ, ಮಾಡಿಕೊಂಡಿರತಕ್ಕ ಕಾರ್ಯ ಅದು ಜನಗಳಿಗೆ ಮುಟ್ಟುವ ಹಾಗೆ ಆಗಬೇಕು. ಸರ್ಕಾರ ತೀರ್ಮಾನ ಮಾಡುವುದಕ್ಕೂ ಮತ್ತು ಜನಗಳಿಗೆ ಸರ್ಕಾರದಿಂದ ಕೊಡತಕ್ಕ ಸಹಾಯ ಸೇರುವುದಕ್ಕೂ ಮಧ್ಯೆ ಬಹಳ ತೊಂದರೆಗಳಾಗುತ್ತವೆ. ಅಂಥಾದ್ದನ್ನು ಮೊದಲೇ ತಡೆಗಟ್ಟಬೇಕು. ಏಕೆಂದರೆ ಸರ್ಕಾರದ ಸಹಾಯ ಸಕಾಲದಲ್ಲಿ ಕೂಡಲೇ ಬಡ ರೈತರ ಅದರಲ್ಲೂ ಪ್ರವಾಹ ಪೀಡಿತರಾಗಿ ನೊಂದವರ ಕೈ ಸೇರುವುದಿಲ್ಲ. ಮಾನವೀಯತೆಯ ದೃಷ್ಟಿಯಿಂದ ಈ ಕೆಲಸ ಕಾರ್ಯಗಳು ಆಗಬೇಕಾಗಿವೆ. ನೊಂದವರಿಗೆ ಹೆಚ್ಚಿನ ಸಹಾಯವಾಗಬೇಕು. ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಉತ್ತರ ಕರ್ನಾಟಕ ಪ್ರವಾಸ ಮಾಡಿ ಅಲ್ಲಿನ ಭೀಕರವಾದ ದೃಶ್ಯವನ್ನು ಮತ್ತು ಅಲ್ಲಿನ ಸಂಸಾರದವರ ಕಷ್ಟ ಸ್ಥಿತಿಯನ್ನು ನೋಡಿ ನಮ್ಮ ಸಂಸಾರಗಳಲ್ಲಿ ಆ ರೀತಿ ತೊಂದರೆಯಾಗಿದ್ದರೆ ನಮ್ಮ ಜನ ಎಷ್ಟು ಸಂಕಟಪಡುತ್ತಿದ್ದರು ಎಂಬುದನ್ನು ಇಲ್ಲಿ ವ್ಯಕ್ತಮಾಡಿದ್ದಾರೆ. ಆದುದರಿಂದ ಸರ್ಕಾರದವರು ಮಾನವೀಯತೆಯ ದೃಷ್ಟಿಯಿಂದ ಏನು ಸಹಾಯವನ್ನು ಕೊಡಬೇಕೋ ಆ ದೃಷ್ಟಿಯಿಂದ

(ಶ್ರೀ ಎ. ಆರ್. ಬದರೀನಾರಾಯಣ್)

ನೊಂದವರಿಗೆ ಸಹಾಯ ಮಾಡಬೇಕೆಂದು ನಾನು ಹೇಳಿ ಮಾನ್ಯ ಕಂದಾಯ ಮಂತ್ರಿಗಳು, ಅರಣ್ಯ ಶಾಖಾ ಸಚಿವರು ಮತ್ತು ಇತರ ಸಚಿವರುಗಳು ಈ ಬಗ್ಗೆ ಇಷ್ಟು ಶ್ರದ್ಧೆ ಆಸಕ್ತಿ ವಹಿಸಿ ಪರಿಹಾರ ಕ್ರಮಗಳನ್ನು ಕೈಗೊಂಡಿದ್ದಕ್ಕೋಸ್ಕರ ನಾನು ಅವರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿ ಇನ್ನೂ ವಿಶೇಷವಾಗಿ ಪರಿಹಾರ ಕ್ರಮಗಳನ್ನು ಪ್ರವಾಹಪೀಡಿತ ಪ್ರದೇಶಗಳಲ್ಲಿ ಬಹಳ ಕ್ಷಿಪ್ರವಾಗಿ ಕೈಗೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಬಿ. ಮಲ್ಲಾರಾಧ್ಯ.—ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ. ಈಗ 10–45ಕ್ಕೆ ಎದ್ದು ಪುನಃ 11–30 ಗಂಟೆಗೆ ಸೇರೋಣ. ಏಕೆಂದರೆ ಈ ದಿನ ಪ್ರಧಾನಮಂತ್ರಿಗಳು ಬರುತ್ತಾರೆ. ಅದಕ್ಕೋಸ್ಕರ ಅಲ್ಲಿಗೆ ಹೋಗಬೇಕಾಗಿದೆ ಎಂದು ಸರ್ಕಾರದವರು ಹೇಳುತ್ತಾರೆ. ಆದುದರಿಂದ ಈಗ ಸಭೆಯನ್ನು ಅಡ್ಜರ್ನ್ ಮಾಡೋಣ. We will have two hours from 11–30 A.M.

Sri KADIDAL MANJAPPA.—I have no objection

ಅಧ್ಯಕ್ಷರು.—ಈಗ ನಾವು ಹತ್ತೂಕಾಲು ಗಂಟೆಗಿಂತ ಹತ್ತೂವರೆಗೆದ್ದು ಮತ್ತೆ ಹನ್ನೊಂದು ಮುಕ್ಕಾಲು ಘಂಟೆಗೆ ಸಭೆ ಸೇರೋಣ. ಹಾಗೆ ಸೇರಿ ಈ ದಿವಸ ಈ ವಿಚಾರವನ್ನು ಪೂರ್ತಿಯಾಗಿ ಮುಗಿಸಿಬಿಡೋಣ.

(ಸಭೆಯಲ್ಲಿ ಎಲ್ಲರೂ ಆಗಬಹುದೆಂದರು).

9-30 A.M.

ಶ್ರೀ ಬಿ. ಜಿ. ಖೋತ್ (ಸಡಲಗ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕರು ಈ ಫ್ಲಡ್ ಸಿಚುಯೇಷನ್ ಮೇಲೆ ಮಾತನಾಡಿ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಆದರೆ ನಾನು ಒಂದೇ ಒಂದು ವಿಷಯವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದಿದ್ದೆ. ಆದರೆ ಆ ವಿಷಯವನ್ನೂ ಸಹ ಈ ದಿವಸ ಮುಂಚಾನೆ ಶ್ರೀ ಶ್ರೀನಿವಾಸಶೆಟ್ಟರು ಹೇಳಿ ಮುಗಿಸಿಬಿಟ್ಟರು. ಆದುದರಿಂದ ಈಗ ನನಗೆ ಅಂಥ ಹೇಳಬೇಕಾದ ವಿಚಾರಗಳೇನೂ ಉಳಿದಿಲ್ಲ. ನಾನೀಗ ಈಗಾಗಲೇ ಕೆಲವರೇನು ಹೇಳಿದ್ದಾರೆ ಅದೇ ವಿಚಾರಗಳನ್ನು ಮತ್ತೊಮ್ಮೆ ಪುನರಾವರ್ತಿಮಾಡಿ ಈ ಸಭೆಯ ಕಾಲವನ್ನು ಹರಣಮಾಡಲು ಬಯಸುವುದಿಲ್ಲ. ಆದರೆ ನಾನೀಗ ಸರ್ಕಾರಕ್ಕೆ ಕೇವಲ ಒಂದೇ ಒಂದು ಸೂಚನೆಯನ್ನು ಕೊಡಬೇಕೆಂದಿದ್ದೇನೆ. ಈ ದಿವಸ ಸರ್ಕಾರದವರು ಈ ಫ್ಲಡ್ ಹಾವಳಿಯನ್ನು ತಡೆಗಟ್ಟಲು ಒಂದು ಶಾಶ್ವತವಾದ ಪ್ಲಾನನ್ನು ಹಾಕಿಕೊಳ್ಳಬೇಕಾಗಿದೆ. ಸರ್ಕಾರದವರು ಎಲ್ಲಿಯ ತನಕ ಈ ದೊಡ್ಡ ದೊಡ್ಡ ನದಿಗಳಿಗೆ ಫ್ಲಡ್ ಹ್ಯಾವಕ್ಸ್ ಬಗ್ಗೆ ಅವನ್ನು ತಡೆಗಟ್ಟತಕ್ಕ ಒಂದು ಯೋಜನೆಯನ್ನು–ಪ್ಲಾನನ್ನು ಹಾಕಿರುವ ವಿಚಾರ ಮಾಡುವುದಿಲ್ಲವೋ ಅಲ್ಲಿಯ ತನಕ ನಾವು ಈ ರಿಸ್ಕುಗಳಿಂದ ಮುಕ್ತರಾಗಲು ಶಕ್ಯವಿದೆ. ಇಲ್ಲಿಗೆ ಎರಡು ವರ್ಷಗಳಿಂದಲೂ ಈ ಸಂಬಂಧವಾದ ಒಂದು ಯೋಜನೆ ಸರ್ಕಾರದವರ ಮುಂದೆ ಇದ್ದೇಇದೆ. ಆದರೆ ಅದಿನ್ನೂ ಏನೂ ಆಗಿಲ್ಲ. ಫ್ಯಾಮಿನ್ ರಿಲೀಫ್ ಬಿಲ್ಲಿನ ಸಂಬಂಧವಲ್ಲಿ ಈ ಒಂದು ಆಲೋಚನೆ ಬಂದಿದೆ. ಅದಕ್ಕಾಗಿ ನಾನೀಗ ಸೂಚನೆ ಮಾಡುವುದೇನೆಂದರೆ— ಸರ್ಕಾರದವರು ಕೂಡಲೇ ತಮ್ಮಲ್ಲಿರತಕ್ಕ ಇಂಜಿನಿಯರುಗಳ ಸಹಾಯದಿಂದ ಮತ್ತು ಎಕ್ಸ್‌ಪರ್ಟ್‌ಗಳ ಸಹಾಯದಿಂದ ಒಂದು ಪ್ಲಾನನ್ನು ತಯಾರಿಸಬೇಕು. ಈ ಬಗ್ಗೆ ಒಂದು ಪರ್ಮನೆಂಟ್ ಪ್ಲಾನೇ ತಯಾರಾಗಬೇಕು. ಇದಕ್ಕೆ ಸರ್ಕಾರದವರು ಒಂದು ಫ್ಲಡ್ ರಿಲೀಫ್ ಫಂಡನ್ನೂ ತಯಾರು ಮಾಡಲಿ. ಆ ರೀತಿ ಪರ್ಮನೆಂಟ್ ರಿಲೀಫನ್ನು ನಾವು ಆಲೋಚನೆ ಮಾಡಬೇಕೇ ಶಿವಾಯಿ ಅದನ್ನು ಕೈಬಿಟ್ಟುಕೊಂಡು ಹೀಗೆಲ್ಲಾ ಕೇವಲ ಅಡ್ ಹಾಕ್ ಮೆಜರ್‌ಗಳಿಂದ ಅನುಕೂಲ ಮಾಡುತ್ತೇವೆಂದು ಹೇಳಿದರೆ ಇವುಗಳಿಂದೇನೂ ಪ್ರಯೋಜನವಾಗುವುದಿಲ್ಲ. ಈಗಾಗಲೇ ಈ ವಿಚಾರದಲ್ಲಿ ಬಹಳ ಚರ್ಚೆನಡೆದಿದೆ. ಆದುದರಿಂದ ಸರ್ಕಾರದವರು

ಅದಷ್ಟುಬೇಗ ಅ ಫ್ಯಾಮಿನ್ ರಿಲೀಫ್ ಬಿಲ್ಲನ್ನು ಪಾಸ್ ಮಾಡಿಸಿ, ತನ್ಮೂಲಕ ಒಂದು ಬೋರ್ಡನ್ನು ರಚಿಸಿ—ನಮ್ಮಲ್ಲಿ ಎಷ್ಟು ದೊಡ್ಡ ದೊಡ್ಡ ನದಿಗಳಿವೆ, ಎಷ್ಟು ಸ್ಕೀಮುಗಳಿವೆ, ಅವುಗಳ ಕ್ಯಾಚ್‌ಮೆಂಟ್ ಎರಿಯಾ ಎಷ್ಟಿದೆ ಎಂಬ ಇತ್ಯಾದಿ ವಿಷಯಗಳ ಬಗ್ಗೆ ಒಂದು ಮಾಹಿತಿ ಪಡೆಯಲು ಸಂಪೂರ್ಣ ಸರ್ವೆ ಮಾಡಿಸಬೇಕು. ಅನಂತರ ಆ ಬೋರ್ಡಿನವರು ಅವರ ಸ್ಕೀಮುಗಳನ್ನು ಅಗತ್ಯವಾಗಿರತಕ್ಕ ಕಡೆ ರಿವೈಜ್‌ಮಾಡಿ ಪರ್ಮನೆಂಟ್ ಮೆಜರ್ಸನ್ನು ಅವರು ಕೂಡಲೆ ಕೈಗೊಳ್ಳಬೇಕು. ಆದರೆ ನನ್ನ ತಾಲ್ಲೂಕಿನಲ್ಲಿ ಹೆಚ್ಚು ನಷ್ಟವಾಗಿದೆ, ಸರ್ಕಾರದವರು ಹೆಚ್ಚಿನ ಸಹಾಯ ನೀಡಬೇಕೆಂಬ ಉದ್ದೇಶಕ್ಕಾಗಿ ನಾನು ಈಗ ಮಾತನಾಡುತ್ತಿಲ್ಲ. ಸರ್ಕಾರದವರು ಪ್ರತಿಯೊಂದು ಭಾಗದಲ್ಲೂ ಸ್ಥಳ ಪರಿಶೀಲನೆಮಾಡಿ ಜನರಿಗೆ ಸೂಕ್ತ ಸಹಾಯ ನೀಡಿದರೆ ಸಾಕು. ಆದರೆ ನಾನೀಗ ಒಂದು ಅತಿ ಹೆಚ್ಚಿನ ಸಂಗತಿಯನ್ನು ಅಂದರೆ ಕೇವಲ ಈಗ ಅರ್ಧಗಂಟೆಗೆ ಹಿಂದೆ ನನಗೆ ನಮ್ಮ ನಿಪ್ಪಾಣಿ ಕ್ಷೇತ್ರದಿಂದ ಬಂದಿರತಕ್ಕ ಜನರು ತಂದಿರುವ ವಿಚಾರವನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಅಂದರೆ ದಾರವಾಡದಿಂದ ಈಚೆಗೆಲ್ಲ, ಅತ್ತಾಚೆಗೆ ಪೂನಾ-ಬೆಂಗಳೂರು ರೈಲ್ವೆ ಲೈನು ಕತ್ತರಿಸಿ ಈ ದಿವಸ ಎಕ್ಸ್‌ಪ್ರೆಸ್‌ಗಾಡಿ 10 ಗಂಟೆ ಲೇಟಾಗಿದೆಯಂತೆ. ಹೀಗೆಲ್ಲಾ ಅಲ್ಲಿ ಪ್ರವಾಹದ ಹಾವಳಿಯಿನ್ನೂ ತಗ್ಗಿಲ್ಲ. ಜನರು ಆ ಭಾಗದಲ್ಲಿ ಈಗಾಗಲೇ 2-3 ಆವರ್ತಿ ಬೀಜ ಬಿತ್ತಿ ಬೆಳೆಗಳಾಗದೆ ಫಸಲನ್ನು ಕಳೆದುಕೊಂಡಿದ್ದಾರೆ. 2-3 ಸಾರಿ ಬಿತ್ತನೆ ಮಾಡಿದರೂ ಮೊಳಕೆ ಮೇಲಕ್ಕೇಳಲು ಅವಕಾಶ ಸಿಕ್ಕದೆ ಮೊಳಕೆಗಳೆಲ್ಲ ನೀರಿನಲ್ಲಿ ಕೊಳೆತು ಹೋಗಿವೆ. ಬೆಳೆ ಹಾಳಾದಂತಾಯಿತು. ಹೀಗಾಗಿ ಈ ವರ್ಷ ಅಲ್ಲಿ ಸೇಂಗಾ ಮತ್ತು ಜೋಳದ ಬೆಳೆಗಳೆಲ್ಲ ಸಂಪೂರ್ಣವಾಗಿ ಹೋದಂತಾಗಿದೆ. ಅದಕ್ಕಾಗಿ ಸರ್ಕಾರದವರು ಆ ಭಾಗದ ಜನರಿಗೆ ಜಾಗ್ರತೆ ಬಿತ್ತನೆ ಬೀಜಗಳನ್ನೊದಗಿಸಬೇಕಾಗಿದೆ. ಇನ್ನೂವರೆಗೂ ಆ ಬಾಗದಲ್ಲಿ ಸರ್ಕಾರದವರು ಜನರಿಂದ ಲ್ಯಾಂಡ್ ರೆವಿನ್ಯೂ-ಸರ್‌ಛಾರ್ಜನ್ನು ವಸೂಲ್ಮಾಡುತ್ತಿದ್ದಾರೆ. ಇದನ್ನು ನಿಲ್ಲಿಸಲು ಸರ್ಕಾರದವರು ಕೂಡಲೇ ಹುಕುಂ ಮಾಡಬೇಕು.

ಇನ್ನು ಎರಡನೆಯದಾಗಿ ಈ ಫ್ಲಡ್ ಹ್ಯಾವಕ್ಕಿನ ಬಗ್ಗೆ ಅನೇಕ ಮೆಜರ್ಸುಗಳನ್ನು ಕೈಗೊಂಡಿದ್ದೇವೆಂದು ಸರ್ಕಾರದವರು ಹೇಳಬಹುದು. ಆದರೆ ಈ ಬಗ್ಗೆ ಅವರು ತೀವ್ರ ಗಮನಕೊಟ್ಟು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳದೆ ಜನರ ಕಣ್ಣು ಒರೆಸತಕ್ಕ ಕೆಲಸ ಮಾಡಿದ್ದೇ ಆದರೆ ಮುಂದೆ ಇದರ ಕಾನ್ಸಿಕ್ವೆನ್ಸನ್ನು ಅವರು ಹೆಚ್ಚಾಗಿ ಅನುಭವಿಸಬೇಕಾಗುತ್ತದೆ. ಈ ವರ್ಷವಂತೂ ಅಲ್ಲಿ ಬೆಳೆಗಳೆಲ್ಲ ಹೋದಂತೆ ಆಯಿತು. ಇದು ಈ ವರ್ಷ ಆ ರೈತರಿಗೆ ರೆವೆನ್ಯೂ ವಸೂಲಿಗಂತೂ ಹೆಚ್ಚು ಕಷ್ಟವಾಗಬಹುದು. ಅಲ್ಲದೆ ಮುಂದಿನ ವರ್ಷದಲ್ಲಾದರೂ ಆ ಜನರು ಬೆಳೆ ಬೆಳೆಯಲು ಈಗಿನಿಂದಲೇ ಅವರಿಗೆ ಅನುಕೂಲಗಳನ್ನೊದಗಿಸಬೇಕು. ಈ ಅಂಶವನ್ನು ಸರ್ಕಾರದವರು ತಾತ್ಸಾರ ಮಾಡಿದರೆ ಮುಂದಿನ ವರ್ಷದ ಪರಿಣಾಮ ಇನ್ನೂ ಭೀಕರವಾಗಬಹುದು. ಸದ್ಯಕ್ಕೆ ಈ ಸಂದರ್ಭದಲ್ಲಿ ನಾನು ಮಾನ್ಯ ಮಂತ್ರಿಗಳೆಲ್ಲರ ಗಮನಕ್ಕೆ ಒಂದು ವಿಚಾರವನ್ನು ತರಬೇಕಾಗಿದೆ. ಇತರೆಯವರು ನಾನು ಹೇಳತಕ್ಕ ವಿಚಾರದ ಬಗ್ಗೆ ಹಾಸ್ಯ ಮಾಡಬಹುದು. ಆದರೆ ಅಂಥ ಹಾಸ್ಯಗಳಿಗೆ ಆಸ್ಪದವಿಲ್ಲ. ಸರ್ಕಾರದವರು ಮತ್ತು ಎಲ್ಲರೂ ಪ್ರತಿಯೊಂದು ದೇವಸ್ಥಾನದಲ್ಲೂ ತ್ರಿಕಾಲ ಪೂಜೆ, ಅರ್ಚನೆ ಮತ್ತು ಮಹಾಶಾಂತಿ ಮಾಡಿಸಬೇಕು. That is the only measure. ಇದನ್ನು ಎಲ್ಲರೂ ಮಾಡಲೇಬೇಕು.

ಅಧ್ಯಕ್ಷರು.—ಆ ಕಾರ್ಯಗಳನ್ನು ನನಸ್ಮರಾವ ನೀವುಗಳು ಮಾದಬೇಕು.

ಶ್ರೀ ಬಿ. ಜಿ. ಜೆ ಲೆತ್.—ಸಾರ್ವಜನಿಕರೆಲ್ಲರೂ ಮಾಡಬೇಕು. ತ್ರಿಕಾಲ ಪೂಜೆಗಳನ್ನು ಮಾಡಿದರೂ ಕೋಲಿ ಒಂದು ಸಾರಿಯಾದರೂ ಎರಡುಕೋಟಿ ಜನರ ಅನುಕೂಲಕ್ಕಾಗಿ ಕ್ಷೇಮಕ್ಕಾಗಿ ಈ ಪೂಜಾದಿ ಕಾರ್ಯಗಳನ್ನು ಮಾಡಬೇಕು. ಇದರಿಂದ ಖಂಡಿತವಾಗಿಯೂ ಹೆಚ್ಚಿನ ಉಪಕಾರವಾಗುತ್ತದೆ. ನಾನು ಒತ್ತಿ ಹೇಳಬೇಕಾದ ಒಂದು ಅತಿಮುಖ್ಯ ವಿಚಾರವೆಂದರೆ ಸರ್ಕಾರದವರು ಆ ಫ್ಯಾಮಿನ್ ರಿಲೀಫ್ ಬಿಲ್ಲನ್ನು ಬೇಗ ತಂದು ಪಾಸ್ ಮಾಡಿಸಿ ಈ ಫ್ಲಡ್ ಹ್ಯಾವಕ್ಕನ್ನು ತಡೆಗಟ್ಟಲು

(ಶ್ರೀ ಬಿ. ಜಿ. ಖೋತ್)

ಸೂಕ್ತ ಕ್ರಮಗಳನ್ನು ಆದಷ್ಟು ಬೇಗ ಕೈಗೊಳ್ಳಬೇಕೆಂದು ಆಗ್ರಹದಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಹಿಂದೆ ಆ ಡಿಸ್ಟ್ರೆಸ್ ರಿಲೀಫ್ ವಿಚಾರ ಚರ್ಚೆ ಆಗುತ್ತಿದ್ದ ಕಾಲಕ್ಕೆ ಈ ವಿಚಾರವಾಗಿ ನಾನು ಅನೇಕ ವಿಷಯಗಳನ್ನಾಗಲೇ ಹೇಳಿದ್ದೇನೆ. ಆ ಬಿಲ್ಲನ್ನು ಜಾರಿಗೆ ತಂದೆ ಈ ವಿಷಯವನ್ನು ಸರ್ಕಾರದವರು ಸಾರ್ಟ್ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಈ ಬಗ್ಗೆ ಅವರು ಒಂದು ನಿಮಿಷ ಸಹಿತ ಲೇಟ್ ಮಾಡಬಾರದೆಂದು ನಾನು ಮತ್ತೊಮ್ಮೆ ಅವರಲ್ಲಿ ಆಗ್ರಹದಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಆದರೆ ಸರ್ಕಾರದವರು ಇತ್ತಕಡೆಗೆ ಹೆಚ್ಚಿನ ಗಮನ ಕೊಡದಿರುವುದು ನನ್ನ ದುರ್ದೈವದ ಸಂಗತಿ!

To forego one month's salary ಬಗ್ಗೆ ನಾನು ಒಂದು ಅಮೆಂಡ್‌ಮೆಂಟ್ ಕಳಿಸಿದ್ದೆ. That was my appeal to all the legislators of the State. It was not binding upon anybody.

Sri S. D. KOTHAWALE.—The suggestion of my learned brother is welcome indeed. But persons who are in possession of properties yielding an annua income of 30 to 40 thousand rupees should contribute much more than their mere salary.

Sri B. G. KHOT.—I am prepared to contribute. I suggest that every legislator should help to the extent possible.

Sri RAMAKRISHNA HEGDE.—As far as this side of the House is concerned, we have taken a decision to contribute half a month's salary towards flood relief. I wish the same gesture is shown by my friends on the other side.

Sri B. G. KHOT.—Thank you. My only suggestion is that we are drawing our salaries from the public exchequer and we have a duty now to stand by the people and help them by foregoing our salaries when they are in distress.

ಅಧ್ಯಕ್ಷರು.—ಈಗ ಶ್ರೀ ಕೋತಾವಳೆಯವರು ಒಂದು ವಿಷಯವನ್ನು ಹೇಳಿದರು. ಕೆಲವರು ನಿಮ್ಮಂಥ ಶ್ರೀಮಂತರು ಬರಿಯ ಒಂದು ತಿಂಗಳ ಸಂಬಳ ಕೊಟ್ಟರೆ ಏನಾಯಿತು: ಬಹಳ ಜಾಸ್ತಿ ಕೊಡಬೇಕು ಎಂದು ಅವರು ಹೇಳಿದರು.

ಶ್ರೀ ಬಿ. ಜಿ. ಖೋತ್.—ನಾನು ಇದರ ಬಗ್ಗೆ ಒಂದು clarification ಕೊಡಬೇಕಾಗಿದೆ. ನಾನು ಇದುವರೆಗೂ ಮನಸ್ಸಿನಲ್ಲಿಟ್ಟುಕೊಂಡಿದ್ದ ವಿಷಯವನ್ನೂ ಸ್ಪಷ್ಟಪಡಿಸಿ ಹೇಳುತ್ತೇನೆ. ನಾನು ಆರಂಭದಿಂದ ಎಷ್ಟು ದಿವಸಗಳವರೆಗೂ ಇಲ್ಲಿರುತ್ತೇನೆಯೋ ಆಗ ನನಗೆ ಮತ್ತು ನನ್ನ ಸಂಗಡ ಅಡಿಗೆ ಮಾಡಲಿಕ್ಕೆ ಬರುವ ಒಬ್ಬ ಸೇವಕನಿಗೆ ಆಗುವ ಖರ್ಚು ಮತ್ತು ಚುನಾವಣೆಗೆ ಖರ್ಚು ಹೊರಡುವತನಕ ಮಾತ್ರ ಸರ್ಕಾರದಿಂದ ಸಂಬಳ, ಭತ್ಯ ವಗೈರೆ ತೆಗೆದುಕೊಂಡು ಅನಂತರ ಉಳಿದವನ್ನೆಲ್ಲ ಇಂತ ಸಾರ್ವಜನಿಕ ಹಿತಕ್ಕೆ ಬಿಟ್ಟುಬಿಡಬೇಕೆಂದು ಸಂಕಲ್ಪ ಮಾಡಿಕೊಂಡಿದ್ದೇನೆ. ಮತ್ತು ಎಷ್ಟು surplus ಆಗುತ್ತದೆಯೋ ಅದನ್ನೆಲ್ಲ ಬಿಟ್ಟುಬಿಡುತ್ತೇನೆ. ಇದು ನನ್ನ ಸಂಕಲ್ಪ.

ಅಧ್ಯಕ್ಷರು.—ಈಗ ನೀವು ಏನು ನಿಯಮವನ್ನು ಹಾಕಿಕೊಂಡಿದ್ದೀರೋ ಅದರ ಪ್ರಕಾರ ನೋಡಿದರೆ charity ಕೊಡಲು ಆಗುವುದಿಲ್ಲವೆಂದು ಅರ್ಥವಾಗುತ್ತದೆ.

ಶ್ರೀ ಬಿ. ಜಿ. ಖೋತ್.—ನಿಶ್ಚಯವಾಗಿ ಆಗುವುದಿಲ್ಲವೆಂದು ಹೇಳಬಲ್ಲೆ. ನಾನು ಸೂಚಿಸಬೇಕೆಂದಿದ್ದ ತಿದ್ದುಪಡಿಯು ಯಾರ ಮೇಲೆಯೂ ನಿರ್ಬಂಧಿತ ವಾದುದಲ್ಲ. ಅದು ಒಂದು ನಮ್ರ ಮನವಿ ಮಾತ್ರ. ನಾವು ಈ ಪ್ರಕಾರವಾಗಿ ಈ ಸಭೆಯಲ್ಲಿ ತೀರ್ಮಾನವನ್ನು ತೆಗೆದುಕೊಂಡರೆ ಅದರಿಂದ ಸಾರ್ವಜನಿಕರಿಗೂ ಸಹ ತಾವು ಉದಾರವಾಗಿ ಸಹಾಯ ಮಾಡಬೇಕು ಎನ್ನುವ ಭಾವನೆ

ಬರಲು ಸಹಾಯವಾಗುತ್ತದೆಂದು ಹೇಳುತ್ತಿದ್ದೇನೆ. ಅವರು ಸದಿಚ್ಛಾಪೂರ್ವಕವಾಗಿ ತ್ಯಾಗ ಮಾಡುವುದಕ್ಕೆ ನಾವೂ ತ್ಯಾಗ ಮಾಡಲು ಸಿದ್ಧರಾಗಬೇಕು. ನಾವು ಪ್ರಜೆಗಳಿಂದ ಓಟನ್ನು ಪಡೆದು ಇಲ್ಲಿಗೆ ಬಂದಿರುವುದರಿಂದ ನಾವು ಇತರರಿಗೆ ಮಾರ್ಗದರ್ಶಕರಾಗಿರಬೇಕು. ಅವರು ಹಣದ ರೀತಿಯಿಂದಲಾಗಲೀ, ವಸತಿ ಅನ್ನವಸ್ತ್ರಾದಿ ರೀತಿಯಿಂದಲಾಗಲಿ ಅಥವಾ ಬೇರೆ ಯಾವ ರೀತಿಯಿಂದಾಗಲಿ ಅವರು ಸಹಾಯ ಮಾಡಬಹುದೋ ಆ ರೀತಿ ಆಗಲಿಕ್ಕೆ ಅನುಕೂಲ ಮಾಡಿಕೊಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ಈಗ ಮೂರು ದಿನಗಳಿಂದ ಬೇರೆ ಬೇರೆ ನಮ್ಮ ಸ್ನೇಹಿತರು ಈ ಬಗ್ಗೆ ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಯಾವ ಪಕ್ಷದ ಜನರೇ ಕೊಟ್ಟಿರಲಿ, ಆ ಎಲ್ಲ ಸೂಚನೆಗಳನ್ನು ಕ್ರೋಢೀಕರಿಸಿ ಅವುಗಳಲ್ಲಿ ತೀರ್ಮಾನ ಯಾವುದರ ಬಗ್ಗೆ ಅಗತ್ಯವೋ ಅದನ್ನು ತೆಗೆದುಕೊಂಡು ಆ ಬಗ್ಗೆ ಕ್ರಮ ಕೈಗೊಳ್ಳುತ್ತಾರೆಂದು ನಾನು ನಂಬುತ್ತೇನೆ. ಮೊದಲನೆಯದಾಗಿ, ಈ ರಾಜ್ಯದ ಪ್ರತ್ಯೇಕ ಜಿಲ್ಲೆಗಳಲ್ಲ ಜನರು ಅನೇಕ ಬಗೆಯ ದುಃಖಕ್ಕೆ ಈಡಾಗಿದ್ದಾರೆ. ಬೇರೆ ಬೇರೆ ಜಿಲ್ಲೆಯೊಳಗಿನ ವಿಷಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಧಾರವಾಡ ಜಿಲ್ಲೆಯ ಮಟ್ಟಿಗೆ ವಿಷಯ ಇಲ್ಲಿ ಚರ್ಚೆಗೆ ಬಂದ ಹಾಗೆ ಕಾಣಿಸಲಿಲ್ಲ. ಇಂದು ''ಸಂಯುಕ್ತ ಕರ್ನಾಟಕ'' ಪತ್ರಿಕೆಯಲ್ಲಿ ಈ ಕುರಿತು ಒಂದು ಪ್ರಕಟಣೆ ಪ್ರಸಿದ್ಧಿಯಾಗಿದೆ. ಆ ಪ್ರಕಟಣೆ ಓರ್ವ ಮಂತ್ರಿಗಳದ್ದು. ಆ ಮಂತ್ರಿಗಳು ಸರ್ಕಾರಕ್ಕೆ ಕೊಟ್ಟಂಥ ಮನವಿ ಕಾರ್ಯಕಾರೀಯಾಗಿದೆಯೋ ಇಲ್ಲವೋ ಗೊತ್ತಾಗಲಿಲ್ಲ! ಆದರೆ ಮಂತ್ರಿಗಳು ಸರ್ಕಾರಕ್ಕೆ ಮಾಡಿದ ರಿಪೋರ್ಟ್ ಹೊರಗೆ ಪ್ರಸಿದ್ಧವಾಗಬೇಕಾದರೆ ಅದಕ್ಕೆ ಕಾರಣ ನಿರಾಶಾ ಬಾವನೆಯೋ ಹೇಗೋ ! ಮಂತ್ರಿ ಮಂಡಲದ ಸದಸ್ಯರ ಮೂಲಕ ಈ ರೀತಿ ಏಕೆ ಪ್ರಸಿದ್ಧಿ ಆಯಿತು ಎನ್ನುವುದು ಅನುಮಾನಕ್ಕೆ ಆಸ್ಪದವಾಗಿದೆ. ಧಾರವಾಡ ಜಿಲ್ಲೆಯ ಮಟ್ಟಿಗೆ ಸರ್ಕಾರದವರು ಅವಸರವಸರವಾಗಿ ಅಥವಾ ವೇಳೆಗೆ ಸರಿಯಾಗಿ ಕ್ರಮಗಳನ್ನು ಕೈಗೊಳ್ಳಲಿಲ್ಲವೆನ್ನುವ ಕಾರಣಕ್ಕಾಗಿ, ಮಂತ್ರಿಗಳು ಆ ಬಾಗದಿಂದ ಆರಿಸಿಬಂದಂತಹ ಜವಾಬ್ದಾರಿ ಯಿರುವುದರಿಂದ ಈ ರೀತಿ ಪ್ರಸಿದ್ಧಪಡಿಸಿದರೇ ಯಾವುದೂ ಗೊತ್ತಾಗುವುದಿಲ್ಲ. ಒಟ್ಟಿನಲ್ಲಿ ಆ ಪ್ರಕಟಣೆಯನ್ನು ನೋಡಿದರೆ ಅದರಲ್ಲಿ ಮಾಡಿದ ಸೂಚನೆಗಳು, ಹೇಳಿದ ಸಂಕಟಗಳ ವಾಸ್ತವಿಕ ಪರಿಸ್ಥಿತಿಗೆ ಹೊಂದಿಕೊಂಡಿವೆ. ಅವುಗಳ ಕಾರ್ಯಾಚರಣೆ ಮಾತ್ರ ಇನ್ನು ಆದಂತಿಲ್ಲ.

ಶ್ರೀ ಕೆ. ಎಫ್. ಪಾಟೀಲ್.—ನಾನು ಯಾವುದೇ ಪ್ರಕಟಣೆಯನ್ನು ಕೊಟ್ಟಿಲ್ಲ. ರೆವೆನ್ಯೂ ಮಂತ್ರಿಗಳಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ರಿಪೋರ್ಟ್ ಕೊಟ್ಟಿರುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ.—ಆಹಾರ ಮಂತ್ರಿಗಳು ಧಾರವಾಡ ಜಿಲ್ಲೆಯ ಪರಿಸ್ಥಿತಿಯನ್ನು ನಿವೇದಿಸಿ, ಪರಿಹಾರ ಕ್ರಮವನ್ನು ಸೂಚಿಸಿದ್ದಾರೆ. ಈ ವಿಚಾರ ''ಸಂಯುಕ್ತ ಕರ್ನಾಟಕ'' ದೊಳಗೆ ಎರಡು ಕಾಲಂಗಳಲ್ಲ ಬಂದಿದೆ.

ಒಬ್ಬ ಸದಸ್ಯರು.—ಅದು ತಪ್ಪು ಎಂದು ಮಾನ್ಯ ಸದಸ್ಯರ ಅಭಿಪ್ರಾಯವೋ?

ಶ್ರೀ ಕೆ. ಎಫ್. ಪಾಟೀಲ್.—ಇವೊತ್ತು ಪತ್ರಿಕೆಗಳಲ್ಲಿ ಅನೇಕ ಸುದ್ದಿಗಳು ಪ್ರಕಟವಾಗುತ್ತವೆ. ಮಾತನಾಡುವಾಗ, ಚರ್ಚೆ ಮಾಡುವಾಗ ಕೆಲವು ವಿಷಯಗಳು ಹೊರಬೀಳುತ್ತವೆ. ಆ ಪ್ರಕಾರವಾಗಿ ಏಕೆ ಹಾಕಿದ್ದೀರೆಂದು ವಿಚಾರ ಮಾಡಿಸೋಣ. ಆ ಜಿಲ್ಲೆಯ ಪರಿಸ್ಥಿತಿ ನಿಜವಾಗಿ ಆ ರೀತಿ ಇದೆ. ಪೂರ್ತಿಯಾಗಿ ಅಂದಾಜು ಮಾಡುವುದಕ್ಕೆ ಶಕ್ಯವಿಲ್ಲ. ಹಳ್ಳಿಗಳಿಗೆ ಹೋಗುವುದಕ್ಕೆ ಕೂಡ ಶಕ್ಯವಿಲ್ಲ ಎನ್ನುವ ದೃಷ್ಟಿಯಿಂದ ಒಂದು ವರದಿಯನ್ನು ತಯಾರಿಸಿ ರೆವೆನ್ಯೂ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳಿಗೆ ಕಳಿಸಿಕೊಟ್ಟಿದ್ದೇನೆ. ಅದನ್ನು ಅವರು ಲಕ್ಷ್ಯಕ್ಕೆ ತೆಗೆದುಕೊಂಡಿದ್ದಾರೆಂದು ಭಾವಿಸುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ.—ನಾನು ಪ್ರೊಸೀಜರ್ ವಿಷಯದಲ್ಲಿ ಹೇಳುತ್ತಿಲ್ಲ. ಏನೋ ಒಂದು ಭಾರಿ ವೇದನೆಯಿಂದ ಹೊರಗೆ ಬಿದ್ದಂತೆ ವಾಸನೆ ಬರುತ್ತಿದೆ. ಅಸಹಾಯಕ ಪರಿಸ್ಥಿತಿ...

ಶ್ರೀ ಜೆ. ಬಿ. ಮಲ್ಲಾರಾಧ್ಯ.—ದುರ್ವಾಸನೆಯೋ ಸುವಾಸನೆಯೋ ಎಂದು ಹೇಳಲಿಲ್ಲ, ಸ್ವಾಮಿ ? (ನಗು).

ಅಧ್ಯಕ್ಷರು.—ಅದೇನೇ ಇರಲಿ ಈಗ facts ಮೇಲೆ ಮಾತನಾಡಿದರೆ ಒಳ್ಳೆಯದು.

ಶ್ರೀ ಎ. ಜೆ. ದೊಡ್ಡಮೇಟಿ.—ಅದರ ಗಾಂಭೀರ್ಯವನ್ನು ಮಾತ್ರ ಅರ್ಥಮಾಡಿಕೊಳ್ಳಬೇಕು. ಪ್ರಕಟನೆಯ ಹಿನ್ನೆಲೆ ಏನು ಕಾಣುವುದೆಂದರೆ ಸರ್ಕಾರ ತಮ್ಮ ಮಂತ್ರಿ ಮಂಡಲದ ಒಬ್ಬ ಸದಸ್ಯರು ಮಾಡಿದ ಸೂಚನೆಗಳನ್ನು ಅಮಲಿನಲ್ಲಿ ತರಲಿಲ್ಲವೆನ್ನುವ ಭಾವನೆ ಇದೆಯೋ ಗೊತ್ತಾಗಲಿಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಪ್ರತಿಯೊಬ್ಬ ಮಂತ್ರಿಗಳೂ ಒಂದೊಂದು ಜಿಲ್ಲೆಗೆ ಹೋಗಿ ವಿಷಯ ತಿಳಿದು ಕೊಳ್ಳಬೇಕೆಂದು ನಾನೇ ಈ ಸಭೆಯಲ್ಲಿ ಸಲಹೆ ಮಾಡಿದ್ದೇನೆ. ಆ ಪಕ್ಷದವರೇ ಈ ರೀತಿ ಹೇಳುವುದು ಸರಿಯಾಗಿದೆಯೇ?

ಒಬ್ಬ ಸದಸ್ಯರು.—ಆ ಮಂತ್ರಿಗಳು ಹೋಗಬಾರದು ಎಂದಿರಬಹುದು.

ಶ್ರೀ ಎ. ಜೆ. ದೊಡ್ಡಮೇಟಿ.—ಆ ಮಂತ್ರಿಗಳು ಹೋಗಬಾರದೆಂದಲ್ಲ. ಅವರು ಅಲ್ಲಿಗೆ ಹೋದುದಕ್ಕೆ ಬಹಳ ಸಂತೋಷ ಪಡುತ್ತೇನೆ.

ಶ್ರೀ ಕೆ. ಎಫ್. ಪಾಟೀಲ್.—ನಾನು ಹತ್ತು ಹನ್ನೆರಡು ದಿವಸ ಪ್ರವಾಸಮಾಡಿದ್ದೇನೆ. ಹೆಚ್ಚಿಗೆ ಪಬ್ಲಿಸಿಟಿ ಕೊಟ್ಟಿಲ್ಲ. ದುರ್ದೈವ ಹೇಗೆ ಹೇಗಿದೆಯೋ ಗೊತ್ತಿಲ್ಲ. ಪರಿಸ್ಥಿತಿ ಬಹಳ ಕೆಟ್ಟಿದೆ ಎಂದು ಮಾತ್ರ ಹೇಳುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ.—ಮಂತ್ರಿಗಳು ಮಾಡಿದ್ದು....

Sri KADIDAL MANJAPPA.—I think we can stop at it. I request Sri A. J. Doddameti to proceed further.

ಅಧ್ಯಕ್ಷರು.—ನಿನ್ನೆಯೇ ನಾನು ಮುಗಿಸಿದ್ದರೆ ಚೆನ್ನಾಗಿರುತ್ತಿತ್ತು. ಈ ತರಹ ಗದ್ದಲವೇ ಆಗುತ್ತಿರಲಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಶ್ರೀಮಾನ್ ಕೆ. ಎಫ್. ಪಾಟೀಲರು ಸೂಚಿಸಿರುವ ಮೂರು-ನಾಲ್ಕು ಅಂಶಗಳ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಂಡಿದ್ದಾರೆಯೇ ಹೇಗೆ ? ಕಾಗದದೊಳಗೆ ಕ್ರಮ ತೆಗೆದುಕೊಳ್ಳುವುದಲ್ಲ, ಅದು ಪ್ರತ್ಯಕ್ಷ ಮುಟ್ಟಿದೆಯೋ ಹೇಗೆ? ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ಕಾಳು, ತಗಡು, ಬಟ್ಟೆ ಮುಂತಾದುವನ್ನು ಕಳಿಸಿದ್ದಾರೆನ್ನುವುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ latest ಭಾತ್ಮಿ ಹೇಳಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಧಾರವಾಡ ಜಿಲ್ಲೆಯಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚಿಗೆ ದನಗಳು ಬಯಲಿನಲ್ಲಿ ಕೂಳು ಇಲ್ಲದೆ ನಿಂತಿವೆ. ಜನಗಳಿಗೆ ಸಾಮೂಹಿಕ ಅಡಿಗೆ ವ್ಯವಸ್ಥೆ ಮಾಡಿದ್ದೀರಿ. ಹಾಗೆಯೇ ಈ ದನಗಳಿಗೆ ಎಲ್ಲಿಯಾದರೂ ಗುಡ್ಡಗಾಡು ಪ್ರದೇಶದಲ್ಲಿ ಸರ್ಕಾರದವರು ಸಾಮೂಹಿಕವಾದ ಒಂದು ಗೋಶಾಲೆಯನ್ನು ಏರ್ಪಡಿಸಬೇಕು.

ಜನರ ಪರಿಸ್ಥಿತಿ ಈಗ ಬಹಳ ದಾರುಣವಾಗಿದೆ. ನನಗೆ ಒಂದು ಟೆಲಿಫೋನ್ ಮೆಸೇಜ್ ಬಂದಿದೆ. ಅದರೊಳಗೆ, ಜನರು ದೊಡ್ಡ ಒಡ್ಡಿನ ಕೆಳಗೆ, ತಗ್ಗುತೆಗೆದು, ಮಲಗಿಕೊಂಡು ಅಡಿಗೆ ಮಾಡಿಕೊಂಡು ಕಾಲಕಳೆಯುವ ಪರಿಸ್ಥಿತಿ ಕೆಲವುಕಡೆ ಪ್ರಾರಂಭವಾಗಿದೆಯೆಂದು ತಿಳಿಸಿದೆ. ಶ್ರೀ ವೀರಣ್ಣಗೌಡರು ಧಾರವಾಡ ಜಿಲ್ಲೆಯ ಕೆಲವು ಮಾಹಿತಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಇನ್ನೂ ಹೆಚ್ಚಿನ ವಿವರ ಕೊಡಬೇಕಾಗಿದ್ದಿತು. 75 ಲಕ್ಷ ರೂಪಾಯಿಗಳಷ್ಟು ಈ ಜಿಲ್ಲೆಯಲ್ಲಿ ಹಾನಿಯಾಗಿದೆಯೆಂದು ಹೇಳಿದ್ದಾರೆ. ಇಂತಿಷ್ಟೇ ಹಾನಿಯಾಗಿದೆಯೆಂದು ಹೇಗೆ ನಿರ್ಣಯಮಾಡಿದಿರಿ? ಇದು ವಿಚಾರಮಾಡಬೇಕಾದ ಸಂಗತಿ. ನನ್ನ ಅಭಿಪ್ರಾಯದ ಪ್ರಕಾರ ನಷ್ಟವನ್ನು ಸರಿಯಾಗಿ ಈಗಲೆ ಅಂದಾಜು ಮಾಡುವುದು ಕಷ್ಟ. ಕೆಲವು ಕಾಲಹೋದನಂತರ ಎಲ್ಲಿ ಏನು ಹಾನಿಯಾಗಿ ಏನು ಪರಿಹಾರ ನೀಡಬೇಕು ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಬಹುದು. ಹಾವೇರಿ ತಾಲ್ಲೂಕಿನ ಹತ್ತು ಹಳ್ಳಿಗಳು ಪೂರ ಜಲಮಯವಾಗಿವೆ.

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಫ್ಲಡ್ ಶುರುವಾದ ತಕ್ಷಣ ಇಲ್ಲಿಗೆ ಬಂದಿರುವಂಥ ಮೆಂಬರುಗಳು ತಕ್ಷಣವೇ ಆಯಾ ಸ್ಥಳಗಳಿಗೆ ಹೋಗಿ, ಪ್ರವಾಹದ ಮಾಹಿತಿ ಮಾಡಿಕೊಂಡು ಬಂದು ಅಸೆಂಬ್ಲಿಯಲ್ಲಿ ಹೇಳಿದರೆ ಚೆನ್ನಾಗಿತ್ತು. ಅದನ್ನು ಬಿಟ್ಟು, ಅವರ ಊರಿಗೆ ಹೋಗದೆ, ಇಲ್ಲಿಯೇ ಕುಳಿತುಕೊಂಡು ಭಾಷಣ ಮಾಡಿಬಿಟ್ಟರೆ, ಯಾರ ದೋಷ ಅದು? ಏನು, ಮಿನಿಸ್ಟರುಗಳು ಹೋಗಿಬಿಟ್ಟು ದನಗಳನ್ನು ಕಾಯುವುದಕ್ಕೆ ಆಗುತ್ತದೆಯೇ? ಮೆಂಬರುಗಳು ಅಫೆಕ್ಟೆಡ್ ಸ್ಥಳಗಳಿಗೆ ಏಕೆ ಹೋಗಲಿಲ್ಲ?......

(Sri RAMAKRISHNA HEGDE *rose*).

The Member has yielded. I have not yet completed my speech. I am now on my legs.

ಅಧ್ಯಕ್ಷರು.—ತೀವ್ರ ಮುಗಿಸಿ.

Sri G. N. PUTTANNA.—I will finish because the Member has yielded.

ಶ್ರೀ ಎ. ಜೆ. ದೊಡ್ಡಮೇಟಿ.—ಯೀಲ್ಡ್ ಆಗಿಲ್ಲವೆಂದು ಹೇಳಿಕೊಂಡಿದ್ದೇನೆ. ಅಧ್ಯಕ್ಷರು ಹೇಳಲಿ. ಅವರು ಮುಗಿಸುವುದಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಇಷ್ಟೇ ನನ್ನ ಪ್ರಾರ್ಥನೆ. ಈ ಫ್ಲಡ್ ವಿಚಾರದಲ್ಲಿ ಸರ್ಕಾರದ್ದು ಎಷ್ಟು ಜವಾಬ್ದಾರಿ ಇದೆಯೋ, ಅಷ್ಟೇ ಜವಾಬ್ದಾರಿ ಪ್ರತಿಯೊಬ್ಬ ಮೆಂಬರದೂ ಇದೆ. ಅಸೆಂಬ್ಲಿಗೆ ಬಂದಿರತಕ್ಕಂಥ ಮೆಂಬರುಗಳು ಫ್ಲಡ್ ಬಂದ ತಕ್ಷಣ, ಅಸೆಂಬ್ಲಿ ಬಿಟ್ಟು ಪ್ರವಾಹ ಪೀಡಿತ ಪ್ರದೇಶಗಳಿಗೆ ಹೋಗಿ ಕೆಲಸಮಾಡಿ, ಪರಿಸ್ಥಿತಿ ಪರಿಶೀಲನೆಮಾಡಿ ಏನು ಪರಿಸ್ಥಿತಿ ಇದೆ ಯೆಂದು ಹೇಳಬೇಕಾಗಿತ್ತು. ಸುಮ್ಮನೆ ಇಲ್ಲಿ ಕುಳಿತುಕೊಂಡು ಡಿ. ಎ. ತೆಗೆದುಕೊಂಡು, ಹೋಗುವುದಕ್ಕೆ ಬರುವುದಕ್ಕೆ ಟಿ. ಎ. ತೆಗೆದುಕೊಂಡು, ಮಿನಿಸ್ಟರು ದನ ಕಾಯಲಿ, ಎಂದು ಮುಂತಾಗಿ ಹೇಳಿದರೆ ಏನು ಪ್ರಯೋಜನ? ನಮ್ಮ ಡ್ಯೂಟಿ ಮಾಡಿದ್ದೇವೆಯೇ? ಈ ರೀತಿಯ ವ್ಯಾಖ್ಯಾನ ಬೇಡ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪುಟ್ಟಣ್ಣನವರು ದೊಡ್ಡಮೇಟಿಯವರ ಭಾಷಣ ಕೆಡಿಸಿಬಿಟ್ಟರು.

ಶ್ರೀ ಎ. ಜೆ. ದೊಡ್ಡಮೇಟಿ.—ಅವರು ಸರಿ ಮಾಡಿದರು. ಪಾಪ, ಪುಟ್ಟಣ್ಣನವರು ಇನ್ನೇನು ಮಾಡಿಯಾರು; ಅವರಿಗೆ ಸರಿಯಾದ ಕಲ್ಪನೆ ಇಲ್ಲ. ಪೂರ್ಣ ಗೊತ್ತಿಲ್ಲದೆ ಮಾತನಾಡುವುದು ಕೆಲವರ ಸ್ವಭಾವ ಅದಕೆ ಏನೂ ಮಾಡುವುದಕ್ಕಾಗುವುದಿಲ್ಲ. ಇರಲಿ? ಪ್ರತಿಯೊಬ್ಬ ಮನುಷ್ಯನಿಗೂ, ಮಂತ್ರಿಯೇ ಆಗಲಿ, ಮೆಂಬರೇ ಆಗಲಿ ಮಣ್ಣು ಕುಡಿಯುವ ದನಕಾಯು ಪ್ರಶ್ನೆ ಇರುವುದಿಲ್ಲ.

ನನ್ನ ಮಟ್ಟಿಗೆ ಹೇಳಬೇಕಾದರೆ, ನಾನು ಈಚೆಗೆ 18ನೆಯ ತಾರೀಖು ಬಂದನಂತರ, ಈ ಫ್ಲಡ್ ಬಂದಿದೆಯೆಂದು ಗೊತ್ತಾಯಿತು. ಆಮೇಲೆ ನನಗೆ ಜ್ವರ ಬಂದು ಬಿಟ್ಟಿತು. ಹೀಗಾಗಿ ಪ್ರವಾಸಮಾಡಲಿಲ್ಲ, ದಿನಂಪ್ರತಿ ಸಂಪರ್ಕವನ್ನಿಟ್ಟು ಹೊಸ ಹೊಸ ಮಾಹಿತಿ ತರಿಸಿ, ಇತ್ತೀಚಿನ ಸಂಗತಿ ತರಿಸಿಕೊಂಡು, ತಿಳಿದ ಸಂಗತಿಗಳ ಮೇಲೆ ನಾನು ಮಾತನಾಡುತ್ತಾ ಇದ್ದೇನೆ. ಅದೇನೇ ಇರಲಿ. ಸರ್ಕಾರದವರೇ, ಈ ಜಿಲ್ಲೆಯಲ್ಲಿ 18ಸಾವಿರ ಜನ ನಿರಾಶ್ರಿತರಾಗಿದ್ದಾರೆಂದು ಒಪ್ಪಿಕೊಂಡಿದ್ದಾರೆ. ಆ 18,000 ಜನರಿಗೆ ಯಾವ ರೀತಿ ಪುನರ್ವ್ಯವಸ್ಥೆ ಮಾಡಿದ್ದೀರಿ! ಈ ಎಲ್ಲಾ ಮಾತುಗಳನ್ನೂ ಸರ್ಕಾರದವರು ಹೇಳಬೇಕು.

ಇಲ್ಲಿ ಇನ್ನೊಂದು ಮಹತ್ವದ ಮಾತನ್ನು ವಿಚಾರ ಮಾಡಬೇಕು. ಭೂಕಂಪವಾದಾಗ, ಬಂಡಾಯವಾದಾಗ ನೈಸರ್ಗಿಕ ಆ ವಸ್ತುಗಳು ಒದಗಿದಾಗ ಕೆಲವು ಅಪವ್ಯಯಗಳು ಆಗುವುದಕ್ಕೆ ಅನ್ಪದವಿರುತ್ತದೆ. ಅಂಥ ಅನ್ಪದಗಳು ಎಲ್ಲಿಯಾದರೂ ಅಲ್ಪ ಸ್ವಲ್ಪವಿರುವುದು ಕ್ಷಮ್ಯವಾದೀತು. ಆದರೆ ಬಹಳ ದೊಡ್ಡ ಪ್ರಮಾಣದಲ್ಲಿ, ನಿರಾಶ್ರಿತರ ಹೆಸರಿನಲ್ಲಿ, ಮಧ್ಯಾರಿ ಜನಗಳು ಕೈಯಾಡಿಸುವುದು ಸಂಭವನೀಯ; ಅದು ಅಸಾಧ್ಯವಾದುದಲ್ಲ. ಅದು ಆಗದ ರೀತಿಯಲ್ಲಿ ಒಂದು ವ್ಯವಸ್ಥೆ ಮಾಡಬೇಕು. ಸ್ಥಾನಿಕ ಕಮಿಟಿಗಳೊಳಗೆ, ಸರ್ಕಾರಿ ಅಧಿಕಾರಿಗಳೂ, ಅಧಿಕಾರೇತರರೂ

(ಶ್ರೀ ಎ. ಜೆ. ದೊಡ್ಡಮೇಟಿ)

ಒಳಗೊಂಡ ಸಂಯುಕ್ತ ಕಮಿಟಿ ಇರಬೇಕು. ಈ ಉಭಯುತ್ತರಲ್ಲಿಯೂ ಒಂದು ಪರಸ್ಪರ ಹೊಂದಾಣಿಕೆ ಇದ್ದರೆ ಬಹಳ ಕೆಲಸವಾದೀತು.

ಹಾವೇರಿ ಭಾಗದಂತಹ ಒಂದು ಸಣ್ಣ ಕ್ಷೇತ್ರದಲ್ಲಿ 52 ಹಳ್ಳಿಗಳ ಜನರು ತೊಂದರೆಗೀಡಾಗಿದ್ದಾರೆ. ಸರ್ಕಾರದವರು ಆದಷ್ಟು ಬೇಗನೆ ಪ್ರವಾಹದಿಂದ ಉಂಟಾದ ಪರಿಸ್ಥಿತಿಯನ್ನು ನಿವಾರಣೆ ಮಾಡುವ ಕಾರ್ಯಕ್ಕೆ ತೊಡಗಬೇಕೆಂದು ಹೇಳಿ ತಮ್ಮ ಅಪ್ಪಣೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಅಧ್ಯಕ್ಷರೆ, ಫ್ಲಡ್ ಪರಿಸ್ಥಿತಿಯನ್ನು ಈಗಾಗಲೇ ಎಲ್ಲಾ ಮಂತ್ರಿಗಳು ಮತ್ತು ಉಪ ಮಂತ್ರಿಗಳೂ ಸ್ಥಳಕ್ಕೆ ಭೇಟಿಕೊಟ್ಟು ನೋಡಿದ್ದಾರೆ ಮತ್ತು ರೆವಿನ್ಯೂ ಮಂತ್ರಿಗಳೂ ಮತ್ತು ಪಿ. ಡಬ್ಲ್ಯು. ಮಂತ್ರಿಗಳು ಆ ವಿಷಯದಲ್ಲಿ ಒಂದು ವರದಿಯನ್ನು ಇಟ್ಟಿದ್ದಾರೆ. ಈ ವರದಿ ಅನೇಕ ವಿಷಯಗಳನ್ನು ಒಳಗೊಂಡಿದೆ. ನಿಜವಾಗಿಯೂ ಸರ್ಕಾರದವರು ಪ್ರವಾಹದ ವಿಚಾರದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದಾರೆಂದು ಹೇಳುತ್ತೇನೆ. ಆದರೂ ಸರ್ಕಾರದ ಮೇಲೆ ಕಾನೂನುಗಳನ್ನು ಸಮನ್ವಯ ಮಾಡತಕ್ಕಂಥ ಜವಾಬ್ದಾರಿ ಇರುವಾಗ ಮತ್ತು ಅವುಗಳನ್ನು ಸಮನ್ವಯಗೊಳಿಸತಕ್ಕಂಥ ಒಂದು ಪ್ರೋಗ್ರಾಂ ಈ ಕಾಲದಲ್ಲಿ ಹಾಕಿಕೊಂಡಿರುವಾಗ, ಇದ್ದಕಿದ್ದ ಹಾಗೆಯೇ ತಮ್ಮ ಒಂದು ಪಕ್ಷದ ಕಾರ್ಯ ಕಲಾಪಗಳನ್ನು ನಡೆಸುವುದಕ್ಕೋಸ್ಕರ 29ನೆಯ ತಾರೀಖಿನಿಂದ ಈ ಹೌಸನ್ನು ಆಡ್‌ಜರ್ನ್ ಮಾಡಬೇಕೆಂದಿರುವುದು ನಮಗೆ ನಾಚಿಕೆಗೇಡು. ದೇಶದ ಹಿತದೃಷ್ಟಿಯಿಂದ ನೋಡಿದರೆ, ಈಗಾಗಲೇ ಪ್ರವಾಹದ ಹಾವಳಿ ನಿಂತು ಹೋಗಿದೆ. ಅಲ್ಲದೆ ಈಗ flood situation ನಿಂದ ಆದ ತೊಂದರೆಗಳೆಲ್ಲಾ ದೇವರ ಅನುಗ್ರಹದಿಂದ ನಿವಾರಣೆಯಾಗಿವೆ. ನಿಜವಾಗಿಯೂ ಸಾಧ್ಯವಾದ ಕಡೆಗಳಲ್ಲಿ ಇದರ ಬಗ್ಗೆ ತಕ್ಕ ಕೆಲಸಗಳನ್ನು ಮಾಡುತ್ತಿದ್ದಾರೆ. ಪ್ರವಾಹ ಬರುವುದಕ್ಕೆ ಒಂದೆರಡು ತಿಂಗಳು ಮುಂಚಿತವಾಗಿ ಸರ್ವೆ ಮಾಡಿದ್ದರೇ ಮತ್ತು ಈ ರೀತಿಯಾದ ಮುಂಜಾಗರೂಕತೆ ವಹಿಸಿದ್ದರೆ ಇಷ್ಟು ತೊಂದರೆಗಳಾಗುತ್ತಿರಲಿಲ್ಲ. ಆದರೆ ಈಗಾಗಲೇ ಯಾವ ಕಾರ್ಯಕ್ರಮವನ್ನು ತೆಗೆದು ಕೊಳ್ಳಬೇಕು ಎನ್ನುವುದಕ್ಕೆ ಮಾನ್ಯ ರೆವೆನ್ಯೂ ಮಂತ್ರಿಗಳು, ಮುಖ್ಯ ಮಂತ್ರಿಗಳು ಮತ್ತು ಪಿ. ಡಬ್ಲ್ಯು. ಮಂತ್ರಿಗಳು ಪ್ರವಾಸಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸಲಹೆಗಳನ್ನು ಕೊಟ್ಟು ಕಷ್ಟಕ್ಕೆ ಸಿಕ್ಕಿರುವ ಜನಗಳಿಗೆ ಏನೇನು ಮಾಡಬೇಕೊ ಅದರಂತೆ ಮಾಡುತ್ತಿದ್ದಾರೆ. ಆದುದರಿಂದ ಈ ಸಭೆಯನ್ನು ತಾತ್ಕಾಲಿಕವಾಗಿ ಪೂರ್ಣವಾಗಿ ಮುಚ್ಚಬೇಕೆಂದು ಮಾಡಿರುವುದು ಸರಿಯಲ್ಲ. ಇದರ ಬಗ್ಗೆ ನಮ್ಮ ನಾಯಕರು ಹೇಳಿದಂತೆ ಈ ಹೌಸನ್ನು ಮುಚ್ಚುವುದನ್ನು ನಾನು ತೀವ್ರವಾಗಿ ಪ್ರತಿಭಟಿಸುತ್ತೇನೆ. ಇದರಿಂದ ಸರ್ಕಾರಕ್ಕೆ ಟಿ.ಎ., ಡಿ.ಎ. ನಷ್ಟವಾಗುತ್ತದೆ. ಮತ್ತು ನಮಗೆ ಇಲ್ಲಿ ಅತಿ ಮುಖ್ಯವಾದ ಕಾನೂನುಗಳನ್ನು ಮಾಡತಕ್ಕ ಈ ಕಾಲದಲ್ಲಿ ಈ ರೀತಿ ಮಾಡುವುದನ್ನು ವಿರೋಧ ಪಕ್ಷದವರಾದ ನಾವು ತೀವ್ರವಾಗಿ ವಿರೋಧಿಸುತ್ತೇವೆ. ಆದುದರಿಂದ ಈ ಹೌಸನ್ನು 29ನೆಯ ತಾರೀಖಿನಿಂದ ಮುಂದುವರಿಸುವಂತೆ ಎಂದು ಇಲ್ಲಿ ನಾನು ಹೇಳಬಯಸುತ್ತೇನೆ. ಈ ವಿಷಯದಲ್ಲಿ ಬಹು ಮುಖ್ಯವಾಗಿ ತಾವು ಯೋಚನೆ ಮಾಡುವುದು, ಪ್ರಾಕೃತಿಕವಾಗಿ ನಮ್ಮಲ್ಲಿ ದೈವಿಕವಾಗಿ ಬದಲಾವಣೆಯಾಗುವುದಕ್ಕೆ ಸರಕಾರ ಹೊಣೆಯಲ್ಲ. ಆದರೆ ಮುಂಜಾಗರೂಕತೆಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾದರೆ ಈ ರೀತಿ ನಮ್ಮ ಮುಂದೆ ಇಟ್ಟಿರತಕ್ಕ ವರದಿಯಿಂದ ಜನಗಳಿಗೆ ತೃಪ್ತಿಯಾಗುವುದಿಲ್ಲ. ನಮ್ಮ ಪಕ್ಷದ ಲೀಡರವರು ಹೇಳಿದಹಾಗೆ ಕಾನ್‌ಸ್ಟಿಟ್ಯೂಷನಲ್ಲಾಗಿ ರಚನಾತ್ಮಕವಾದ ಕೆಲಸಕಾರ್ಯಗಳನ್ನು ಮಾಡುವುದಕ್ಕಾಗಿ ಒಂದು ಕಮಿಟಿಯನ್ನು ನೇಮಕ ಮಾಡಿ ಇಂಡಿಯಾ ದೇಶದ flood situationನಿಂದ ಆಗಿರತಕ್ಕ ತೊಂದರೆಗಳನ್ನು ವಿಮರ್ಶೆಮಾಡಿ ಸರಕಾರಕ್ಕೆ ರಿಪೋರ್ಟು ಕೊಟ್ಟಿದ್ದರೆ ಚೆನ್ನಾಗಿದ್ದಿತು. ಮುಖ್ಯವಾಗಿ ಇದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು, ಸಂಬಂಧಪಟ್ಟ ಅಧಿಕಾರವರ್ಗದವರು, ನಮ್ಮ ಸಭೆಯ ಸದಸ್ಯರು, ಮತ್ತು

ವಿರೋಧಪಕ್ಷದ ನಾಯಕರು, ಇವರನ್ನೊಳಕೊಂಡ ಕಮಿಟಿಯನ್ನು ಮಾಡಿ ರಿಪೋರ್ಟನ್ನು ತರಿಸಿ ನಮ್ಮ ಸಭೆಯ ಮುಂದೆ ಇಟ್ಟು ಚರ್ಚೆಯಾಗಿದ್ದರೆ ಸಾಕಾಗಿತ್ತು. ನಾನಾಗಲೇ ಹೇಳಿದಂತೆ ರಚನಾತ್ಮಕವಾದ ಕೆಲಸಕಾರ್ಯಗಳನ್ನು ಮಾಡಲು ಅನುಕೂಲವಾಗುವಂತೆ ಒಂದು ಸಮಿತಿಯನ್ನು ನೇಮಿಸುವುದೊಳ್ಳೆಯದು.

10–00 A.M.

ನಮ್ಮ ಹಾಸನ ಜಿಲ್ಲೆಯ ಪೈಕಿ ಚೆನ್ನರಾಯಪಟ್ಟಣ ಮತ್ತು ಅರಸೀಕೆರೆ ತಾಲ್ಲೂಕುಗಳಲ್ಲಿ ಆಗಿರುವ ನಷ್ಟದ ವಿಚಾರವನ್ನು ನಾನು ಇಲ್ಲಿ ವಿವರಿಸಿ ಹೇಳಬೇಕಾಗಿದೆ. ಈಗೆರಡು ತಿಂಗಳಿಂದ ಮಳೆ ಹೇರಳವಾಗಿ ಬಿದ್ದು ನಮ್ಮ ಜಿಲ್ಲೆಯ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಿಗೆ ಹೆಚ್ಚಿನ ಅನುಕೂಲಗಳಾಗಿವೆ. ಹೇಮಾವತಿ ನಾಲಾ ನಮ್ಮ ತಾಲ್ಲೂಕಿನ 15 ಹಳ್ಳಿಗಳ ಪಕ್ಕದಲ್ಲಿ ಹರಿದುಹೋಗುತ್ತಿದೆ. ಇದನ್ನು ಅಂಕಿಅಂಶಗಳ ಸಮೇತ ಹೇಳುತ್ತಿದ್ದೇನೆ. ಸುಳ್ಳಾಗಿದೆ ಎಂದು ಯಾರಾದರೂ ಹೇಳುವಂತಿದ್ದರೆ, ಅದನ್ನು ರುಜುವಾತುಪಡಿಸಿದರೆ ನಾನು ಸಭೆಯ ಸದಸ್ಯತ್ವಕ್ಕೂ ರಾಜೀನಾಮೆ ಕೊಡುತ್ತೇನೆ. ಸುಳ್ಳಾಗಿದ್ದರೆ ಇಲ್ಲಿ ಹೇಳುವುದಕ್ಕೆ ನಾನು ಬರುತ್ತಿರಲಿಲ್ಲ. ಹದಿನೈದು ಹಳ್ಳಿಗಳಲ್ಲಿನ ಜನರ ಭೂಮಿ ಸುಮಾರು 500 ಎಕರೆಯಷ್ಟು ತರಿ ಜಮೀನಿಗೆ ಮರಳು ಪೂರ್ತಿ ತುಂಬಿದೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು ಆರು ಮೈಲಿ ದೂರ ಹೊಳೆ ಹರಿಯುತ್ತದೆ. ಸಾಮಾನ್ಯವಾಗಿ ಈ ಎರಡು ತಾಲ್ಲೂಕುಗಳಲ್ಲಿ cash crops ಹೆಚ್ಚಿಗೆ ಬೆಳೆಯುತ್ತವೆ. ಹತ್ತಿ ಸುಮಾರು 2,500 ಎಕರೆಗೆ ಮೇಲ್ಪಟ್ಟು ಅರಸೀಕೆರೆ ತಾಲ್ಲೂಕಿನಲ್ಲಿ ಬೆಳೆಯುತ್ತಿದ್ದುದಕ್ಕೆ ಈಗ ನಷ್ಟವಾಗಿದೆ. ಕಡಲೇಕಾಯಿ ಸುಮಾರು 4,000 ಎಕರೆಯಷ್ಟು ಭೂಮಿಯಲ್ಲಿ ಹಾಕಿದ್ದುದು ಮಳೆಗೆ ಸಿಕ್ಕಿ ಸರಿಯಾದ ಉಳುಮೆಯಾಗದೆ ನೀರಿನಲ್ಲಿ ಈಗ ಮುಳುಗಿದೆ. ಎಳ್ಳು ಸುಮಾರು 1,000 ಎಕರೆಯಷ್ಟು ಬೆಳೆಯುವ ಭೂಮಿಗೆ ನಷ್ಟವಾಗಿದೆ. ತೆಂಗು ಸುಮಾರು 30,000 ಎಕರೆಯಷ್ಟು ಭೂಮಿಯಲ್ಲಿದೆ. ಇದರಲ್ಲಿ ಸುಮಾರು 10,000 ಎಕರೆಯಷ್ಟು ಭೂಮಿಯಲ್ಲಿರುವ ತೆಂಗಿನ ಫಸಲಿಗೆ ಹರಳು ಬಿದ್ದು, ನೀರು ನಿಂತು ಒಂದು ಎಳನೀರೂ ಸಿಕ್ಕದಂತಾಗಿದೆ. ಮತ್ತು ಈ ತೆಂಗಿನ ಫಸಲಿಗೆ ತುಂಬಾ ನಷ್ಟವಾಗಿದೆ. ತೆಂಗಿನ ಮರದಲ್ಲಿ ಇನ್ನೂ ಐದು ವರ್ಷಗಳ ಕಾಲ ಈ ಹತ್ತುಸಾವಿರ ಎಕರೆ ಭೂಮಿಯಲ್ಲಿ ಯಾವ ತರಹದ ಫಸಲನ್ನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆಲೂಗೆಡ್ಡೆ ಬೆಳೆಗೆ ಅರಸೀಕೆರೆಯಲ್ಲಿ ಸುಮಾರು ಒಂದು ಸಾವಿರ ಎಕರೆಯಷ್ಟು ಭೂಮಿಗೆ ಸಂಪೂರ್ಣವಾಗಿ ನಷ್ಟವಾಗಿದೆ. ಒಟ್ಟು ಸುಮಾರು 19,000 ಎಕರೆಯಷ್ಟು ಜಮೀನುಗಳಿಗೆ ನಷ್ಟವಾಗಿದೆ. ರಾಗಿ ಬಿತ್ತನೆಗೆ ಕಾಲ ಮೀರಿಹೋಗಿದೆ. ಮುಂದಿನ ವರ್ಷ ಯಾವ ಫಸಲೂ ಬರುವುದಿಲ್ಲ. ಈ 19,000 ಎಕರೆಗಳಿಗೂ ಎಕರೆಯೊಂದಕ್ಕೆ ಇನ್ನೂರು ರೂಪಾಯಿಗಳಂತೆ ಸಹಾಯ ಕೊಡಬೇಕೆಂದರೂ ಸುಮಾರು 38 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಅರಸೀಕೆರೆ ಮತ್ತು ಚೆನ್ನರಾಯಪಟ್ಟಣ ಈ ಭಾಗಗಳಲ್ಲಿ ನಷ್ಟವಾಗಿದೆ. ನನ್ನ ಜೊತೆಗೆ ಬೇಕಾದರೆ ಈ ಸಭೆಯ ಸದಸ್ಯರೂ ಮಾನ್ಯ ಮಂತ್ರಿಗಳೂ ಬಂದರೆ ತೋರಿಸುತ್ತೇನೆ. ನಾನು ಹೇಳುವುದು ಸುಳ್ಳಾಗಿದ್ದರೆ ನಾನು ಈ ಸಭೆಗೆ ರಾಜೀನಾಮೆ ಕೊಡುತ್ತೇನೆ. ಈ ಬಗ್ಗೆ ಸರಕಾರ ಆದಷ್ಟು ಸೂಕ್ತವಾದ ಪರಿಹಾರ ಕೆಲಸಗಳನ್ನು ಮಾಡತಕ್ಕದ್ದು ಅಗತ್ಯ. ಇದರಲ್ಲಿ ಎರಡು ತರಹ ಇದೆ. ಮೊದಲನೆಯದು ಹೆಚ್ಚು ಮಳೆಯಾಗಿ ಕಷ್ಟಕ್ಕೊಳಗಾದ ಜನಗಳಿಗೆ Interest free loansನ್ನು ಸುಮಾರು ಹತ್ತು ಲಕ್ಷ ರೂಪಾಯಿಗಳಷ್ಟು ಕೊಡಬೇಕು. ಎರಡನೆಯದು ನಮ್ಮ ಎರಡು ತಾಲ್ಲೂಕುಗಳಲ್ಲಿ ಕಂದಾಯವನ್ನು ವಜಾ ಮಾಡಬೇಕು. ಮೂರು ವರ್ಷಗಳಿಂದ ಮಳೆ ಬೀಳದೆ ನಷ್ಟಪಡುತ್ತಿದ್ದಾರೆ, ಈ ಸಾರಿ ಮಳೆ ಹೆಚ್ಚಾಗಿ ಬಂದು ನಷ್ಟಕ್ಕೊಳಗಾಗಿರುವ ಜನಕ್ಕೆ ಅನುಕೂಲವಾಗುವಂತೆ ಒಂದು ಕಾನೂನನ್ನು ಮಾಡಲು ಯೋಚನೆ ಮಾಡಬೇಕು. ನಿಜವಾಗಿಯೂ ದನಕರುಗಳಿಗೆ ಈಗ ಮೇವೇ ಇಲ್ಲದಾಗಿದೆ. ಬಹಳನಷ್ಟವಾಗಿರುವ ಕಡೆಗಳಲ್ಲಿ ಅಲ್ಲಿನ ಜನಕ್ಕೆ ಕಂದಾಯದ ರಿಯಾಯಿತಿಯನ್ನು ಕೊಡಬೇಕು.

(ಶ್ರೀ ಎಚ್. ಜಿ. ನರಸಿಂಹೇಗೌಡ)

ಬಹುಶಃ ಜನಗಳ ಕಷ್ಟವೇನು, ಅದರಲ್ಲೂ ರೈತರ ಕಷ್ಟವೇನು, ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಬಹಳವಾಗಿ ಮನ ನೊಂದಿರತಕ್ಕವರ ಪರಿಸ್ಥಿತಿಯನ್ನು ನಿಜವಾಗಿ ಸರ್ಕಾರ ತಿಳಿದುಕೊಳ್ಳಬೇಕಾದುದು ಈಗಿನ ಸನ್ನಿವೇಶದಲ್ಲಿ ಬಹಳ ಅಗತ್ಯವಿದೆ. ನಾನು ಯಾವುದನ್ನು ಸಹ ಸ್ವಾರ್ಥ ದೃಷ್ಟಿಯಿಂದ ಹೇಳುವವನಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ನೀವು ಗದ್ದೆಯೊಳಗೆ ಇಳಿಯುವುದು, ನಾನೂ ಗದ್ದೆಯೊಳಗೆ ಇಳಿಯುವುದು ನೋಡೋಣ, ಯಾರಿಗೆ ವಿಷಯ ಚೆನ್ನಾಗಿ ಗೊತ್ತಿದೆ ಎಂಬುದು ಆಗ ಗೊತ್ತಾಗುತ್ತದೆ. ಮಲೆನಾಡಿನ ಸ್ಥಿತಿಯೇ ಬೇರೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ನೀವು ಆ ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದೀರಿ. ಏಕೆಂದರೆ ನೀವು ರೈತಾಪಿ ಕೆಲಸಗಳ ಕಷ್ಟ ನಷ್ಟಗಳೇನೆಂಬುದನ್ನು ಚೆನ್ನಾಗಿ ತಿಳಿದುಕೊಂಡಿದ್ದೀರಿ ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ನಾನು ಅದನ್ನು ಚೆನ್ನಾಗಿ ತಿಳಿದುಕೊಂಡಿಲ್ಲವೆಂಬ ಭಾವನೆಯಿಂದ ಇಲ್ಲಿ ಹೇಳುತ್ತಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆರೋಗ್ಯಶಾಸ್ತ್ರ ಪುಸ್ತಕದ ಮೊದಲನೆಯ ಚಿತ್ರವನ್ನು ನೋಡಿದರೆ ಸಾಕು. ಇವರೇನಾದರೂ ಕೆಸರುಗದ್ದೆಯಲ್ಲಿ ಇಳಿದರೆ ಅವರು ಅಲ್ಲೇ; ನಾನು ಇಲ್ಲೇ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಎರಡನೆಯದಾಗಿ ಸರಕಾರದವರು ನಮ್ಮ ಲೀಡರ್ ತಂದಿರತಕ್ಕ ಒಂದು ತಿದ್ದುಪಡಿಗೆ ಹೆಚ್ಚಿನ ಗಮನವನ್ನು ಕೊಡಬೇಕು. ಇಂಡಿಯಾ ದೇಶದಲ್ಲಿ ಅದರಲ್ಲೂ ಮೈಸೂರು ಸಂಸ್ಥಾನದಲ್ಲಿ ಸುಮಾರು ಹತ್ತು ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಈ ಪ್ರವಾಹದ ಹಾವಳಿಯಿಂದ ನಷ್ಟವಾಗಿದೆ. ಈಗ ಸುಸಮಯ. ಇಂದಿನ ದಿವಸ ನೆಹರೂ ಅವರು ಬರುತ್ತಾರೆ. ಅದಕ್ಕೋಸ್ಕರ ಮಂತ್ರಿಗಳು ಕೂಡಲೇ ಅವರನ್ನು ನೋಡಿ ದಕ್ಷಿಣ ಭಾರತದಲ್ಲಿ ಹೆಚ್ಚಿಗೆ ಮೈಸೂರಿಗೇ ಪ್ರವಾಹಗಳಿಂದ ತೊಂದರೆಯಾಗಿದೆ ಎಂದು ಅರಿಕೆ ಮಾಡಿಕೊಳ್ಳಬೇಕು. ಇಂಥ ಸುಸಮಯದಲ್ಲಿ ಜಾಗರೂಕರಾಗಿ ಕೇಂದ್ರ ಸರ್ಕಾರದಿಂದ ಸಹಾಯವನ್ನು ಪಡೆಯಬೇಕು. ಮುಖ್ಯಮಂತ್ರಿಗಳು ರೆವಿನ್ಯೂ ಮಂತ್ರಿಗಳು ಮತ್ತು ಇತರ ಮಂತ್ರಿಗಳು ಕೇಂದ್ರದಿಂದ ಸಹಾಯ ಧನವನ್ನು ಗ್ರಾಂಟು ರೂಪವಾಗಿ ಪಡೆಯಬೇಕೇ ಹೊರತು ಸಾಲದ ರೂಪವಾಗಿ ಹಣವನ್ನು ಪಡೆಯುವುದು ಸಾಧ್ಯವಾದುದಲ್ಲ. ಕಡ್ಡಾಯವಾಗಿ ನಮಗೆ ಸಾಲ ಬೇಡ. ಪುನಃ ರೈತರಿಗೆ ಸಾಲದ ಹೊರೆಯನ್ನು ವಹಿಸುವುದು ಬೇಡ. ಅವರಿಗೆ ಈ ಕ್ಲಿಷ್ಟ ಸಮಸ್ಯೆಯಲ್ಲಿ ಯಾವ ರೀತಿಯಾದ ಉತ್ಪತ್ತಿಯೂ ಇಲ್ಲದೆ ಇರುವಾಗ ಅವರಿಗೆ ಸಾಲ ಕೊಟ್ಟು ಆ ಸಾಲವನ್ನು ಪುನಃ ವಾಪಸ್ಸು ತೆಗೆದುಕೊಳ್ಳುವ ನಿಯಮ ಬೇಡ. ಸಾಲವಿಲ್ಲದೆ ಇರತಕ್ಕ ರೀತಿಯಲ್ಲಿ ಪ್ರವಾಹಪೀಡಿತರಾಗಿ ನೊಂದವರಿಗೆ ಸರ್ಕಾರದವರು ಸಹಾಯ ಮಾಡಬೇಕು. ಅದಕ್ಕಾಗಿ ಕೇಂದ್ರ ಸರ್ಕಾರದಿಂದ ಹತ್ತು ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಹಣ ಸಹಾಯವನ್ನು ಪಡೆಯಲು, ನೀವು ವಿರೋಧ ಪಕ್ಷದ ನಾಯಕರನ್ನು ಸೇರಿಸಿಕೊಂಡು ಒಂದು ಮನವಿಯನ್ನು ತಯಾರು ಮಾಡಿಕೊಂಡು ನೆಹರೂ ಅವರನ್ನು ಹೋಗಿ ನೋಡಿ ಆ ಮನವಿಯನ್ನು ಈ ದಿವಸವೇ ಅವರಿಗೆ ಒಪ್ಪಿಸಿ ಅವರಲ್ಲಿ ಕಡ್ಡಾಯವಾಗಿ ಮೈಸೂರು ದೇಶಕ್ಕೆ ಫ್ಲಡ್ ಸಿಚುಯೇಷನ್‌ಗೋಸ್ಕರ ಕೇಂದ್ರದಿಂದ ಹೆಚ್ಚಿಗೆ ಹಣ ಸಹಾಯವನ್ನು ಕೊಡಿಸಬೇಕು ಎಂಬುದಾಗಿ ಕೇಳಬೇಕು ಎಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇಂಡಿಯಾ ಸರ್ಕಾರದವರೂ ಮೈಸೂರು ಸಂಸ್ಥಾನಕ್ಕೆ ಕೇವಲ ಹತ್ತು ಕೋಟಿ ರೂಪಾಯಿಗಳನ್ನು ಈ ಬಾಬಿಗೆ ಒದಗಿಸುವುದರಲ್ಲಿ ಹಿಂದೆಗೆಯುವುದಿಲ್ಲವೆಂದೂ ನಾನು ತಿಳಿದಿದ್ದೇನೆ. ಆದುದರಿಂದ ಹತ್ತು ಕೋಟಿ ರೂಪಾಯಿಗಳ ಸಹಾಯ ಧನವನ್ನು ಫ್ರೀಯಾಗಿ ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ. ಅದರಲ್ಲೂ ದಕ್ಷಿಣ ಭಾರತದಲ್ಲಿ ಇತರೇ

ಪಕ್ಕದ ಸಂಸ್ಥಾನಗಳಿಗಿಂತ ಹೆಚ್ಚಿಗೆ ಮೈಸೂರು ಸಂಸ್ಥಾನದಲ್ಲಿ ನಷ್ಟವಾಗಿದೆ. ಮಹಾರಾಷ್ಟ್ರದ ಕೆಲವು ಪ್ರದೇಶಗಳಲ್ಲಿ ಕೇವಲ ಒಂದೆರಡು ಜಿಲ್ಲೆಗಳಲ್ಲಿ ಮಾತ್ರ ನಷ್ಟವಾಗಿದೆ. ಆದರೆ ನಮ್ಮ ಸಂಸ್ಥಾನದಲ್ಲಿ ಐದಾರು ಜಿಲ್ಲೆಗಳಲ್ಲಿ ಹೆಚ್ಚಿಗೆ ನೋವು ಆಗಿದೆ. ಅವುಗಳಲ್ಲಿ ಆಗಿರತಕ್ಕ ತೊಂದರೆಗಳ ಮತ್ತು ನಷ್ಟಗಳ ಅಂಕಿ ಅಂಶಗಳನ್ನು ವಿವರಿಸುವುದಾದರೆ ನೇರವಾಗಿ 20 ಕೋಟಿಗಳಿಗಿಂತ ಜಾಸ್ತಿಯಾಗಿಯೇ ನಷ್ಟವಾಗಿದೆ ಎಂದು ಹೇಳಬಹುದು. ಈಗ ನಾವು ಕೇಳಿರುವುದು ಈಗಾಗಿರತಕ್ಕ ನಷ್ಟದ ಅರ್ಧಭಾಗ ಮಾತ್ರ ಆಗಿದೆ. ನಾವು ಕೇಳಿರತಕ್ಕದ್ದು ಹತ್ತು ಕೋಟಿ ಅಂದರೆ ಕೇವಲ ಅರ್ಧಭಾಗವಾಯಿತು. ಆದುದರಿಂದ ಹತ್ತು ಕೋಟಿ ಎಂದು ಕೇಳಿರತಕ್ಕದ್ದರಲ್ಲಿ ತಿರುಳು ಇದೆ. ಈಗ ನಮ್ಮ ದೇಶದಲ್ಲಿ ಪ್ರವಾಹಗಳಿಂದ ಉಂಟಾಗಿರತಕ್ಕ ನಷ್ಟವಾಗಿರತಕ್ಕ ಬಗ್ಗೆ ಜಿಲ್ಲಾವಾರು ಅಂಕಿ ಅಂಶಗಳನ್ನು ಶೇಖರಿಸಿ ಕೇಂದ್ರದಿಂದ ಹತ್ತು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಆ ಹಣವನ್ನು ಹಂಚಲಿಕ್ಕೆ ಒಂದು ಕಮಿಟಿಯನ್ನು ರಚಿಸಬೇಕು. ಆ ಕಮಿಟಿಯ ಮೂಲಕ ಈ ಪ್ರವಾಹ ಪೀಡಿತರಾಗಿ ನೊಂದವರಿಗೂ ಮತ್ತು ಇದರಲ್ಲಿ ನೋವಾಗಿರತಕ್ಕ ರೈತರಿಗೆಲ್ಲರಿಗೂ ನೇರವಾಗಿ ಆ ಹಣ ಅವರ ಕೈ ಸೇರುವ ಹಾಗೆ ಹಂಚುವ ವ್ಯವಸ್ಥೆಯನ್ನು ಸರ್ಕಾರದವರು ಕೂಡಲೇ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಜಿ. ವೆಂಕಟೇಗೌಡ.—ಆ ಕಮಿಟಿ ಜಿಲ್ಲಾ ಲೆವಲ್ಲಿನಲ್ಲೋ ಅಥವಾ ತಾಲ್ಲೂಕ್ ಲೆವಲ್ಲಿನಲ್ಲೋ ?

ಶ್ರೀ ಎಚ್. ಜಿ. ನರಸಿಂಹೇಗೌಡ.—ಸಬ್ ಕಮಿಟಿಗಳನ್ನು ಜಿಲ್ಲಾ ಮತ್ತು ತಾಲ್ಲೂಕ್ ಲೆವಲ್ಲಿನಲ್ಲಿ ಎಂದು ಮಾಡಬೇಕು. ಆಗ ಕೇಂದ್ರ ಸರ್ಕಾರ ಕೊಡತಕ್ಕ ಹಣವನ್ನು ಹಂಚಿಕೆ ಮಾಡಿದ್ದು ಸಾರ್ಥಕವಾಗುತ್ತದೆ. ರೈತರಿಗೆ ನೇರವಾಗಿ ಸಿಕ್ಕುವ ಹಾಗೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ನಾವು ಇಷ್ಟೊಂದು ಕಷ್ಟಪಟ್ಟು ಓಡಾಡಿ ಪ್ರವಾಹ ಪರಿಹಾರಕ್ಕಾಗಿ ಸಂಗ್ರಹಿಸಿದ ಹಣ ಮತ್ತು ಕೇಂದ್ರ ಸರ್ಕಾರದಿಂದ ಬಂದಂಥ ಹಣ ಬೇರೆಯವರ ಕೈಗೆ ಸಿಕ್ಕದಹಾಗೆ ಮಾಡಬೇಕು ಈ ವಿಷಯವನ್ನು ಸರ್ಕಾರದವರು ಚೆನ್ನಾಗಿ ಮಾನಗಾಣಬೇಕು. ಅಧ್ಯಕ್ಷರು ಆದಷ್ಟು ಜಾಗ್ರತೆಯಾಗಿ ನನ್ನ ಭಾಷಣವನ್ನು ಮುಗಿಸಬೇಕೆಂದು ಸೂಚನೆ ಕೊಟ್ಟಿದ್ದಕ್ಕಾಗಿ ನಾನು ಇನ್ನು ವಿಶೇಷವಾಗಿ ಈ ಬಗ್ಗೆ ಮಾತನಾಡಲು ಬಯಸುವುದಿಲ್ಲ. ಒಟ್ಟಿನಲ್ಲಿ ನಾನು ಹೇಳಿದ ಅಂಶಗಳನ್ನೆಲ್ಲಾ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಕ್ಷಿಪ್ರವಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆಂದು ನಾನು ತಿಳಿದಿದ್ದೇನೆ.

ಕೊನೆಯದಾಗಿ ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ಸಭೆಯನ್ನು ಈಗ ಅಡಜರ್ನ್ ಮಾಡಕೂಡದು ಎಂಬುದಾಗಿ ಮತ್ತೊಮ್ಮೆ ಪ್ರೆಸ್ಸು ಮಾಡಿ ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

†Sri M. RAJASEKHARA MURTHY (T.-Narasipur).—Sir, I come from T.-Narasipur Taluk which has been badly hit by the severity of the floods of the two rivers namely Kapini and Cauvery. I would like to give a brief account of the damage sustained by our people and also express my opinion on certion impotent aspects of the question, namely, the type of relief work undertaken by the Government in that area, the adequacy or otherwise of the relief work undertaken, the nature of the work that is being earried out in that area at present, the rules regulating the grant of relief to the flood affected people and lastly the pattern of financial assistance by the Government of India, and how far it is going to meet the the situation.

The persons who have suffered on account of flooods can be brought under Three categories, namely, persons who have rendered homeless,

(Sri M. RAJASEKHARA MURTHY)

persons whose lands have been affected and thirdly agricultural labourers who are rendered unemployed. With regard to the first category, in my own district, about 25 villages have been completely affected and nearly 1,800 to 2,000 houses have been damaged. Some houses have been completely washed out; some houses are unfit to live in. In addition to these a large acreage of land has been rendered unfit for cultivation. According to the report given by Government itself about 12,000 acres have been affected in Mysore District; sand has been deposited; crops have been covered by silt; there is land erosion and a certain portion of the land is still under water and it is not possible to cultivate these lands. Crops like mulberry plantati ns, onions, vegetable gardens and ragi have have been completely washed out. It is not possible to correctly estimate the damages sustained by this class of people because a detailed survey has not yet been conducted. Now the agricultural labourers are not being employed because when the land is rendered unfit for cultivation no landowner is going to employ agricultural labour in the land and thereby indirectly these people have suffered a good deal on account of the severity of the floods.

What is the type of relief given by the Government to these three categories of people? According to the information given by the Government and according to my own information which I have collected during the course of my tour in my constituency, the only relief given to the people is giving of Rupees Ten per family for the purpos of purchasing foodgrains. Government in their order have stated that this kind of immediate relief should be given from Rupees Ten to Rs. 100 according to the damages sustained by the people in the area. Though the order contemplates giving of even Rs. 100, now here in my taluka has anybody been given Rs. 100? Ten rupees is the maximum amount given to the people who have suffered on account of the floods.

Sri G. VENKATAI GOWDA.—No where in the district has any body been given Rs. 100.

Sri M. RAJASEKARA MURTHY.—Even this sum of Rupees Ten has not been given to all the families who have suffered on account of floods. In my own village itself 70 houses have collpsed, but only 30 persons have been granted this kind of relief.

Several Ministers came to this area. The Deputy Minister for P. W., The Minister for P. W., the Minister for Agriculture, the Finance Minister, the committee constituted by the P.C.C., the Divisinal Commissioner and the Deputy Commissioner visited the area. The tours of the Ministers proved to be a great menace to the people of the area. Whenever any Minister came to the affected spot, the officers who were attending to relief work had to abandon their work and accompany the Minister with the result that relief work has badly affected. Every now and then the Ministers used to come and go.

But no Minister was capable of orders on the spot. They giving just saw things, felt very bad about the situation and went back to Bangalore City saying that they had to consult other colleagues and then take a decision.

Sri G. VENKATAI GOWDA.—In our area, on the spot instructions were given.

Sri M. RAJASEKHARA MURTHY.—The results are there for any one to see. The Government machinery has not moved quickly in the matter of giving relief, as was and is being done in other States. For example in Madras, the moment Tanjore delta was under submerision, the Chief Minister toured the delta and he said that there was no limit with regard to the relief to be given to the flood-affected people. He said that he had deputed a Member of the Board of Revenue and that he was entitled to take such decisions as he deemed fit in order to carry out the work. He can employ anybody he wants. He can undertake any type of work, the only idea being that immediate relief should be given to the people rendered homeless. The Chief Minister of Maharashtra. Sri Chavan, said when the City of Poona was under submersion that money was no problem. What is wanted is immediate relief to the people. He said that he had placed at the disposal of the people one officer and had given him 20 lakhs. He might go ahead with relief work even without requiring the sanction of Government. Sir, unfortunately; no Minister in the Mysore State, including the Leader of the House, has made such encouraging statements to the public. It is unfourtunate that the State Government did not taking immediate action is rendering help to the flood-stricken people.

Sri KADIDAL MANJAPPA.—We have said that considerations of money should not come in the why of repairing damages and restoration of communication. But we cannot give blank cheque and say "do what you like with the money". The Hon'ble Member is speaking as though we have ample and unlimited resources in the State and we can give amounts even to the Revenue Inspector or the Tahsildar to incur any expenditure. Expenditure has to be incurred in accordance with the rules.

Sri M. RAJASEKHARA MURTHY.—Sir, with regard to immediate relief to the given to the people I would suggest the following measures :

(1) A cash relief of Rs. 100 should be given to each family. Government is not going to lose much on this account. The total number of families affected, according to their own report, is 11,000. If you give Rs. 100 for each such family, the total amount would come to 11 lakhs. Out of this, the Government of India is going to give 50 per cent. that is, Five and half lakhs. Therefore a sum of Rs. Five and half lakhs to be incurred by this Government is not such a big amount as to deter the Government from doing the right thing. I consider that even the payment of Rs. 100 per family would not give sufficient relief to a family of five members to purchase foodgrains for 20 days.

(Sri M. RAJASEKHARA MURTHY)

Government should come forward sympathetically and with God-mindedness, they ought to help the people. Government should be liberal enough to give Rs. 100 which is after all a small sum to help people rendered homeless.

(2) Temporary sheds will have to be put up. In my district, except in Kollegal taluk where Five sheds have been put up, no sheds have been put up. In T-Narasipur taluk, where 15 villages have been washed out, not a single shed has been put up. The flood havoc was caused on the 6th and 7th and temporary relief was given on 16th, after 8 or 9 days. (*Cries of 'shame' from Opposition benches*). Sir, even today no temporary shed has been put up to help people to prepare their food. Till now no action has been taken by Government to put up temporary sheds. I request that Government should immediately put up such sheds in areas were people are rendered homeless.

(3) According to the report furnished by Government about 12 thousand acres are completely washed out. This is on account of the floods and also breach of channels, perticularly in Hunsur taluk. Till last Sunday, when I had toured the taluk, not even a grain of seed paddy has been supplied to the ryots. Delay in supplying seeds will badly hit food production. The Minister may consult his experts in the Agricultural Department and ascertain the truth of this. Even if Government should supply seed paddy today, the ryots will have to raise seed beds and it will take one month for them to transplant the seedlings. Therefore food production is going to be badly hit. Any delay in this matter will not be welcome by the people in the area. I, therefore, request that immediate steps be taken to supply the ryots with seed paddy.

(4) Sir, lands have been washed out. Lands which has been prepared for purposes of transplantation have been washed away. Now the people require immediate cash for bringing such lands under cultivation. Government have stated that they are going to give takavi loans. I submit that this should be given at the rate of Rs. 50 per acre without insisting upon no encumbrance. If this certificate is insisted upon, even after a month or two of building up the record, the loan would not reach the persons intended. Suitable instructions should be given to the officers to grant a minimum of Rs. 50 per acre to those persons whose lands have been affected.

(5) With regard to agricultural labourers, I have already said that they have no employment because the lands are under submersion. Lands are unfit for cultivation. I suggest that the P.W.D. should undertake all the works that have been sanctioned or going to be sanctioned even without calling for tenders so that all the people rendered unemployed may get jobs.

These are the temporary measures that have to be undertaken by Government in order to give immediate and timely relief to the affected people. Now I come to the question of permanent relief measures. This can be categorised into two clauses; (1) shifting the entire village from one area to another and (2) shifting the low lying areas in a village from the lower to the upper region in the same village. The second point should offer no difficulty to Government. The first point may present some problems. This question has arisen not today but since 1953 when T.-Narasipur suffered serious damage. The Government of Mysore then constituted a committee, of which I was a member. In 1954 the Committee submitted the report in which it recommended that 13 villages should be shifted at a cost of Rs. 7.5 lakhs. Even after a lapse of 8 years, Government have not taken any step to rehabilitate those people permanently in safer areas. If the Government had so thought, it could have taken up the works and asked grants from the Government of India. The very same people who suffered untold damages in 1953 are the victims today. With regard to permanent relief I have two schemes.

Mr. SPEAKER.—His time is up. When would he finish?

Sri M. RAJASEKHARA MURTHY.—In about 5 minutes.

Mr. SPEAKER.—In that case we will adjourn now and meet at 11-45 A.M.

The House adjourned for recess at Thirty Minutes past Ten of the Clock and reassembled at Twenty-Eight Minutes past Twelve of the Clock.

[Mr. SPEAKER in the Chair]

Mr. SPEAKER.—Sri Rajasekhara Murthy.

Sri C. J. MUCKANNAPPA.—Before you ask my friend to speak, I want to know whether we are following any procedure or not. The Government make the Speaker wait; they make the House wait. This is very bad in the history of the Mysore Legislature. Let the Government behave better. We have been waiting here for the past 45 minutes and you have been waiting. You must be give a direction to the Government to behave better, instead of asking members to behave better.

Sir, have you heard of such an instance when you were in the Bombay Assembly ? We are maid to wait here for 45 minutes. I will leave it to your good judgement, Sir.

12-30 P.M.

Mr. SPEAKER.—It has arisen out of an extraordinary situation. Anyway, I will have a talk with them and I will see that such a situation does not arise.

Election to House Committee

Before Mr. Rajasekhara Murthy continues his speech, I will announee the election results to the House Committee.

"In connection with the election to the House Committee, as the number of candidates is equal to the number of places to be filled up the following members are declared elected and consequently there will be no election today.

Sriyuths:

(1) K. T. Dasappa

(2) D. Devaraj Urs

(3) K. Doomappa

(4) T. K. Kamble

(5) N. G. Narasimhe Gowda

(6) C. K. Rajaiah Shetty

(7) T. Tare Gowda

(8) Smt. Susheela Bai Shah"

MOTION *Re*: FLOOD SITUATION IN THE STATE

Debate—*Contd.*

Sri M. RAJASEKHARA MURTHY —Sir, before the interval I was making reference with regard to the permanent rehabilitation of the flood affected people. There are two schemes already before the State Government which are being implemented under two different circumstances. One relates to the permanent rehabilitation of the villages which have been submerged on account of construction of reservoirs and tanks, the other relates to shifting of villages in Manya District under the Anti-malaria Scheme. According to these schemes the cost for the construction of roads, drainages, school buildings and other village amenities is being borne by the Government itself. The existing building of the village under shifting will have to be valued and 60 per cent of the valuation should be paid in cash and the remaining 40 per cent will have to be adjusted towards the materials of the old buildings which will be permitted to be taken and transported to the new village. An Assistant Engineer will be appointed to carryout the lay out roads etc., and an Assistant Commissioner will be appointed to acquire land. I want that the privileges and rights enjoyed by these people should also be extended to the people who are affected by floods. I want the State Government to be very sympathetic and liberal regarding extending the concessions to these affected people.

Sri N. G. NARASIMHE GOWDA.—I rise to a point of order. ಒಬ್ಬೊಬ್ಬರಿಗೂ ಮಾತನಾಡುವುದಕ್ಕೆ 15 ನಿಮಿಷವೆಂದು ಸ್ಪೀಕರ್ ಅವರು ರೂಲಿಂಗ್ ಕೊಟ್ಟಿದ್ದಾರೆ. ಆ ರೂಲಿಂಗ್ ಎಲ್ಲರಿಗೂ ಅಪ್ಲೈ ಆಗಲಿ ಅವರೂ ಈ ರೂಲಿಂಗಿಗೆ ತಲೆ ಬಾಗಲಿ.

ಅಧ್ಯಕ್ಷರು.—ತಾವು ಹೇಳಿದ್ದು ನಿಜ. ಅವರು ಇನ್ನೂ ಐದು ನಿಮಿಷಬೇಕೆಂದು ಹೇಳಿದ್ದಾರೆ. ನಾನು ಅದಕ್ಕೆ ಅನುಮತಿ ಕೊಟ್ಟಿದ್ದೇನೆ. ಅಂಥ ಸಂದರ್ಭದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ವೇಳೆ ಕೊಟ್ಟಿದೆ.

Sri M. RAJASEKHARA MURTHY.—Sir, I will be brief. All the suggestions I have made both with regard to immediate relief to be given and also with regard to permanent relief measures to be rendered to the flood affected people will call for a generous and sympathetic attitude on the part of the State Government. When I mentioned that the Government should be liberal with regard to immediate relief, the Hon'ble Minister remarked that Government was not prepared to give a blank cheque. Sir, I do not want the Government to give a blank cheque nor do I desire they should give a post-dated cheque. All that I want is, liberal and immediate help to those people. The rules framed in the March 1960 Government order are not going to give all the benefits are needed. In the light of the suggestions made both from this side and the Opposition, the Government should suitably modified that order. The pattern of giving financial help and the rules framed thereunder by the Central Government require certain modifications. According to the rules all the expenditure that we are incurring under the relief works, would not got from the Government of India. It says that the expenditure of all relief measures is born initially by the State Government and they will get Central grant for half of the expenditure incurred on the specific items, upto two crores. So, all the expenditure that we may incur in this behalf will not be got from the Centre. As the Leader of the Opposition suggested, when the Inter-State Conference meets this subject must be discussed there and the rules of the Government of India should be got revised accordingly. With these suggestions I conclude my speech.

†ಶ್ರೀ ಪುಟ್ಟೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ಈಗ ಮೂರು ದಿವಸಗಳಿಂದ ನಮ್ಮ ದೇಶದಲ್ಲಾಗಿರತಕ್ಕಂಥ ಮಳೆಯ ಹಾವಳಿ ಅನಾಹುತಗಳನ್ನು ಆಯಾ ಜಿಲ್ಲೆಯವರು, ತಮ್ಮ ಜಿಲ್ಲೆಗೆ ತಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಅನೇಕ ವಿಧವಾಗಿ ಚರ್ಚೆಮಾಡಿದ್ದಾರೆ. ಹಾಗೆಯೇ ನಾವು ಪ್ರತಿಯೊಂದು ಜಿಲ್ಲೆಯಲ್ಲಿ ಸಂಚಾರ ಮಾಡದೆ ಇದ್ದರೂ, ನಮ್ಮ ತಾಲ್ಲೂಕಿನಲ್ಲಿ ಆಗಿರತಕ್ಕಂಥ ನಷ್ಟವನ್ನು ಈ ಸಭೆಯ ಗಮನಕ್ಕೆ ತರಬೇಕೆಂಬುದು ನಮ್ಮ ಅಭಿಪ್ರಾಯ. ಹಾಸನ ಜಿಲ್ಲೆಯೊಳಗೆ ವ್ಯವಸಾಯದಿಂದ ಜೀವನ ಮಾಡತಕ್ಕ ಪ್ರತಿಯೊಬ್ಬರೂ ಮಳೆಗಾಲದಲ್ಲಿ ಪೈರನ್ನೇ ನಂಬಿಕೊಂಡಿರುವರು. ಹೇಮಾವತಿ, ಕಾವೇರಿ ಮತ್ತು ಯಗಚಿ–ಈ ಮೂರು ನದಿಗಳ ಹಾವಳಿಯಿಂದ ಈ ವರ್ಷ ಯಾವ ರೀತಿ ಜೀವನ ಮಾಡಬೇಕೆಂಬುದೇ ತೋರದೆ, ಜನಗಳಿಗೆ ಕಾಣದ ರೀತಿಯಲ್ಲಿ ತೊಂದರೆಯಾಗಿದೆ. ಹಾಗೂ ನಮ್ಮ ತಾಲ್ಲೂಕಿನಲ್ಲಿ ಒಂದು ಕಡೆಯಿಂದ ಹೇಮಾವತಿ, ಇನ್ನೊಂದು ಕಡೆ ಕಾವೇರಿಯಿಂದ ಬಹಳ ತೊಂದರೆಯಾಗಿದೆ. 20 ದಿವಸಗಳಿಂದ ಜಮೀನಿನಲ್ಲಿ ನೀರು ನಿಂತುಕೊಂಡು. ಯಾವ ತರಹದ ಬೆಳೆ ಬೆಳೆಯಲಿಕ್ಕೆ ಅವಕಾಶವಿಲ್ಲ. ಮಳಲು, ಮಣ್ಣು ಬಂದು ಬಿಟ್ಟು ಬೆಳೆದ ಬೆಳೆಯು

(ಶ್ರೀ ಪುಟ್ಟೇಗೌಡ)

ಕೊಳೆತು ಹೋಗಿದೆ. ರಾಮನಾಥಪುರದಲ್ಲಿ ಊರಿನೊಳಗೆ ನೀರು ನುಗ್ಗಿ ಎರಡು ಮನೆಗಳು ತೇಲಿ ಹೋದುವು. ಕಟ್ಟೇಪುರದಲ್ಲಿ ಹುಲ್ಲಿನ ಮೆದೆಗಳು ಹೊರಟು ಹೋಗಿವೆ. 12—20 ದಿವಸಗಳಿಂದ ಅಲ್ಲಿ ಟ್ರಾಫಿಕ್ ಬಂದ್ ಆಗಿ ಜನಗಳು ಬಹಳ ತೊಂದರೆ ಅನುಭವಿಸುತ್ತಿರುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಇವೊತ್ತಿನ ದಿವಸ ಹಾಸನ ಜಿಲ್ಲೆಯೊಳಗೆ ಮೂರುವರೆ ಲಕ್ಷ ರೂಪಾಯಿಗಳಷ್ಟು ನಷ್ಟವಾಗಿರಬಹುದೆಂದು ಅಂದಾಜು ಮಾಡಿದ್ದಾರೆ. ಇವೊತ್ತಿನ ದಿವಸ ಹಾಸನ ಜಿಲ್ಲೆಯೊಳಗೆ ಆಲೂಗಡ್ಡೆ ಬೀಜಕ್ಕಾಗಿಯೇ 10 ಲಕ್ಷ ರೂಪಾಯಿಗಳನು ಖರ್ಚು ಮಾಡಿದ್ದಾರೆ. ಆಲೂಗಡ್ಡೆ ಪೈರು ಕೊಳೆತು ಹೋಗಿರುವುದು ಪ್ರತಿಯೊಬ್ಬರಿಗೂ ಗೊತ್ತಿರುವ ವಿಚಾರ. ಬೆಳೆದಂಥ ರಾಗಿಯೂ ಪ್ರತಿ ಕಡೆಯೂ ಭೂಮಿಯಲ್ಲಿ ಹೂತು ಹೋಗಿ ನಿಂತುಕೊಂಡು, ಯಾವ ತರಹದ ಅನುಕೂಲವೂ ಇಲ್ಲದೆ ಇರತಕ್ಕಂತ ಸ್ಥಿತಿಯನ್ನು ನಾವು ನೋಡುತ್ತಾ ಇದ್ದೇವೆ.

ನಮ್ಮ ಸರಕಾರದವರು ಮಾಡತಕ್ಕ ಕೆಲಸಗಳನ್ನು 1924ನೆಯ ಇಸವಿಯಿಂದಲೂ ಮಾಡಿ ಈ ಪ್ರವಾಹದ ಹಾವಳಿಯನ್ನು ತಪ್ಪಿಸಬಹುದಾಗಿತ್ತು. ಹಾಗೆ ಮಾಡದೇ ಇರುವುದೇ ಇದಕ್ಕೆ ಕಾರಣ ಎಂದು ನನ್ನ ಅಭಿಪ್ರಾಯ. ನಮ್ಮ ಸರಕಾರದವರು ಈ ಪ್ರವಾಹದ ಹಾವಳಿಯನ್ನು ತಪ್ಪಿಸಬೇಕಾದರೆ ನದಿಗಳಿಗೆ ಅಲ್ಲಲ್ಲಿ ಸಣ್ಣ ಸಣ್ಣ ಕಟ್ಟೆಗಳನ್ನು ಕಟ್ಟಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟದೆ ಇದಕ್ಕೆ ಸ್ವಲ್ಪ ಖರ್ಚು ಮಾಡಿದ್ದರೆ ಇಷ್ಟು ತೊಂದರೆಯಾಗುತ್ತಿರಲಿಲ್ಲ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಪ್ರತಿಯೊಂದು ಭಾಗದಲ್ಲಿಯೂ ಕಾಂಕ್ರೀಟ್ ರೋಡುಗಳು ಮತ್ತು ಉಪಯೋಗವಿಲ್ಲದೇ ಇರತಕ್ಕ ಕಟ್ಟಡಗಳಿಗೆ ವೆಚ್ಚಮಾಡುವುದು ಸರಿಯಲ್ಲ. ಮಳೆಗಾಲದಲ್ಲಿ ಬರುವ ನೀರನ್ನು ತಡೆಯುವಂತೆ ಅಣೆಕಟ್ಟುಗಳನ್ನು ಅಲ್ಲಲ್ಲಿ ಕಟ್ಟಿ ನೀರನ್ನು ಶೇಖರಿಸಿ ನಿಲ್ಲಿಸಿಕೊಂಡು ಆ ನೀರನ್ನು ಬೇಸಗೆಯಲ್ಲಿ ಉಪಯೋಗ ಮಾಡಿಕೊಳ್ಳುವ ಒಂದು ಅವಕಾಶವನ್ನು ಮಾಡಿಕೊಂಡಿದ್ದರೆ ಇಷ್ಟು ತೊಂದರೆಗಳು ಬರುತ್ತಿರಲಿಲ್ಲ ಎಂದು ಹೇಳಬೇಕಾಗಿದೆ ನಮ್ಮ ಸರಕಾರದಲ್ಲಿ ನಾನು ಅರಿಕೆ ಮಾಡಿಕೊಳ್ಳುವುದಿಷ್ಟೆ: ಈಗ ಲಕ್ಷಾಂತರ ಜನರು ಕಷ್ಟಕ್ಕೆ ಒಳಗಾಗಿದ್ದಾರೆ. ಪ್ರತಿಯೊಬ್ಬರಿಗೂ ಸಹಾಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲೆಲ್ಲಿ ತೊಂದರೆಯಾಗಿದೆಯೋ ಆಯಾ ತಾಲ್ಲೂಕುಗಳಲ್ಲಿ ರೂರಲ್ ಕಮ್ಯೂನಿಕೇಷನ್ನಿನ ಕೆಲಸಗಳು, ಪಿ.ಡಬ್ಲ್ಯೂ.ಡಿ. ಯಿಂದ ನಡೆಯಬೇಕಾಗಿರುವ ಇರಿಗೇಷನ್ ಕೆಲಸಗಳು ನಡೆಯಬೇಕಾಗಿವೆ. ಇದನ್ನು ಮಾಡಲು ಕೆಲವು ಹಳ್ಳಿಗಳಿಗೆ ಅನುಕೂಲವಾಗುವಂತೆ ಒಂದು ಡಿಪೋವನ್ನು ಮಾಡಿದರೆ ಆಯಾ ಸ್ಥಳದಲ್ಲಿರುವ ಜನಕ್ಕೆ ಕೂಲಿಯ ಕೆಲಸವಾದರೂ ಸಿಕ್ಕುತ್ತದೆ. ಹಾಗೆ ಮಾಡಿಕೊಟ್ಟರೆ ಇದರಿಂದ ಜನಗಳ ಕಷ್ಟಗಳು ಎಷ್ಟೋ ಕಡಮೆಯಾಗುತ್ತವೆ.

ಈಗ ದೇಶದಲ್ಲಿ ಬೇಕಾದಷ್ಟು ಕೆಲಸಗಳಾಗಬೇಕಾಗಿವೆ. ತಕ್ಷಣ ತೊಂದರೆಗೊಳಗಾಗಿರುವ ಈ ಜನಕ್ಕೆ ಕೆಲಸ ದೊರೆಯಲನುವಾಗುವಂತೆ ಡಿಪೋಗಳನ್ನು ಮಾಡಿ ಜನಕ್ಕೆ ಕೆಲಸಗಳು ಸಿಕ್ಕುವಂತೆ ಏರ್ಪಾಡು ಮಾಡಬೇಕು. ಪರಿಹಾರವನ್ನು ಕೊಡುವಾಗ ಸಾಮಾನ್ಯವಾಗಿ ಒಬ್ಬರಿಂದಲೇ ಕೊಡುವಂತೆ ಮಾಡುವುದು ಸರಿಯಾಗಿರುವುದಿಲ್ಲ. ಇದು ಸುಲಭವಾಗಬೇಕಾದರೆ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್, ತಾಲ್ಲೂಕು ಬೋರ್ಡು ಹಾಗೂ ಪಂಚಾಯತಿಗಳಲ್ಲಿರುವ ಮೆಂಬರುಗಳ ಒಂದು ಸಮಿತಿಯನ್ನು ಮಾಡಿ ಅವರಿಂದ ನೇರವಾಗಿ ಸಹಾಯ ಮಾಡಿದರೆ ಪ್ರತಿಯೊಬ್ಬರಿಗೂ ಬೇಗನೆ ಸಹಾಯ ಸಿಕ್ಕಲು ಅನುಕೂಲವಾಗುತ್ತದೆ. ರಾಮನಾಥಪುರದಲ್ಲಿ ಒಂದು ನಾಲೆ ಒಡೆದು ಹೋಯಿತು. ಆ ಬಗ್ಗೆ ಇಲಾಖೆಯ ಅಧಿಕಾರಿಗಳು ಬೇಗನೆ ಕೆಲಸ ಕಾರ್ಯಗಳನ್ನು ತೆಗೆದುಕೊಂಡುದರಿಂದ ಹೆಚ್ಚಿನ ತೊಂದರೆಯಾಗಲಿಲ್ಲ. ಇನ್ನೂ ಕೆಲಸಗಳನ್ನು

ಈ ಬಗ್ಗೆ ಮಾಡುತ್ತಿದ್ದಾರೆ. ಹೀಗೆ ಇರತಕ್ಕ ಸಂದರ್ಭದಲ್ಲ ನಮ್ಮ ಸರಕಾರದವರು ಮೂರು ನಾಲ್ಕು ವರ್ಷಗಳಿಂದಲೂ ಪ್ರವಾಹಕ್ಕೆ ಸಿಕ್ಕುವ ನದಿಗಳಿಗೆ ಅಲ್ಲಲ್ಲಿ ಅಣೆಕಟ್ಟುಗಳನ್ನು ಸರಿಯಾಗಿ ಕಟ್ಟಿ ನೀರನ್ನು ತಡೆದು ನಿಲ್ಲಿಸಿದರೆ ಇನ್ನು ಮುಂದೆ ಅದರೂ ನದಿಗಳಿಂದ ಆಗುವ ಅನಾಹುತಗಳನ್ನು ತಪ್ಪಿಸಬಹುದು. ಈ ರೀತಿಯಾಗಿ ಸರಕಾರದವರು ಮಾಡಲು ಪ್ರಯತ್ನ ಮಾಡಬೇಕು. ನಾನಾಗಲೇ ಹೇಳಿದಂತೆ ತೊಂದರೆಗೊಳಗಾಗಿರತಕ್ಕ ರೈತಾಪಿ ಜನಗಳಿಗೆ ಜೀವನೋಪಾಯವನ್ನು ಕಲ್ಪಿಸಲು ತಕ್ಕ ಸೌಕರ್ಯಗಳನ್ನು ಸರಕಾರ ಬೇಗನೆ ಮಾಡಬೇಕು.

ಇಷ್ಟು ಹೇಳಿ ಅಧ್ಯಕ್ಷರು ನನಗೆ ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ನನ್ನ ವಂದನೆಗಳನ್ನು ಅರ್ಪಿಸಿ, ಈ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ಸ್ವಾಮಿ, ಪ್ರವಾಹದಿಂದ ಪೀಡಿತರಾಗಿರತಕ್ಕ ಎಲ್ಲ ಜನರಿಗೂ ನಮ್ಮ ಸಂತಾಪವನ್ನು ಸೂಚಿಸುತ್ತಾ, ಕೆಲವು ಸದಸ್ಯರಿಂದ ಈಗಾಗಲೇ ಅನೇಕ ಸಲಹೆಗಳು ಬಂದಿರುವುದರ ಜೊತೆಯಲ್ಲಿ ಎರಡು ಮೂರು ವಿಷಯಗಳಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ಇಷ್ಟಪಡುತ್ತೇನೆ. ಇದನ್ನು ಹೇಳುವುದಕ್ಕೆ ಪೂರ್ವಭಾವಿಯಾಗಿ ಒಂದು ವಿಚಾರವನ್ನು ಸರಕಾರದವರ ಅವಗಾಹನೆಗೆ ತರಬೇಕಾಗಿದೆ. ಅದೇನೆಂದರೇ, ಸಂತೆಯ ಕಾಲದಲ್ಲಿ ಉಪ್ಪು, ಬೆಲ್ಲದ ಮೂಟೆ ಮತ್ತು ಇನ್ನಿತರ ಪದಾರ್ಥಗಳಿರುವ ಅಂಗಡಿಗಳಿರುತ್ತವೆ. ಇಂತಹ ಕಾಲದಲ್ಲಿ ಮಳೆ ಬಂದಾಗ ಉಪ್ಪಿನ ಮೂಟೆ ನೀರಾಗಿ ಹಾಳಾಗಿ ಹೋಯಿತು ಎಂದು ಹೇಳುತ್ತಾರೆ. ಕಷ್ಟಪಟ್ಟಿದ್ದು ಹೋಯಿತು ಎಂದು ಅವನು ಹೇಳುವಂತೆ ತೆಂಗಿನಕಾಯಿ ವ್ಯಾಪಾರ ಮಾಡುವವನೂ ಕೂಡ ಸುಂಕದ ಕಾಟವನ್ನು ತಪ್ಪಿಸಿಕೊಳ್ಳಲು ಅವನೂ ಉಪ್ಪಿನವನೊಡನೆ ಸೇರಿಕೊಂಡು ತನ್ನ ಕಾಯಿಗಳ ಮೂಟೆಯೂ ಹೋಯಿತೆಂದು ಬಾಯಿ ಬಡಿದುಕೊಳ್ಳುತ್ತಾನೆ. (ನಗು), ಆ ರೀತಿ ಆಗದೆ ಈಗ ಸರಕಾರದವರೂ ಕೊಡತಕ್ಕ ಪರಿಹಾರ ಯಾವುದೇ ರೀತಿಯಿಂದಾದರೂ ಕಷ್ಟಪಟ್ಟುಕೊಂಡು ಇರುವ ಜನಕ್ಕೆ ಸಿಕ್ಕಬೇಕು. ಅದರಲ್ಲೂ ಶೀಘ್ರವಾಗಿ ದೊರೆಯುವಂತೆ ನೋಡಿಕೊಳ್ಳಬೇಕೆಂದು ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಸ್ನೇಹಿತರು ಅದರಲ್ಲೂ ನಮ್ಮ ವಿರೋಧ ಪಕ್ಷದ ನಾಯಕರು ಬಹಳ ಉಪಯುಕ್ತವಾದ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಸರಕಾರದವರು ಯಾವುದೇ ರೀತಿಯಾದ ರಿಲೀಫ್‌ಗಳನ್ನು ಕೊಟ್ಟಿದ್ದಾರೋ ಅದು ತಕ್ಷಣ ತಲುಪಬೇಕು ಎನ್ನುವುದರ ಬಗ್ಗೆ ಸರಕಾರದವರು ಈಗಾಗಲೇ ಆಜ್ಞೆಗಳನ್ನು ಹೊರಡಿಸಿದ್ದಾರೆ. ಆ ಆಜ್ಞೆಗಳನ್ನು ನಾವು ಓದಿ ನೋಡುವುದರಲ್ಲಿ ಸರಕಾರದ ಉದ್ದೇಶವೇನೋ ಬಹಳ ಸಾಧುವಾಗಿದೆ. ಇವರ ಆಶಯವೇನೋ ಚೆನ್ನಾಗಿದೆ. ಈ ಪರಿಹಾರ ಕೊಡುವ ಕೆಲಸದಲ್ಲಿ ಬಹಳ ಎಚ್ಚರಿಕೆಯಿಂದ ಕೆಲಸಮಾಡಬೇಕೆಂದು ಹೇಳಬೇಕಾಗಿದೆ. ಆಜ್ಞೆಗಳನ್ನೇನೋ ಹೊರಡಿಸಿದ್ದಾರೆ. ನಮ್ಮ ಮಾನ್ಯ ರೆವಿನ್ಯೂ ಸಚಿವರು ತಮ್ಮ ಭಾಷಣದಲ್ಲ ಕೂಡ ನಮ್ಮ ಅಧಿಕಾರಿಗಳು ಯಾವ ರೀತಿಯಾಗಿ ಕಷ್ಟಪಟ್ಟು ಕೆಲಸ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅವರಿಗೆ ಶಹಬಾಸ್‌ಗಿರಿಯನ್ನು ಕೊಟ್ಟಿದ್ದಾರೆ. ಅದನ್ನೂ ನಾನು ಒಪ್ಪುತ್ತೇನೆ. ಅವರು ಕೆಲವು ಭಾಗದಲ್ಲ ಸಾಲವನು ಕೊಡಬೇಕೆಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಆ ಸಾಲ ತಕ್ಷಣದಲ್ಲಿ ದೊರೆಯದೇ ಇರತಕ್ಕ ಕೆಲವು ಸಂದರ್ಭಗಳೂ ಇರುತ್ತವೆ. ಈಗ ಈ ನಮ್ಮ ಆಜ್ಞೆಯನ್ನು ನೋಡಿದರೆ ಪ್ರವಾಹದಿಂದ ನೊಂದವರಿಗೆ 10 ರೂಪಾಯಿಗಳಿಂದ ಒಂದು ನೂರು ರೂಪಾಯಿಗಳವರೆಗೆ ಸಹಾಯ ದ್ರವ್ಯ ಕೊಡಬೇಕೆಂದಿದೆ. ಆದರೆ ಕೆಲವು ಕಡೆ ಹತ್ತು ರೂಪಾಯಿಗಳನ್ನೂ ಕೊಟ್ಟಿಲ್ಲ. ಅನೇಕ ಕಡೆಗಳಲ್ಲಿ ಐದು ರೂಪಾಯಿಗಳನ್ನೂ ಕೊಟ್ಟಿಲ್ಲ. ಹತ್ತು ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದರೂ ಕೆಲವರಿಗೆ ಕೊಟ್ಟಿಲ್ಲ. ಈಗ ಹತ್ತು ರೂಪಾಯಿಗಳಷ್ಟು ಕೊಡುವ ಪರಿಹಾರ ಸಾಲದು ಎಂದು ಸಲವತ್ತು ರೂಪಾಯಿಗಳಷ್ಟು ಸಹಾಯವನ್ನು ಕೊಡಬೇಕು ಎಂದು ಆಜ್ಞೆಮಾಡಿದ್ದಾರೆ. ಇದು ಲೋಕೋಪಯೋಗಿ ಖಾತೆಯ ಸಚಿವರ ಭಾಷಣದಲ್ಲಿದೆ. ಈ ಭಾಷಣದಲ್ಲಿರುವಂತೆ ಆಜ್ಞೆಯೂ ಹೊರಡಬೇಕು; ಅದರಂತೆ ಈಗ ಕೊಡಬಹುದು. ಆದರೆ ಸರಕಾರ

(ಶ್ರೀ ಡಿ. ದೇವರಾಜ ಅರಸ್)

ದವರಿಗೆ ನಾನು ಮನವಿ ಮಾಡುವುದೇನೆಂದರೆ. ಇನ್ನೂ ನಿಮ್ಮ ಆಜ್ಞೆ ಆಯಾ ಸ್ಥಳದಲ್ಲಿರುವವರಿಗೆ ತಲಪಿಲ್ಲ. ಆಜ್ಞೆಯ ಉದ್ದೇಶವನ್ನು ಯಾರು ಆಕ್ಷೇಪಣೆ ಮಾಡುತ್ತಿಲ್ಲ. ತಾವು ಹೊರಡಿಸಿರತಕ್ಕ ಆಜ್ಞೆಯ ಪ್ರಕಾರ ಪರಿಹಾರದ ಕೆಲಸದಲ್ಲಿ ಯಾವ ರೀತಿಯಾಗಿದೆ ಎನ್ನುವುದರ follow up programmeನ್ನು ನೋಡುವಾಗ ತಾಲ್ಲೂಕುಗಳಲ್ಲಿರುವ ತಹಸೀಲುದಾರರು, ರೆವಿನ್ಯೂ ಇನ್ಸ್ಪೆಕ್ಟರುಗಳು, ಬಿ.ಡಿ.ಓ.ಗಳು, ಹಾಗೂ ವಿಲೇಜ್ ಲೆವೆಲ್ ವರ್ಕರುಗಳು, ಇವರೆಲ್ಲರೂ ಸಹಕರಿಸಿ ಕೆಲಸ ಮಾಡುತ್ತಿದ್ದಾರೆಯೇ ಇಲ್ಲವೇ? ಅಥವಾ ಈಗೇನು Red Tape ಎಂದು ಹೇಳುತ್ತಾರೆ. ಆ ರೀತಿಯಾದ ಅಡಚಣೆಗಳೇನಾದರೂ ಇವೆಯೇ ? ಮತ್ತು ಸರಕಾರಿ ಆಜ್ಞೆಯ ಪ್ರಕಾರ ಕೆಲಸ ಕಾರ್ಯಗಳು ನಡೆಯದಿದ್ದರೆ ಈ ಆಜ್ಞೆಯಂತೆ ಯಾವ ರೀತಿಯಾದ ಪರಿಹಾರ ಕೊಡಬಹುದು ಎಂದು ಯೋಚಿಸಬೇಕು. ತಹಸೀಲುದಾರರು, ಇನ್ಸ್‌ಪೆಕ್ಟರಿಗೆ ಕಾಗದ ಬರೆದು, ಅವರು ಎಂಟು ದಿನಗಳಾದ ಮೇಲೆ ವರದಿ ಬರೆಯುವುದು. ಈ ರೀತಿ ಆದರೆ ನಿಮ್ಮ ಆಜ್ಞೆಯಿಂದ ಪ್ರಯೋಜನವಾಗುವುದಿಲ್ಲ. ಆದುದರಿಂದ ನಾನು ಸೂಚಿಸುವುದೇನೆಂದರೆ ಸರಕಾರಿ ಆಜ್ಞೆಗಳನ್ನು ಹೊರಡಿಸುವುದು ಎಷ್ಟು ಫಲಕಾರಿಯಾಗಿವೆ ಎನ್ನುವುದನ್ನು ತಿಳಿದುಕೊಳ್ಳಲು ಅದರ ಬಗ್ಗೆ ವರದಿಯನ್ನು ತರಿಸಿಕೊಳ್ಳುವುದು ಅಗತ್ಯವೆಂದು ನಾನು ಹೇಳಬಯಸುತ್ತೇನೆ.

ಇನ್ನು ಮನೆಗಳನ್ನು ಕಟ್ಟತಕ್ಕ ವಿಚಾರದಲ್ಲಿ ಇಂಟರಿಮ್ ರಿಲೀಫ್ ಮತ್ತು ಪರ್ಮನೆಂಟ್ ರಿಲೀಫ್ ಕೊಡುವ ಬಗ್ಗೆ ಕೆಲವು ಸಲಹೆಗಳು ಬಂದಿವೆ. ಸರಕಾರದ ಆಜ್ಞೆಯ ರೀತ್ಯಾ ಇಂಟರಿಮ್ ರಿಲೀಫ್ ಕೊಡಬೇಕಾದರೆ ಈಗ ಒಂದು ಸರಕಾರಿ ಆಜ್ಞೆಯನ್ನು ಹೊಡಿಸಿದ್ದಾರೆ. ಈ ತಿಂಗಳು 25ನೆಯ ತಾರೀಖು ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಅದರಲ್ಲಿ ಪ್ರತಿಯೊಂದು ನೊಂದ ಕುಟುಂಬದವರಿಗೆ 300 ರೂಪಾಯಿಗಳವರೆಗೂ ಸಾಮಾನುಗಳನ್ನು ಒದಗಿಸಿಕೊಡಬೇಕು. ಡೆಪ್ಯುಟಿ ಕಮೀಷನರಿಗೆ ಈ ವಿಚಾರದಲ್ಲಿ ಸಂಪೂರ್ಣ ಅಧಿಕಾರ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಈ ಬಗ್ಗೆ ನಾನು ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಸರ್ಕಾರಿ ಡಿಪೋಗಳಲ್ಲಿ ಎಲ್ಲಿ ಸಾಮಾನುಗಳು ಸಿಕ್ಕುತ್ತವೋ ಅಂತಹ ಕಡೆಗಳಿಂದ ಒದಗಿಸಿಕೊಡಿ. ಒಂದು ವೇಳೆ ಸಾಮಾನುಗಳು ಸಾಕಷ್ಟು ಸಿಕ್ಕದೇ ಹೋದ ಪಕ್ಷದಲ್ಲಿ ಸ್ಟೈನಿಯೊರೇಜ್ ರೇಟ್‌ಗೆ ಮೀರದ ರೀತಿಯಲ್ಲಿ ತಾವೇ ಸಾಮಾನುಗಳನ್ನು ಕೊಂಡುಕೊಡಬಹುದು ಎಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೀರಿ. ಈ ಆಜ್ಞೆಯ ಪ್ರಕಾರ ಇಂಟರಿಮ್ ರಿಲೀಫ್ ಕೊಡುವ ಬಗ್ಗೆ ಯಾರು ಯಾರಿಗೆ ಸಂಪೂರ್ಣವಾಗಿ ಮನೆಗಳು ನಾಶವಾಗಿ ನಿಲ್ಲುವುದಕ್ಕೆ ನೆಲೆ ಇಲ್ಲದೆಯೇ ಇರುತ್ತಾರೋ ಅಂತಹ ಜನಗಳಿಗೆ ಈ ಸರ್ಕಾರಿ ಆಜ್ಞೆಯಿಂದ ಖಂಡಿತವಾಗಿ ಸಹಾಯವಾಗಲಾರದು ಎಂದು ನಾನು ಹೇಳುತ್ತೇನೆ.

Sri KADIDAL MANJAPPA.—That was more intended for permanent relief.

ಶ್ರೀ ಡಿ. ದೇವರಾಜ ಅರಸ್.—ಎಲ್ಲಿ ಈ ಸಮಾನುಗಳು ದೊರೆಯುವುದಿಲ್ಲವೋ ಅಂಥ ಕಡೆಗಳಲ್ಲಿ ಜಿಂಕ್‌ಷೀಟ್‌ಗಳನ್ನು ಕೊಡಿ ಎಂದು ಹೇಳುತ್ತೀರಿ

Sri KADIDAL MANJAPPA.—Provision is made in the rules to erect temporary shelter and the cost of it is borne by the Government. For building permanent dwelling houses we gave them sites free of costs and also building materials of the value of Rs. 300. This comes under permanent measures.

Sri C. M. ARUMUGHAM.—Sir, you may not give me a chance to speak but may I point out that Tibetians when they came to India were treated very generously and were given Rs. 1000 each incurring the displeasure of China. Here is a state of emergency and yet you think of giving Rs. 100 or 200 or 300. Why not declare a state of emergency and ask for aid from the Central Government? After all, such an emergency happens once in 30 or 40 years.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸಚಿವರು ಕೋರಡಿಸಿರುವ ಸರಕಾರಿ ಆಜ್ಞೆಯಲ್ಲಿ ಎರಡು ಅಂಶಗಳು ಅಡಕವಾಗಿವೆ. ಖಾಯಂ ಆಗಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ 300 ರೂಪಾಯಿಗಳವರೆಗೆ ಸಾಮಾನುಗಳನ್ನು ಕೊಡುವುದು ಮತ್ತು ಜೊತೆಗೆ ಜಾಗ್ರತೆಯಾಗಿ ನಗದು ಪರಿಹಾರಧನವನ್ನು 40ರಿಂದ 100 ರೂಪಾಯಿಗಳವರೆಗೆ ಕೊಡುವುದು. ಆ ಬಗ್ಗೆ ಸರಕಾರಿ ಆಜ್ಞೆಯಲ್ಲಿರತಕ್ಕ ರೆಲವೆಂಟ್ ಪೋರ್ಷನನ್ನು ಈ ಸಭೆಯ ಮುಂದೆ ಓದಿ ಹೇಳುತ್ತೇನೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಸರ್ಕಾರದವರು ಕೇವಲ 300 ರೂಪಾಯಿಗಳವರೆಗೆ ಸಾಮಾನುಗಳನ್ನು ಕೊಳ್ಳುವುದಕ್ಕಾಗಿ ಪರಿಹಾರ ಧನ ಕೊಡುತ್ತೇವೆಂದು ಹೇಳಿರುವ ಆಜ್ಞೆಯನ್ನು ಪುನರಾಲೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ. 40 ರಿಂದ 100 ರೂಪಾಯಿಗಳವರೆಗೆ ನಗದು ಪರಿಹಾರ ಎಂದರೆ ಹೇಗೆ? 300 ರೂಪಾಯಿಗಳಾದರೂ ಮಿನಿಮಂ ಮಾಡಬೇಕು. ಒಂದು ಕಡೆ ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಕೆಲವರು ಹೇಳುತ್ತಾರೆ.

Sri KADIDAL MANJAPPA.—There is not much difference of opinion.

ಶ್ರೀ ಡಿ. ದೇವರಾಜ್ ಅರಸ್.—ಈಗ ಕೊಡತಕ್ಕ 300 ರೂಪಾಯಿಗಳಿಂದ ಪ್ರವಾಹ ಪೀಡಿತ ಜನರಿಗೆ ಏನಾಗುತ್ತದೆ? ನಿಮ್ಮ ಅಂದಾಜಿನ ಪ್ರಕಾರ ಆಫೀಸರು 300 ರೂಪಾಯಿಗಳವರೆಗೆ ಎಂದು ಹೇಳಿರುವುದರಿಂದ 1 ನಯಾಪೈಸೆಯಿಂದ 300 ರೂಪಾಯಿಗಳವರೆಗೆ ಎಷ್ಟು ಬೇಕಾದರೂ ಕೊಡಬಹುದು. Interruption of it will always be to the advantage of the person interpreting it. ಆಗ ಏನಾಗುತ್ತದೆಂದರೆ ಲೋಕಲ್ಲಾಗಿ ಜನರಿಗೆ ಸಹಾಯ ದೊರೆಯುವುದಕ್ಕೆ ಬದಲಾಗಿ ತೊಂದರೆಯಾಗುತ್ತದೆ. ಆಗ ಆಫೀಸರು 300 ರೂಪಾಯಿಗಳನ್ನು ಕೊಡುವುದಿಲ್ಲ. ಕೇವಲ 100 ರೂಪಾಯಿಗಳನ್ನು ಮಾತ್ರ ಕೊಡುತ್ತೇವೆಂದು ಹೇಳುವ ಪರಿಸ್ಥಿತಿ ಬರುತ್ತದೆ. ಆಗ ಇನ್ನೊಬ್ಬನ ಹತ್ತಿರ ಸಹಾಯ ಕೇಳಲಿಕ್ಕೆ ಮತ್ತು ಸರ್ಟಿಫಿಕೇಟ್ ತರುವುದಕ್ಕೆ ಹೋಗಬೇಕು. ಆಗ ಮಾತ್ರ ನೊಂದವರಿಗೆ ಹೆಚ್ಚಿನ ಹಣ ಸಹಾಯವಾಗುತ್ತದೆ.

Sri C. J. MUCKANNAPPA.—It is the discretionary power vested in the officer.

Sri J. B. MALLARADHYA.—If the officer is empowered to give only Rs. 300 even in a case where only Rs. 100 is required to be given he may give Rs. 300. We had experience of it.

Sri D. DEVARAJ URS.—Who is to estimate whether a man should get Rs. 200 or Rs 300 or Rs. 100?

Sri J. B. MALLARADHYA.—The Local Officer.

ಶ್ರೀ ಡಿ. ದೇವರಾಜ್ ಅರಸ್.—ನೀವು ಮನೆ ಕಟ್ಟುವುದನ್ನು ಹೇಳುತ್ತಿದ್ದೀರಿ ನಾನು 40 ಅಥವಾ 100 ರೂಪಾಯಿಗಳ ವಿಷಯವಾಗಿ ಮಾತನಾಡುತ್ತಿಲ್ಲ. ಶ್ರೀಮಾನ್ ಮಲ್ಲಾರಾಧ್ಯರಿಗೆ ಒಂದು ವಿಷಯವನ್ನು ತಿಳಿಸುತ್ತೇನೆ. ಖಾಯಂ ಆಗಿ ಗ್ರಾಮಗಳಲ್ಲಿ low lying areas ಮತ್ತು higher regions of the same area ಅಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಸರ್ಕಾರದವರು ಶುರು ಮಾಡುತ್ತಾರೆನ್ನೋಣ. ಅಂತಹ ಕಡೆಗಳಲ್ಲಿ ಮನೆ ಕಟ್ಟುವುದಕ್ಕೆ ಕೇವಲ 300 ರೂಪಾಯಿಗಳವರೆಗೆ ಎಂದು ಹೇಳಿದರೆ ಹೇಗೆ? Not less than 300 ಅಥವಾ minimum 300 ಎಂದಾದರೂ ಸರ್ಕಾರಿ ಆಜ್ಞೆಯಲ್ಲಿರಬೇಕು.

ಶ್ರೀ ಬಿ. ರಾಚಯ್ಯ.—ಯಾವತ್ತಿದ್ದರೂ ಅಂತಹ ಕಡೆಗಳಲ್ಲಿ ಮನೆ ಕಟ್ಟಲೇಬೇಕು.

ಶ್ರೀ ಡಿ. ದೇವರಾಜ ಅರಸ್.—ಇನ್ನು ಇಂಟರಿಮ್ ರಿಲೀಫ್ ಕೊಡುವ ಬಗ್ಗೆ ಶ್ರೀಮಾನ್ ರಾಜಶೇಖರಮೂರ್ತಿ ಮತ್ತು ನನ್ನ ಇತರ ಸ್ನೇಹಿತರು ಅನೇಕರು 7ನೆಯ ತಾರೀಖಿನಿಂದ ಇದುವರೆವಿಗೂ ನಿಜವಾಗಿ ಪ್ರವಾಹಪೀಡಿತರಿಂದ ತುತ್ತಾದ ಜನರಿಗೆ ಟೆಂಪೊರರಿ ಷೆಡ್‌ಗಳನ್ನು ಕೂಡ ಕೊಟ್ಟಿಲ್ಲವೆಂಬುದಾಗಿ ಸರ್ಕಾರವನ್ನು ಟೀಕೆ ಮಾಡಿ ಹೇಳಿದರು. ಆ ರೀತಿ ಸರ್ಕಾರ ಇದುವರೆಗೂ ಕೊಡದೇ ಇರುವುದು ನನಗೆ ಬಹಳ ವಿಷಾದಕರವಾಗಿದೆ ಮತ್ತು ಅದು ವಾಸ್ತವಾಂಶವಾಗಿದೆ. ಸರ್ಕಾರದಲ್ಲಿ ಈ ಪ್ರವಾಹದಿಂದ ನಷ್ಟ ಹೊಂದಿದವರು ಮನವಿ ಮಾಡಿದಾಕ್ಷಣಕ್ಕೆ ಸರ್ಕಾರದವರು ಸುಮ್ಮನೆ ಆಜ್ಞೆ ಹೊರಡಿಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಡೆಪ್ಯುಟಿ ಕಮೀಷನರ್ ಅವರು ಸರ್ಕಾರದಲ್ಲಿ ಮನೆಗಳ ಸಾಮಾನುಗಳು ಸ್ಟಾಕ್ ಇಲ್ಲದಿದ್ದರೆ ಕೊಂಡುಕೊಂಡಾದರೂ ತ್ವರಿತವಾಗಿ ನೊಂದವರಿಗೆ ಸಹಾಯ ಮಾಡಬೇಕು. ಸರ್ಕಾರದ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಸಾವಿರಾರು ಇಲಾಖೆಗಳಿವೆ. ಜಿಯಾಲಜಿಕಲ್ ಇಲಾಖೆ ಮೈನಿಂಗ್ ಇಲಾಖೆಗಳಲ್ಲಿ ಓರ್ಸನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸತಕ್ಕ ಲಾರಿಗಳು ನೂರಾರು ಇವೆ. ಬೇಕಾದಷ್ಟು ಕಾಡುಗಳಲ್ಲಿ ಮರಗಳನ್ನು ಕಡಿಸಿ ಪ್ರವಾಹಪೀಡಿತ ಪ್ರದೇಶಗಳಿಗೆ ಅವನ್ನೆಲ್ಲ ಸುಲಭವಾಗಿ ಈ ಮೂಲಕ ಸಾಗಿಸಿಕೊಂಡು ಬಂದು ಆ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಸಿಕೊಡಬಹುದು. ಈ ಸಂದರ್ಭದಲ್ಲಿ ಅರಣ್ಯಶಾಖೆಯ ಸಚಿವರು ಈ ಸಭೆಯಲ್ಲಿದ್ದಿದ್ದರೆ ಬಹಳ ಚೆನ್ನಾಗಿತ್ತು.

Sri C. M. ARUMUGHAM.—He has gone to forest.

Sri D. DEVARAJ URS.—If the Government minds, we can house 10,000 people within no time or at least within 5 to 8 days. ಈ ರೀತಿ ತಾವು ಏತಕ್ಕೆ ಮಾಡುವುದಕ್ಕಾಗುವುದಿಲ್ಲ? ಡೆಪ್ಯುಟಿ ಕಮಿಷನರ್ ತಮ್ಮ ವಿವೇಚನೆಯ ಮೇರೆಗೆ ರೇಟ್ ಜಾಸ್ತಿ ಹಾಕಬಹುದು. ಅಥವಾ ಕಡಿಮೆ ಹಾಕಬಹುದು. ಆದರೆ ಸಾಧಾರಣವಾದ ಪರಿಸ್ಥಿತಿಯಲ್ಲಿ ಸರ್ಕಾರಿ ಆಜ್ಞೆಗಳು ಯಾವರೀತಿಯಾಗಿ ಹೊರಡುತ್ತವೋ ಅದೇ ರೀತಿಯಾಗಿ ಅದೇ ಮನೋಭಾವದಿಂದ ಈಗಿನ ಆಜ್ಞೆಗಳು ಹೊರಡುತ್ತಿವೆ. ಈ ವಿಶೇಷ ಸಂದರ್ಭಗಳಲ್ಲೂ ಈ ರೀತಿಯಾಗಿ ಇಂತಹ ಕ್ಲಿಷ್ಟ ಸಮಸ್ಯೆಗಳನ್ನು ಸರ್ಕಾರದವರು ಟ್ಯಾಕಲ್ ಮಾಡುತ್ತಿದ್ದಾರೆಂದು ಹೇಳಿದರೆ ಖಂಡಿತವಾಗಿ ಈಗಿನ ಪ್ರವಾಹಗಳಿಂದ ಉಂಟಾಗಿರತಕ್ಕ ಕಷ್ಟನಷ್ಟಗಳನ್ನು ಪರಿಹರಿಸುವುದಕ್ಕೆ ಸರ್ಕಾರದವರಿಗೆ ಸಾಧ್ಯವಾಗುವುದಿಲ್ಲವೆಂದು ನಾನು ಒತ್ತಿ ಹೇಳಬೇಕಾಗಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹೇಳಿ, ಹೇಳಿ. ಇನ್ನೊಂದು ಸಾರಿ ಚೆನ್ನಾಗಿ ಹೇಳಿ.

ಶ್ರೀ ಡಿ. ದೇವರಾಜ್ ಅರಸ್.—ಅರಣ್ಯ ಇಲಾಖೆಯಲ್ಲಿ ಸಾವಿರಾರು ಜನರು ಇಲಾಖೆಗಳ ಕೈಕೆಳಗೆ ಇರತಕ್ಕ ಆಫೀಸ್‌ಗಳಲ್ಲಿ ಕೂಲಿ ಮಾಡಿಕೊಂಡು ಇದ್ದಾರೆ. ಇವೊತ್ತು ಸರಕಾರಿ ಆಜ್ಞೆ ಹೊರಡಿಸಿದರೆ ಒಂದು ಲಕ್ಷ ಬೊಂಬುಗಳನ್ನು ಕೇವಲ ನಾಲ್ಕೈದು ದಿವಸಗಳಲ್ಲಿ ಕಡಿದುಕೊಡಬಲ್ಲರು.

ತೆಂಗಿನ ಗರಿಗಳು ಬೆಂಗಳೂರಿನ ಕೆಲವು ತಾಲ್ಲೂಕುಗಳಲ್ಲಿ ಲಕ್ಷಗಟ್ಟಲೆ ಸಿಕ್ಕುತ್ತವೆ. ಇವೊತ್ತು ಸರ್ಕಾರೀ ಆಜ್ಞೆ ಮಾಡಿದರೆ ಕೆಲವು ಕಡೆಗಳಲ್ಲಿರತಕ್ಕ ತೆಂಗಿನಗರಿಗಳನ್ನೆಲ್ಲ ಕಡಿಸಿ ಅಲ್ಲಿಂದ ಪ್ರವಾಹ ಪೀಡಿತ ಪ್ರದೇಶಗಳಿಗೆಲ್ಲಾ ಟ್ರಾನ್ಸ್‌ಪೋರ್ಟ್ ಮಾಡಬಹುದು. ಆದರೆ ಧಾರವಾಡ ಜಿಲ್ಲೆಗೆ ಬೊಂಬು ಬೇಕಾದರೆ ಧಂಡೇಲಿ ಫಾರೆಸ್ಟ್‌ನಿಂದ ಕಡಿದು ಕಳುಹಿಸುವುದಕ್ಕೆ ಸಾಧ್ಯವಿಲ್ಲ. ಆಗ ಟೆಂಪೊರರಿ ಮನೆಗಳನ್ನು ಕಟ್ಟಿಕೊಳ್ಳಬೇಕು. ನಮ್ಮ ಫಾರೆಸ್ಟ್‌ನಲ್ಲಿ ನಮ್ಮ ಕೈಯಲ್ಲಿ ಇಲ್ಲದೇ ಇರತಕ್ಕ ತೆಂಗಿನ ಗರಿಗಳನ್ನು ಬೇಕಾದರೆ ಕೊಂಡುಕೊಳ್ಳೋಣ. ಬೊಂಬುಗಳು ಮತ್ತು ಗರಿಗಳಿಂದ ಸುಮಾರು 25 ಲಕ್ಷ ಮನೆಗಳವರೆಗೆ ಟೆಂಪೊರರಿ ಷೆಡ್‌ಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಿದೆ. ಆ ರೀತಿ ವ್ಯವಸ್ಥೆಯನ್ನೇನು ಇದುವರೆಗೂ ಮಾಡಿಲ್ಲ. ಈಗ ಅನೇಕ ಕಡೆಗಳಲ್ಲಿ ಹಾಹಾಕಾರ ಎಳುತ್ತಿದೆ. ಜನಗಳು ಕೂರುವುದಕ್ಕೂ, ನಿಲ್ಲುವದಕ್ಕೂ ಜಾಗವಿಲ್ಲದೇ ವಿಶೇಷವಾಗಿ ನರಳುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಜಗಲಿಗಳ ಮೇಲೂ ಕೂಡ ಜಾಗವಿಲ್ಲ. ಅಂತಹವರು

ಎಲ್ಲಿ ಹೋಗಿ ವಾಸ ಮಾಡಬೇಕು? ಕೂಡಲೆ ಈ ಬಗ್ಗೆ ತಕ್ಕ ವ್ಯವಸ್ಥೆಯನ್ನು ಮಾಡಲು ಸರ್ಕಾರದವರು ತೀವ್ರತೆಯಿಂದ ಈ ವಿಚಾರವನ್ನು ನೋಡಬೇಕು ಎಂಬುದಾಗಿ ನಾನು ಒತ್ತಾಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ. ಕೆಲವು ಕಡೆ ಪ್ರವಾಹಗಳು ನೇರವಾಗಿ ನುಗ್ಗಿ ಬರುವುದರಿಂದ ಹೊಳೆಗಳು ವಿಶಾಲವಾಗಿ ಹರಿದು ಬೇಕಾದಷ್ಟು ಫ್ಲಡ್ಸ್ ಬಂದು ಅನಾಹುತ ಆಗಿರುವುದರ ಜೊತೆಗೆ ಕೆಲವು ಮಲೆನಾಡು ಪ್ರದೇಶಗಳಲ್ಲಿ ಮಲೆನಾಡು ಸರಹದ್ದಿಗೆ ಏನೇನು ಕಷ್ಟನಷ್ಟಗಳಾಗಿವೆ. ಎಂಬುದನ್ನು ಸರ್ಕಾರದವರು ಚೆನ್ನಾಗಿ ತಿಳಿದುಕೊಳ್ಳಬೇಕು. ಕೆಲವು ನನ್ನ ಮಾನ್ಯ ಸ್ನೇಹಿತರು ಮತ್ತು ಶ್ರೀ ವರ್ಮಾ ಪುಟ್ಟೆಗೌಡರು ನೇರವಾಗಿ ಫ್ಲಡ್ಸ್‌ನಿಂದ ಕೆಲವು ಕಡೆ ಅಫೆಕ್ಟ್ ಆಗಿಲ್ಲವೆಂಬುದಾಗಿ ಹೇಳಿದರು. ಆದರೆ ಮಲೆನಾಡು ಪ್ರದೇಶಗಳಲ್ಲಿನ ಸ್ಥಿತಿಯೇ ಬೇರೆ. ಅನೇಕ ಕಡೆಗಳಲ್ಲಿ ಅಶ್ವಿನೀ ಮಳೆ ಬರುವುದಕ್ಕೆ ಮುಂಚೆಯೇ ರೈತರು ಆಗಲೇ ರಾಗಿ, ಜೋಳ, ಎಳ್ಳು ಫಸಲು ಮಾಡಿದ್ದರು. ಹೆಚ್ಚು ಮಳೆ ಬರುವುದಕ್ಕೆ ಮುಂಚೆಯೇ ಈ ಬೆಳೆಗಳನ್ನು ಭೂಮಿಯಲ್ಲಿ ಹಾಕಿದ್ದರು. ಉದಾಹರಣೆಗೆ, ಬೆಂಗಳೂರು ಜಿಲ್ಲೆಯನ್ನು ತೆಗೆದುಕೊಳ್ಳೋಣ. ಈಗ ಆರಿದ್ರ ಮಳೆ ಕಳೆದಮೇಲೆ ರಾಗಿ ಬಿತ್ತನೆ ಮಾಡುತ್ತಿದ್ದಾರೆ. ಗೌರಿ ತಿಂಗಳಿನಲ್ಲಿ ಕೊಯ್ಲು ಬರಬೇಕಾಗಿತ್ತು. ಈಗ ಏನಾಗಿದೆಯೆಂದರೆ ವಿಪರೀತ ಮಳೆಬಿದ್ದು ಫಸಲು ಸಂಪೂರ್ಣವಾಗಿ ಹೋಗಿದೆ. ಅನೇಕ ತಾಲ್ಲೂಕುಗಳಲ್ಲಿ ನಾವು ಹಾಕಿರತಕ್ಕ ಬಿತ್ತನೆರಾಗಿ ಕೂಡ ವಾಪಸ್ಸು ಬರುವ ಹಾಗಿಲ್ಲ. ಬೆಳೆಯಾಗತಕ್ಕ ಭೂಮಿಯಲ್ಲಿ ಫಸಲು ಇಲ್ಲ. ಆದರೆ ಎಲ್ಲದಕ್ಕೂ ಸರ್ಕಾರವೇ ಪರಿಹಾರ ಕೊಡುವುದಕ್ಕೂ ಸಾಧ್ಯವಿಲ್ಲ. ಅದಕ್ಕಾಗಿ ಸರ್ಕಾರದವರು ಇಂತಹ ಸಂದರ್ಭಗಳಲ್ಲಿ ಏನಾದರೂ ಒಂದು ರೀತಿಯಾಗಿ ಪರಿಹಾರವನ್ನು ಕೊಡಬೇಕು. ಈಗ ಕಂದಾಯವನ್ನು ವಜಾ ಮಾಡುವ ವಿಷಯದಲ್ಲಿ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಆ ಪ್ರಕಾರ ಯಾವ ಯಾವ ಪ್ರದೇಶಗಳಲ್ಲಿ ಹಾವಳಿಯಿಂದ ಬೆಳೆಗಳು ನಷ್ಟವಾಗಿವೆಯೋ ಎಲ್ಲೆಲ್ಲಿ ಹೊಲಗಳು ಪ್ರವಾಹಗಳಿಂದ ಮುಳುಗಡೆಯಾಗಿವೆಯೋ, ಎಲ್ಲೆಲ್ಲಿ ಭೂಮಿ ಕೊರೆದು ಹೋಗಿ ಫಸಲನ್ನು ನಷ್ಟಮಾಡಿದೆಯೋ ಅಂತಹ ಪ್ರದೇಶಗಳಲ್ಲಿ ಕಂದಾಯ ವಸೂಲಾತಿಯನ್ನು ಮಾಫಿ ಕೊಡುವುದು ನ್ಯಾಯ ಮತ್ತು ಸರಿಯೆಂದು ನಾನು ಹೇಳುತ್ತೇನೆ. ಸರ್ಕಾರದವರು ಆ ರೆವಿನ್ಯೂ ಕೋಡಿನಲ್ಲಿ ಎಲ್ಲೆಲ್ಲಿ ಎರಡಾಣೆ ಫಸಲಗಿಂತ ಕಡಮೆ ಬೆಳೆಯಾಗಿರುತ್ತದೋ ಅಂಥ ಪ್ರದೇಶಗಳಲ್ಲಿರತಕ್ಕ ಜನಗಳಿಗೆ ಕಂದಾಯ ಪೂರ್ತಿ ರೆಮಿಷನ್ ಕೊಡಬೇಕೆಂದು ತಿಳಿಸಿದ್ದಾರೆ. ಈ ಒಂದು ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಹೊರಟರೆ ಸರ್ಕಾರದವರು ಎಲ್ಲಿಯವರೆಗೆ ಸಹಾಯ ನೀಡಬಹುದು?

1–00 P.M.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹಾಗಾದರೆ ರೆವಿನ್ಯೂ ಕೋಡಿನಲ್ಲಿರತಕ್ಕ ನಿಬಂಧನೆಗಳನ್ನು ಮೀರಿ ರೆಮಿಷನ್ ಕೊಡಬೇಕೆಂದು ಹೇಳುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ಹೌದು. ಇಂಥ ಪರಿಸ್ಥಿತಿಯನ್ನು ಒಂದು ವಿಶೇಷ ಸಂದರ್ಭವೆಂದು ಪರಿಶೀಲನೆಮಾಡಿ ತೀರ್ಮಾನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈ ಟೆನೆಂಟ್ ಕ್ಲಾಸ್ ಏನಿದ್ದಾರೆ ಅವರಿಗೆ 500 ರೂಪಾಯಿಗಳವರೆಗೆ ಸಹಾಯ ಧನವನ್ನು ಅಂದರೆ ಬಡ್ಡಿಯಿಲ್ಲದೆ ಸಾಲವನ್ನು ಕೊಡಬಹುದು ಸರ್ಕಾರದವರು ಒಂದು ಆಜ್ಞೆ ಮಾಡಿದ್ದಾರೆ. ಆದರೆ ಕೆಲವು ಪ್ರದೇಶಗಳಲ್ಲಿ — ಅಂದರೆ ರೆವಿನ್ಯೂ ಸಚಿವರ ಕ್ಷೇತ್ರ—ಇಂಥ ಕಡೆ ಈ ಹಣ ಸರಿಯಾಗಿ ರೈತರಿಗೆ ತಲುಪಬಹುದು. ಅದೇ ರೀತಿ ಎಲ್ಲಾ ಕ್ಷೇತ್ರಗಳಲ್ಲಿಯೂ ಸರ್ಕಾರದವರು ಕೊಡತಕ್ಕ ಧನ ಸಹಾಯ ನೇರವಾಗಿ ಕಷ್ಟಕ್ಕೀಡಾದ ಜನರಿಗೆ ಸೇರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಕಡೆ ಈ ಹಿಂದೆಲ್ಲ ಶ್ಯಾನುಭೋಗರು ಈ ಡ್ಯಾಮೇಜನ್ನು ಅಂದಾಜು ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡತಕ್ಕ ಕಾಲದಲ್ಲಿ ರೈತನು ಹೇಳಿದ್ದನ್ನು ಕೇಳದೆ ಐದು ಎಕರೆ ಜಮೀನಿನಲ್ಲಿ ಬೆಳೆಯೆಲ್ಲಾ ಲುಕ್ಸಾನಾಗಿದ್ದರೆ ಎಕರೆಗೆ ಸರ್ಕಾರದವರು ಐದು ರೂಪಾಯಿ ಪರಿಹಾರ ಕೊಡಬೇಕೆಂದಿದ್ದರೆ ಆ 25 ರೂಪಾಯಿ ಪರಿಹಾರದಲ್ಲಿ ರೈತರ ಅರ್ಧ ಭಾಗವನ್ನು

(ಶ್ರೀ ಡಿ. ದೇವರಾಜ ಅರಸ್)

ಅಂದರೆ 12½ ರೂಪಾಯಿಗಳನ್ನು ಶ್ಯಾನುಭೋಗರಿಗೆ ಹಿಸ್ಸೆಕೊಡುವುದಾದರೆ ಆ 25 ರೂಪಾಯಿಗಳ ಪರಿಹಾರಕ್ಕೆ ಶಿಫಾರ್ಸುಮಾಡುತ್ತೇನೆ, ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತಿದ್ದರಂತೆ. ಇಂಥ ವ್ಯವಹಾರಗಳು ಕೆಲವು ಕಡೆ ಈಗಲೂ ಹಾಗೆ ನಡೆಯುತ್ತಿವೆಯೆಂದು ಕೇಳುತ್ತಿದ್ದೇನೆ. ಈ ಟೆನೆಂಟ್ ಕ್ಲಾಸ್ ಏನಿದೆ ಇದು mostly ignorant class. ಆದುದರಿಂದ ಈಗಾಗಲೇ ಶ್ರೀನರಸಿಂಹೇಗೌಡರೂ, ತಾಲ್ಲೂಕ್ ಲೆವೆಲ್‌ನಲ್ಲೂ, ಡಿಸ್ಟ್ರಿಕ್ಟ್ ಲೆವೆಲ್‌ನಲ್ಲೂ ಒಂದೊಂದು ಸಮಿತಿಯನ್ನು ನೇಮಕಮಾಡಿ ಆ ಮೂಲಕ ಈ ಪರಿಹಾರ ಧನವನ್ನು ವಿಲೇವಾರಿ ಮಾಡಬೇಕೆಂದು ಏನು ಒಂದು ಸೂಚನೆ ಮಾಡಿದ್ದಾರೆ ಅದಕ್ಕೆ ನನ್ನ ಸಂಪೂರ್ಣ ಅನುಮತಿ ಇದೆ. ಅದೇ ರೀತಿ ಈ ವಿಚಾರದಲ್ಲಿ ಒಂದು ಸೆಂಟ್ರಲ್ ಸಮಿತಿ ಸಹ ಇರಬೇಕೆಂದು ಶ್ರೀಮಾನ್ ಮಲ್ಲಾರಾಧ್ಯರು ಸಲಹೆ ಮಾಡಿದ್ದಾರೆ. ಅದನ್ನು ಸಹ ನಾನು ಅನುಮೋದಿಸುತ್ತೇನೆ. ಆದರೆ ಈಗ ಎಲ್ಲೆಲ್ಲಿ ತಾಲ್ಲೂಕ್ ಬೋರ್ಡ್‌ಗಳಿವೆ, ಅವೂ ಮತ್ತು ಎಲ್ಲೆಲ್ಲಿ ಲೋಕಲ್ ಬೋರ್ಡುಗಳು ಕೆಲಸಮಾಡುತ್ತಿವೆಯೋ ಅವುಗಳ ಮೂಲಕ ಈ ಹಂಚಿಕೆಯ ಕಾರ್ಯವನ್ನು ನಡೆಸಬಹುದು. ಹಾಗೆ ಸರ್ಕಾರವೇನಾದರೂ ಒಂದು ಸಮಿತಿಯನ್ನು ಮಾಡಿ ಆ ಮೂಲಕ ಈ ಹಣವನ್ನು ಹಂಚದೆ ಸದಸ್ಯರ ಮೂಲಕ ಹಂಚಲು ಹೊರಟರೆ ಆಗ ಈ ಪ್ರವಾಹವೆಂಬುದು ಎಲ್ಲಾ ಕಡೆಗಳಿಗೂ ಒಂದು ಬಿಡುತ್ತದೆ! ಆ ಕಾರಣದಿಂದ—ಈಗೇನು ಸರ್ಕಾರದವರು ಒಂದು ಯುಜುವಲ್ ಆಗಿ ಹಣವನ್ನು ಹಂಚಲು ವ್ಯವಸ್ಥೆ ಮಾಡಿದ್ದಾರೋ ಅದರಂತೆ ನಡೆಸಿದರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹಾಗಾದರೆ ಮತ್ತೆ ಆ ಶ್ಯಾನುಭೋಗರ ಮೂಲಕವೇ ಹಂಚಿಕೆಯಾಗಬೇಕೆಂದು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅಲ್ಲ. ಶ್ಯಾನುಭೋಗರೇನಿದ್ದರೂ ಶಿಫಾರ್ಸು ಮಾಡತಕ್ಕವರು. ಅದೇ ರೀತಿ ಈಗ ಎಲ್ಲೆಲ್ಲಿ ಸ್ಟ್ಯಾಟ್ಯೂಟರಿ ಬಾಡಿಗಳು ಕೆಲಸಮಾಡುತ್ತಿವೆಯೋ ಅವುಗಳ ಸಲಹೆಗಳನ್ನು ತೆಗೆದುಕೊಳ್ಳೋಣ. ಅಂಥ ಗ್ರಾಮ ಪಂಚಾಯಿತಿಯ ಸದಸ್ಯರಿಗೆ ಗೊತ್ತಾಗದಂಥ ವಿಷಯಗಳು ಅಸೆಂಬ್ಲಿಯ ಸದಸ್ಯರಿಗೆ ಹೇಗೆ ಗೊತ್ತಾಗುತ್ತವೆ ? ಇನ್ನು ಕೊನೆಯದಾಗಿ ನಾನು ಹೇಳಬೇಕಾದ ವಿಚಾರವೇನಿದೆ ಎಂದರೆ ಈಗ ಸಭೆಯ ಮುಂದೆ ಚರ್ಚೆಯಾಗುತ್ತಿರುವ ಪ್ರಸ್ತಾಪದ ವಿಚಾರದಲ್ಲಿ ಒಂದೆರಡು ತಿದ್ದುಪಡಿಗಳು ಬಂದಿವೆ. ಶ್ರೀ ಮಲ್ಲಾರಾಧ್ಯರೂ ಶ್ರೀ ರಾಮಕೃಷ್ಣ ಹೆಗ್ಗಡೆಯವರೂ ಆ ತಿದ್ದುಪಡಿಯನ್ನು ಕಳುಹಿಸಿದ್ದಾರೆ. ಈ ತಿದ್ದುಪಡಿಗಳ ವಿಚಾರದಲ್ಲಿ ನಾವು ಸ್ವಲ್ಪ ವಿಚಾರಮಾಡಿ ಅವುಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಈ ತಿದ್ದುಪಡಿಯ ರೂಪದಲ್ಲಿ ಬಂದಿರತಕ್ಕ ಸೂಚನೆಗಳಲ್ಲೊಂದಾದ ಶ್ರೀ ಮಲ್ಲಾರಾಧ್ಯರ ಸೂಚನೆಯಲ್ಲಿ 10 ಕೋಟಿ ರೂಪಾಯಿಗಳ ಪರಿಹಾರ ದ್ರವ್ಯವನ್ನು ಕೇಂದ್ರಸರ್ಕಾರದಿಂದ ಪಡೆಯಬೇಕೆಂದು ಹೇಳಿದೆ. ಆದರೆ ಸರ್ಕಾರದವರು ತಮ್ಮ ಭಾಷಣದಲ್ಲಿ ಹೇಳಿರತಕ್ಕದ್ದನ್ನು ನೋಡಿದರೆ ''ಸರ್ಕಾರದವರೀಗ ಕೊಟ್ಟಿರತಕ್ಕ ವರದಿ ಏನಿದೆ ಅದು ಇನ್ನೂ ಅಪೂರ್ಣವಾದದ್ದು'' ಎಂದು ಗೊತ್ತಾಗುತ್ತದೆ. ಲೋಕೋಪಯೋಗಿ ಶಾಖೆಯ ಮಂತ್ರಿಗಳಾದ ಶ್ರೀ ಎಚ್. ಕೆ. ವೀರಣ್ಣಗೌಡರು ಕೊಟ್ಟಿರುವ ವರದಿಯ ಪ್ರಕಾರ ಸರ್ಕಾರಕ್ಕೆ ಸಂಬಂಧಪಟ್ಟ ಮೂರು ಕೋಟಿ ರೂಪಾಯಿಗಳ ಆಸ್ತಿಗೆ ನಷ್ಟ ಉಂಟಾಗಿದೆಯೆಂದೂ, ಸಾರ್ವಜನಿಕರಿಗೆ ಸಂಬಂಧಪಟ್ಟ ಆರು ಕೋಟಿ ರೂಪಾಯಿಗಳ ಆಸ್ತಿಗೆ ನಷ್ಟ ಉಂಟಾಗಿದೆ ಎಂದು ಇಲ್ಲಿಯವರೆಗೆ ಒಟ್ಟು ಒಂಬತ್ತುಕೋಟಿ ರೂಪಾಯಿಗಳ ನಷ್ಟ ನಮ್ಮ ರಾಜ್ಯಕ್ಕುಂಟಾಗಿದೆ ಎಂದೂ ಹೇಳಿದ್ದಾರೆ. ಆದರೆ ಈ ಡ್ಯಾಮೇಜು ಆಖೈರಲ್ಲ. ಸಂಪೂರ್ಣ ಡ್ಯಾಮೇಜ್ ಎಷ್ಟಾಗಿದೆ ಎಂಬುದನ್ನಿನ್ನೂ ಅಸೆಸ್ ಮಾಡಿಲ್ಲ ಎಂದು ಸರ್ಕಾರದವರೇ ಹೇಳಿದ್ದಾರೆ. ಇದು ಎಲ್ಲರೂ ಒಪ್ಪತಕ್ಕ ಮಾತಾಗಿದೆ.

Sri C. M. ARUMUGHAM.—I do not accept it.

Sri D. DEVARAJ URS.—It is not possible practically to immediately assess all the damages either to private or public property. Even if Sri Arumugham is made a Minister, he will not be able to do it in a day or two. ಅನೇಕ ಕಡೆಗಳಲ್ಲಿ ಇನ್ನೂ ಈ ಫ್ಲಡ್ಸ್ ಸಬ್‌ಸೈಡೇ ಆಗಿಲ್ಲ. ಅಸೆಸ್‌ಮಾಡ ಬೇಕಾದುದು ಇನ್ನೂ ಬಹಳವಾಗಿದೆ. ಹೀಗಿರುವಾಗ ಈಗ ಸಭೆಯಮುಂದೆ ತಂದಿರತಕ್ಕ ತಿದ್ದುಪಡಿ ಯನ್ನು ಒಪ್ಪಲು ಸಾಧ್ಯವಿದೆಯೇ ಎಂಬ ಒಂದು ಪ್ರಶ್ನೆಯನ್ನು ಪರಿಶೀಲಿಸಬೇಕಾಗಿದೆ. ಈ ವಿಚಾ ರದಲ್ಲಿ ಈಗ ನಾವು ತರಾತುರಿಯಲ್ಲಿ ಈ ತಿದ್ದುಪಡಿಗಳನ್ನು ಒಪ್ಪುವುದು ಅಷ್ಟು ಉಚಿತವಾಗಿ ಕಾಣುತ್ತಿಲ್ಲವೆಂಬ ಅಂಶವನ್ನು ಬಹುಶಃ ಎಲ್ಲರೂ ಒಪ್ಪುತ್ತಾರೆಂದು ನಂಬಿದ್ದೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹಾಗಾದರೆ ಮಾನ್ಯ ಸದಸ್ಯರು ನನ್ನ ಭಾಷಣವನ್ನು ಸಂಪೂರ್ಣವಾಗಿ ಕೇಳಲಿಲ್ಲವೆಂದು ಅರ್ಥವಾಗುತ್ತದೆ. My friend does not know that I have suggested that an *ad hoc* grant and not final grant should be asked for. Let us not differ on fundamentals.

Sri C. M. ARUMUGHAM.—That is also my point. There is no use discussing this point of grant.

Sri D. DEVARAJ URS.—Let us not confine ourselves to this or that amount. If after a detailed assessment, the damage caused to property is more than 10 crores, let us ask for more. Why should we restrict ourselves to this or that figure?

ಸ್ವಾಮಿ, ನಾನು ಒಂದು ವಿಷಯವನ್ನು ಮಾತ್ರ ಸ್ಪಷ್ಟಪಡಿಸುತ್ತೇನೆ. ಕೇಂದ್ರದಿಂದ ಹತ್ತು ಕೋಟಿ ರೂಪಾಯಿಗಳ ಪರಿಹಾರ ಪಡೆಯಬೇಕೆಂಬ ಆಸಕ್ತಿ, ತಿದ್ದುಪಡಿ ತಂದಿರತಕ್ಕವರಿಗಿರ ಬಹುದು. ಆದರೆ ಕೇಂದ್ರದಿಂದ ಅದಷ್ಟೂ ಹೆಚ್ಚಿನ ಪರಿಹಾರ ಪಡೆಯಲು ನಾವು ಯಾರಿಗೂ ಹಿಂದುಳಿದಿಲ್ಲ. ಈ ದಿವಸ 10 ಕೋಟಿ ರೂಪಾಯಿಗಳನ್ನು ಕೇಳಿದರೆ ನಾಳೆ ನಾವು 15 ಕೋಟಿ ರೂಪಾಯಿಗಳನ್ನು ಕೇಳಬಹುದು. ಆದರೆ ನಮ್ಮಲ್ಲಿ ಈ ಡ್ಯಾಮೇಜ್ ಎಷ್ಟಾಗಿದೆ ಎಂಬ ಬಗ್ಗೆ ಒಂದು ಪೂರ್ಣ ವರದಿಯೇ ತಯಾರಾಗಿಲ್ಲದಿರುವಾಗ ನಾವು ಈಗ ಇಷ್ಟೇ ಕೊಡಿ ಎಂದು ಕೇಳುವು ದಾದರೂ ಹೇಗೆ? ನಾವೇಕೆ ಈಗ ಈ ರೀತಿ ಒಂದು ಇಕ್ಕಟ್ಟಿಗೆ ಸಿಕ್ಕಿಹಾಕಿಕೊಳ್ಳಬೇಕು. ಈ ಎಲ್ಲ ಕಾರಣಗಳಿಂದ ಈ ತಿದ್ದುಪಡಿಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳದೆ ಹಾಗೆಯೇ ಬಿಟ್ಟು ಬಿಡೋಣ ಎಂದು ಹೇಳುತ್ತೇನೆ.

† ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಮಾನ್ಯ ಅಧ್ಯಕ್ಷರೇ, ಕಳೆದ ಮೂರು ದಿವಸ ಗಳಿಂದಲೂ ಪ್ರವಾಹದ ಹಾವಳಿಯ ವಿಚಾರವಾಗಿ ವಿಶೇಷವಾದ ಚರ್ಚೆಯಾಗುತ್ತಿದೆ. ಕೆಲವು ಭಾಗ ಗಳಿಂದ ಬಂದಿರತಕ್ಕ ಸದಸ್ಯರು ಈಗಾಗಲೇ ಸರ್ಕಾರದವರ ಗಮನಕ್ಕೆ ಅನೇಕ ವಿಚಾರಗಳನ್ನು ತಂದಿದ್ದಾರೆ. ಸರ್ಕಾರದವರು ನೊಂದವರಿಗೆ ಸರಿಯಾದ ಪರಿಹಾರವನ್ನು ದೊರಕಿಸಿ ಕೊಡ ಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ನಾನು ಆ ವಿಷಯದಲ್ಲಿ ಏನೂ ಹೇಳಬೇಕಾಗಿಲ್ಲ. ನಮ್ಮ ಪಕ್ಷದ ನಾಯಕರೂ ಎಲ್ಲ ವಿಷಯವನ್ನೂ ಸರ್ಕಾರದವರ ಗಮನಕ್ಕೆ ತಂದಿದ್ದಾರೆ ಮತ್ತು ಅಮೂಲ್ಯವಾದ ಸಲಹೆಗಳನ್ನು ಸರ್ಕಾರದವರ ಮುಂದೆ ಇಟ್ಟಿದ್ದಾರೆ. ಸರ್ಕಾರದವರು ಆ ಸಲಹೆಗಳನ್ನು ಕಾರ್ಯಗತ ಮಾಡುತ್ತಾರೆಂದು ನಾನು ನಂಬಿದ್ದೇನೆ. ನಾನು ನನ್ನ ಚುನಾ ವಣಾ ಕ್ಷೇತ್ರವಾದ ಪಾಂಡವಪುರದ ವಿಷಯದಲ್ಲಿ ಒಂದೆರಡು ಮಾತನ್ನು ಆಡಬೇಕಾಗಿದೆ. ಅಲ್ಲಿ ಕಾವೇರಿ ನದಿಯ ಪ್ರವಾಹಕ್ಕೆ ಸಿಕ್ಕಿ ಅನೇಕ ಎಕರೆ ತರೀ ಜಮೀನು ಹಾಳಾಗಿದೆ. ಜಮೀನು ಕೊರೆದು ವ್ಯವಸಾಯಕ್ಕೆ ನಾಲಾಯಖ್ಖಾಗಿದೆ. ರೆವಿನ್ಯೂ ಮಂತ್ರಿಗಳೂ ಅಲ್ಲಿಗೆ ದಯಮಾಡಿ ಸಿದ್ದು ಅದನ್ನೆಲ್ಲ ನೋಡಿಕೊಂಡು ಬಂದಿದ್ದಾರೆ. ಜಮೀನು ಹಾಳಾಗಿರುವವರೆಲ್ಲ ಬಡವರು. ಅವರಿಗೆ ಸೂಕ್ತ ಪರಿಹಾರವನ್ನು ಕೊಡಬೇಕು. ಇಲ್ಲದೆ ಇದ್ದರೆ ಬೇರೆ ಕಡೆ ಜಮೀನನ್ನಾದರೂ

(ಶ್ರೀ ಬಿ. ಚಾಮಯ್ಯ)

ಒದಗಿಸಿ ಅವರು ಜೀವನ ಮಾಡುವುದಕ್ಕೆ ಅವಕಾಶಮಾಡಿ ಕೊಡಬೇಕು. ಆ ಜನರು ಬಹಳ ತೊಂದರೆಯಲ್ಲಿದ್ದಾರೆ. ಈಗ ತಕ್ಷಣ ಜಮೀನನ್ನು ವ್ಯವಸಾಯಕ್ಕೆ ಯೋಗ್ಯವಾದುದನ್ನಾಗಿ ಮಾಡಲು ಆಗುವುದಿಲ್ಲ. ವ್ಯವಸಾಯಕ್ಕೆ ಯೋಗ್ಯವಾಗಿ ಮಾಡಬೇಕಾದರೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಬೇಕು. ಸರ್ಕಾರ ಕೊಡತಕ್ಕ ಕೇವಲ ನೂರು ರೂಪಾಯಿಗಳಿಂದ ಏನೂ ಮಾಡುವುದಕ್ಕಾಗುವುದಿಲ್ಲ. ಜಮೀನನ್ನು ವ್ಯವಸಾಯಕ್ಕೆ ಲಾಯಖ್ಖಾಗಿರುವಂತೆ ಮಾಡುವುದಕ್ಕೆ ಅಗತ್ಯವಾದ ಖರ್ಚನ್ನು ಕೊಟ್ಟು, ವ್ಯವಸಾಯಕ್ಕೆ ಯೋಗ್ಯವಾಗಿರುವಂತೆ ಜಮೀನನ್ನು ತರುವುದಕ್ಕೆ ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯವೇನೆಂದರೆ ಕಾವೇರಿ ನದಿಯಲ್ಲಿ ಅನೇಕ ಸಾರಿ ಪ್ರವಾಹ ಬರುತ್ತದೆ. ವೆಲ್ಲೆಸ್ಲಿ ಸೇತುವೆಯನ್ನು ಕಟ್ಟಿ 180 ವರ್ಷಗಳಾದುವು. ಅದು ಬಹಳ ಹೊಡೆತಕ್ಕೆ ತುತ್ತಾಗಿ ಯಾವ ಹೊತ್ತಿಗೆ ಏನಾಗುತ್ತದೆಯೋ ಗೊತ್ತಿಲ್ಲದಂಥ ಸ್ಥಿತಿಯಲ್ಲಿದೆ. ಅದರ ಹತ್ತಿರ 'weak bridge' ಎಂದು ಲೋಕೋಪಯೋಗಿ ಇಲಾಖೆಯವರು ಬೋರ್ಡ್ ಹಾಕಿದ್ದಾರೆ. ಈಗ ಹೊಸದಾಗಿ ಒಂದು ಸೇತುವೆ ಕಟ್ಟುವುದಕ್ಕೆ ಪ್ರಾರಂಭಮಾಡಿದ್ದಾರೆ. ಇದನ್ನು ಜಾಗ್ರತೆಯಾಗಿ ಮುಗಿಸಿ, ಸಂಚಾರಕ್ಕೆ ಬೇಗ ಅನುಕೂಲ ಮಾಡಿಕೊಟ್ಟರೆ ಅದರಿಂದ ಜನರಿಗೆ ಸಹಾಯವಾಗುತ್ತದೆ. ವೆಲ್ಲೆಸ್ಲಿ ಸೇತುವೆ ಯಾವ ಸ್ಥಿತಿಯಲ್ಲಿದೆ ಎಂದು ಪ್ರವಾಹ ಕಡಮೆಯಾದ ಮೇಲೆ, ತನಿಖೆಮಾಡಿ, ಅದು ಅಪಾಯಸ್ಥಿತಿಯಲ್ಲಿದ್ದರೆ, ಸರಿಪಡಿಸಬೇಕೆಂದು ಹೇಳುತ್ತೇನೆ.

ಸರ್ಕಾರದವರು ತೀವ್ರ ಕ್ರಮವನ್ನು ತೆಗೆದುಕೊಂಡು, ಪ್ರವಾಹದ ಹಾವಳಿಯಿಂದ ನೊಂದವರಿಗೆ ಸರಿಯಾದ ಪರಿಹಾರ ಕೊಡಬೇಕು. ಜನಗಳಿಗೆ ಆಹಾರ ವಗೈರೆ ಒದಗಿಸಲು ಸರಿಯಾದ ಏರ್ಪಾಡು ಮಾಡಬೇಕು. ಈ ಬಗ್ಗೆ ಮಾನ್ಯ ಸದಸ್ಯರೆಲ್ಲ ಕೊಟ್ಟಿರುವ ಅನೇಕ ಸಲಹೆಗಳನ್ನು ಕಾರ್ಯಗತ ಮಾಡಬೇಕೆಂದು ಹೇಳಿ ನನಗೆ ಇಲ್ಲಿ ಒಂದೆರಡು ನಿಮಿಷ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—ಸ್ವಾಮಿ, ಈ ವರ್ಷ ದೇಶದ ಎಲ್ಲೆಡೆಯಲ್ಲಿಯೂ ಕೂಡ ವಿಪರೀತವಾದ ಪ್ರವಾಹ ಬಂದು ಅನೇಕ ಅನಾಹುತಗಳಾಗಿರುವ ವಿಚಾರವನ್ನು ನಮ್ಮ ಮಾನ್ಯ ಸದಸ್ಯರುಗಳೆಲ್ಲರೂ ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಾನು ಈ ಸಂದರ್ಭದಲ್ಲಿ ಮುಖ್ಯವಾಗಿ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಅಪೇಕ್ಷೆ ಪಡುತ್ತೇನೆ. 1953ನೆಯ ಇಸವಿಯಲ್ಲಿ ಕಾವೇರಿ ಪ್ರವಾಹ ಬಂದಾಗ ಆ ಪ್ರವಾಹವನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಕೃಷ್ಣರಾಜಸಾಗರವನ್ನೂ ಉಪಯೋಗಿಸಲಿಲ್ಲವೆಂದೂ, ಅದರಿಂದ ಬಹಳ ನಷ್ಟವಾಯಿತೆಂದೂ ಈ ಸಭೆಯಲ್ಲಿ ಹೇಳಿದ್ದು ನನಗೆ ಜ್ಞಾಪಕವಿದೆ. ಪುನಃ ಅದೇ ವಿಚಾರವನ್ನು ಪ್ರಸ್ತಾಪಿಸಬೇಕಾಗಿ ಬಂದಿರುವುದಕ್ಕೆ ವಿಷಾದಪಡುತ್ತೇನೆ. ಒಂದನೆಯ ತಾರೀಖು ಸಂಜೆ ಕಾವೇರಿ ನದಿಯಲ್ಲಿ, ಕೃಷ್ಣರಾಜಸಾಗರದಿಂದ ಕೆಳಗಡೆ ಪ್ರವಾಹವಿರಲಿಲ್ಲ. ಹೆಚ್ಚು ನೀರು ಬರುತ್ತಿದ್ದುದರಿಂದ ನೀರನ್ನು ಶೇಖರಣೆ ಮಾಡುತ್ತಿದ್ದರು. ಆದರೆ ಎರಡನೆಯ ತಾರೀಖು ಬೆಳಿಗ್ಗೆ ಕೃಷ್ಣರಾಜಸಾಗರದಿಂದ, ಸಾಕಷ್ಟು ಜನರಿಗೆ ತಿಳುವಳಿಕೆ ಕೊಡದೆ, ಪ್ರವಾಹವನ್ನು ಬಿಟ್ಟದ್ದು ನಮಗೆ ಗೊತ್ತಾಗಿದೆ. ಅದರ ಪರಿಣಾಮವಾಗಿ ಕಾವೇರಿ ನದಿಯಲ್ಲಿ ಸ್ನಾನಮಾಡುತ್ತಿದ್ದ ಕುರುಬರಶೆಟ್ಟಿ ಹಳ್ಳಿಯ ಶ್ಯಾನುಭೋಗರು ಸಂಧ್ಯಾವಂದನೆ ಮಾಡುವುದಕ್ಕೆ ಕುಳಿತವರು, ಪುನಃ ಕಾವೇರಿಯಿಂದ ಹೊರಕ್ಕೆ ಬರುವುದಕ್ಕಾಗಲಿಲ್ಲ. ಅವರು ಪ್ರವಾಹಕ್ಕೆ ಸಿಕ್ಕಿ ಮೃತರಾದ ವಿಚಾರ ಬಹಳ ವಿಷಾದಕರವಾದುದು. ಸರ್ಕಾರದವರು ಅನೇಕವೇಳೆ, ನಾವು ಸಾಕಷ್ಟು ತಿಳಿವಳಿಕೆಯನ್ನೂ ಕೊಟ್ಟಿದ್ದೆವು, ಟಾಂ ಟಾಂ ಹೊಡೆಸಿದ್ದೆವು, ತಹಸೀಲ್ದಾರರಿಗೆ ಗ್ರಾಮಾಧಿಕಾರಿಗಳಿಗೆ ಎಲ್ಲರಿಗೂ ತಿಳಿವಳಿಕೆ ಕೊಟ್ಟಿದ್ದೆವು ಎಂದು ಹೇಳುವುದುಂಟು. ನಾನಾದರೂ ಸರ್ಕಾರದವರಲ್ಲಿ ಮನವಿ ಮಾಡುವುದೇನೆಂದರೆ

ಪ್ರವಾಹ ಬರುವುದಕ್ಕಿಂತ ಮುಂಚೆ ಪ್ರವಾಹ ಬರುತ್ತಿದೆ ಎಂದು ಸೂಚಿಸಲು ಪ್ರವಾಹಕ್ಕಿಂತ ಉತ್ತಮವಾಗಿ ಜನರಿಗೆ ತಿಳಿವಳಿಕೆ ಕೊಡುವುದಕ್ಕೆ ಬೇರೆ ಸಾಧನವಿಲ್ಲವೆನ್ನುವುದನ್ನು ಸರ್ಕಾರದವರು ಅರಿತುಕೊಳ್ಳಬೇಕು. ಕೃಷ್ಣರಾಜ ಸಾಗರದಲ್ಲಿ ಎರಡನೆಯ ನೀರನ್ನು ಬಿಡುವ ವೇಳೆಯಲ್ಲಿ ಕ್ರಮ ಕ್ರಮವಾಗಿ ನೀರನ್ನು ಬಿಟ್ಟಿದ್ದರೆ ಈ ಅನಾಹುತ ಸಂಭವಿಸುತ್ತಿರಲಿಲ್ಲ. ಅಂದಾದರೂ ಕೃಷ್ಣರಾಜ ಸಾಗರದಲ್ಲಿದ್ದ ನೀರಿನ ಮಟ್ಟ 121 ಅಡಿ ಮಾತ್ರ, ಅದರಲ್ಲಿ ಇನ್ನೂ ಹೆಚ್ಚು ನೀರನ್ನು ಶೇಖರಣೆ ಮಾಡುವುದಕ್ಕೆ ಅವಕಾಶವಿತ್ತು. ಅಲ್ಲಿ 124½ ಅಡಿಯವರೆಗೂ ಶೇಖರಣೆ ಮಾಡಲು ಅವಕಾಶವಿದೆ. ಇಷ್ಟೆಲ್ಲ ಇದ್ದರೂ ಒಂದೇ ಸಾರಿ ಒಂದು ಲಕ್ಷ ಐವತ್ತು ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡುವುದಕ್ಕೆ ಬದಲಾಗಿ ಮೊದಲು ಸ್ವಲ್ಪ ನೀರನ್ನು ಬಿಟ್ಟು, ಅನಂತರ ಒಂದು ಗಂಟೆ ನಿಧಾನವಾಡಿ ಮತ್ತೆ ಸ್ವಲ್ಪ ನೀರನ್ನು ಬಿಟ್ಟು, ಕ್ರಮೇಣ ಹೆಚ್ಚು ಮಾಡುತ್ತ ನೀರನ್ನು ಬಿಟ್ಟಿದ್ದರೆ ಇಂಥ ಅನಾಹುತ ಸಂಭವಿಸುತ್ತಿರಲಿಲ್ಲ. ಇದು ನಮ್ಮ ದೇಶದಲ್ಲಿರುವ, ಬಹಳ ಹಿಂದೆ ಕಟ್ಟಿದಂಥ ಅಣೆಕಟ್ಟು. ಈ ಅಣೆಕಟ್ಟನ್ನು ಉಪಯೋಗಿಸಿಕೊಂಡು ಕೃಷ್ಣರಾಜಸಾಗರದಿಂದ ಕೆಳಗಡೆ ವಾಸಮಾಡತಕ್ಕ ಜನಗಳಿಗೆ ಆಗತಕ್ಕ ಅನಾಹುತವನ್ನು ತಪ್ಪಿಸುವುದಕ್ಕೆ ಸರ್ಕಾರದವರು ನಿಖರವಾದ ನಿಯಮಗಳನ್ನು ಮಾಡಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಿಖರವಾದ ನಿಯಮಗಳನ್ನು ಮಾಡದೆ ನೀರು ತುಂಬಿದಾಗ ಒಂದೇ ಸಾರಿ ಪ್ರವಾಹವನ್ನು ಹರಿಯುವುದಕ್ಕೆ ಬಿಟ್ಟು ಅದರ ದೆಸೆಯಿಂದ ಆಗುತ್ತಿರುವ ಪ್ರಾಣಹಾನಿ, ಮತ್ತು ಆಸ್ತಿಗೆ ಆಗುತ್ತಿರುವ ನಷ್ಟವನ್ನು ಸರ್ಕಾರದವರು ತಪ್ಪಿಸಬೇಕು.

ಶ್ರೀ ಜೆ. ಬಿ. ಮಲ್ಲಾರಾಧ್ಯ (ನಂಜನಗೂಡು).—ಕೆಲವು ದಿವಸಗಳ ಹಿಂದೆ ಚೀಫ್ ಇಂಜನಿಯರ್ ಅವರು ಕೃಷ್ಣರಾಜಸಾಗರದ ಎಕ್ಸಿಕ್ಯೂಟಿವ್ ಇಂಜನಿಯರ್ ಅವರ ಕೆಲಸವನ್ನು ಪ್ರಶಂಸೆ ಮಾಡಿ ಬಹಳ ಚಾಕಚಕ್ಯತೆಯಿಂದ ಕೆಲಸಮಾಡಿದರು ಎಂದು ಕೊಟ್ಟಂಥ ಹೇಳಿಕೆ ಪತ್ರಿಕೆಗಳಲ್ಲಿ ಬಂದಿತ್ತು. ಆದರೆ ಇವೊತ್ತು ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿದ್ದರಲ್ಲಿ, ಮುಂಜಾಗ್ರತೆ ಕ್ರಮವನ್ನು ವಹಿಸಿದ್ದರೆ ಇಷ್ಟೊಂದು ಅನಾಹುತವಾಗುತ್ತಿರಲಿಲ್ಲವೆಂದು ಅರ್ಥವಾಗುತ್ತದೆ. ಅವರು ಸ್ಥಳದ ವಿದ್ಯಮಾನವನ್ನು ಚೆನ್ನಾಗಿ ತಿಳಿದು ಕೊಂಡಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದವರ ಕರ್ತವ್ಯ ಬಹಳ ಗುರುತರವಾಗಿದೆ. ನಿಜಾಂಶವೇನು ಎಂಬುದನ್ನು ಸರ್ಕಾರ ತಿಳಿಯಬೇಕು. ತಜ್ಞರ ಅಭಿಪ್ರಾಯವನ್ನನುಸರಿಸಿ ಅಲ್ಲಿದ್ದ ಎಕ್ಸಿಕ್ಯೂಟಿವ್ ಇಂಜನಿಯರ್ ಅವರು ಕಾರ್ಯಾಚರಣೆ ನಡೆಸಿದ್ದರೆ ಅಥವಾ ತಜ್ಞರ ಅಭಿಪ್ರಾಯಕ್ಕೆ ವಿರೋಧವಾಗಿ ಅಥವಾ ಜನಗಳ ಸೌಕರ್ಯಕ್ಕೆ ವಿರೋಧವಾಗಿ ವರ್ತಿಸುವುದಾಗಿದ್ದರೆ, ಇದು ಬಹಳ ಗಹನವಾದ ವಿಷಯ. ಇದನ್ನು ವಿಚಾರಣೆ ಮಾಡಬೇಕಾದ ಸಂದರ್ಭ ಬರುತ್ತದೆ. ಎಲ್ಲ ಪತ್ರಿಕೆಗಳಲ್ಲಿಯೂ, ಇಲಾಖೆಯ ಅಧಿಕಾರಿಗಳು ಬಹಳ ಮುಂಜಾಗ್ರತೆಯಿಂದ ಕೆಲಸ ಮಾಡಿ ಆಗತಕ್ಕ ಅನಾಹುತಗಳನ್ನು ತಪ್ಪಿಸಿದರು ಎಂದು ಬಂದಿದೆ. ಇವೊತ್ತು ನಾವು ಕೇಳುವ ವರದಿಯ ಪ್ರಕಾರ ಮುಂಜಾಗ್ರತೆಯ ಕ್ರಮವನ್ನು ಸರಿಯಾಗಿ ವಹಿಸಲಿಲ್ಲ; ವಹಿಸದಿದ್ದರೆ ತೊಂದರೆ ತಪ್ಪುತ್ತಿತ್ತು ಎಂದು ಇದೆ. ಈ ಎರಡಕ್ಕೂ ಬಹಳ ವಿರೋಧಾಭಾಸವಾಗುತ್ತದೆ. ಆದುದರಿಂದ ಸರ್ಕಾರದವರು ಈ ವಿಷಯದಲ್ಲಿ ನಿರ್ದಿಷ್ಟವಾಗಿ ವಾಸ್ತವಾಂಶ ಏನು ಎನ್ನುವುದನ್ನು ಈ ಸಭೆಗೆ ತಿಳಿಸಬೇಕಾದ್ದು ಅವರ ಕರ್ತವ್ಯವೆಂದು ಹೇಳುತ್ತೇನೆ.

ಶ್ರೀ ಬಿ. ಚಾಮಯ್ಯ.—ಇಂಜನಿಯರಿಂಗ್ ಇಲಾಖೆಯವರು ಮಾಡಬೇಕಾದುದನ್ನೆಲ್ಲ ಮಾಡಿದ್ದಾರೆ. ಶ್ರೀಮಾನ್ ಚನ್ನಯ್ಯನವರು ಕೃಷ್ಣರಾಜ ಸಾಗರದ ಎಕ್ಸಿಕ್ಯೂಟಿವ್ ಇಂಜನಿಯರ್ ಚಾರ್ಜಿನಲ್ಲಿದ್ದಾರೆ. ಅವರು ಮುಂಜಾಗ್ರತೆಯಿಂದ ಎಲ್ಲ ರೆವೆನ್ಯೂ ಅಧಿಕಾರಿಗಳಿಗೂ, ಡೆಪ್ಯುಟಿ ಕಮಿಷನರ್‌ಗಳಿಗೂ ಫೋನ್ ಮೂಲಕ ಮತ್ತು ಟೆಲಿಗ್ರಾಂ ಮೂಲಕ ಎಷ್ಟು ನೀರನ್ನು ಎಷ್ಟು ಹೊತ್ತಿನಲ್ಲಿ ಬಿಡುತ್ತಾರೆಂದು ತಿಳಿಸಿದ್ದಾರೆ. ಸ್ಥಳೀಯ ಅಧಿಕಾರಿಗಳು, ರೆವಿನ್ಯೂ ಅಧಿಕಾರಿಗಳ ತಾಲ್ಲೂಕು ಶಿರಸ್ತೇದಾರರು ನದಿಯ ದಡದಲ್ಲಿರುವ ಎಲ್ಲ ಹಳ್ಳಿಗಳಿಗೂ ಮತ್ತು ಪಟ್ಟಣಗಳಿಗೂ ಸಮಾಚಾರ ಕೊಡದೆ, ತಿಳಿವಳಿಕೆ ಕೊಡದೆ ಟಾಂಟಾಂ ಹೊಡೆಯದೆ ಇದ್ದುದರಿಂದ ಈ ಅನಾಹುತಕ್ಕೆ

(ಶ್ರೀ ಬಿ. ಚಾಮಯ್ಯ)

ಕಾರಣವಾಯಿತು. ಕುರುಬರ ಶೆಟ್ಟಿಹಳ್ಳಿಯ ಶ್ಯಾನುಭೋಗರು ದುರ್ಮರಣಕ್ಕೆ ಈಡಾಗುವು ದಕ್ಕೂ ಇದೇ ಕಾರಣ. ಎಕ್ಸಿಕೂಟಿವ್ ಇಂಜನಿಯರ್ ಅವರು ಸಕಾಲದಲ್ಲಿ ಕ್ರಮ ತೆಗೆದು ಕೊಂಡಿದ್ದಾರೆಂದು ಕಾಣುತ್ತದೆ.

ಶ್ರೀ ಕೆ. ಪುಟ್ಟಸ್ವಾಮಯ್ಯ.—ಸ್ವಾಮಿ, ನಾನು ಮಾತನಾಡುವ ಮಧ್ಯದಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಚಾಮಯ್ಯನವರು ಕೆಲವು ಮಾತುಗಳನ್ನು ಆಡಿದುದು ಒಳ್ಳೆಯದಾಯಿತು. ನಾನು ಅಧಿಕಾರಿಗಳು ತೀರ ಉಪೇಕ್ಷೆ ಮಾಡಿದರು ಇವರ ಔದಾಸೀನ ಈ ಅನಾಹುತಕ್ಕೆ ಕಾರಣವಾಯಿತೆಂದು ಹೇಳಲಿಲ್ಲ. ಅವರು ತಿಳಿವಳಿಕೆ ಕೊಡಲಿಲ್ಲವೆಂದೂ ಹೇಳಲಿಲ್ಲ. ಸಾಕಷ್ಟು ತಿಳಿವಳಿಕೆ ಕೊಡಲಿಲ್ಲ; ತಿಳಿವಳಿಕೆ ಈಗ ಮಾಮೂಲಾಗಿ ಕೊಡತಕ್ಕಂಥ ತಿಳಿವಳಿಕೆ. ಎಕ್ಸಿಕ್ಯೂಟಿವ್ ಇಂಜನಿಯರು ಕೃಷ್ಣರಾಜಸಾಗರದಲ್ಲಿದ್ದು ಟೆಲಿಗ್ರಾಮ್‌ಗಳನ್ನು ಕಳುಹಿಸುತ್ತಾರೆ; ಅವರು ಅಮಲ್ದಾರರಿಗೆ ಕಳುಹಿಸುತ್ತಾರೆ, ಅಮಲ್ದಾರರು ಶೇಕದಾರರಿಗೆ ಕಳುಹಿಸುತ್ತಾರೆ, ಶೇಕದಾರರು ಸಂಬಂಧಪಟ್ಟ ಗ್ರಾಮಾಧಿಕಾರಿಗಳಿಗೆ ಸಮಾಚಾರ ಕಳುಹಿಸುತ್ತಾರೆ. ಒಂದು ದಿನದಲ್ಲಿ ಇಷ್ಟೆಲ್ಲಾ ಆಗಬೇಕು, ತಿಳಿವಳಿಕೆ ಕೊಟ್ಟರೂ, ಅದು ಎಲ್ಲಾ ಗ್ರಾಮ ನೌಕರರಿಗೆ ತಲುಪಬೇಕಲ್ಲಾ, ಅವರು ಟಾಂಟಾಂ ಹಾಕಿಸಬೇಕು. ಟಾಂಟಾಂ ಹಾಕಿಸಿದರೂ ಎಲ್ಲಾ ಜನರಿಗೂ ಅದು ಗೊತ್ತಾಗುತ್ತದೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅನೇಕ ಸಲ ಸಮಾಚಾರ ತಡವಾಗಿ ಹೋಗಬಹುದು.

ನಾನು ಹೇಳಿದ್ದು ಬಹಳ ಸುಲಭವಾದುದು. ಸರ್ಕಾರದವರು ಅದನ್ನು ಅನುಸರಿಸಿದರೆ ಬಹುಶಃ ತೊಂದರೆಯಾಗುವುದಿಲ್ಲ. 1,50,000 ಕ್ಯೂಸೆಕ್ಸ್‌ನ್ನು ಒಂದೇ ಸಾರಿ ಬಿಡುವ ಬದಲು ಮೆಟ್ಟು ಮೆಟ್ಟಲಲ್ಲಿ, ಹಂತದಲ್ಲಿ 50 ಸಾವಿರ ಕ್ಯೂಸೆಕ್ಸ್ ಬಿಟ್ಟರೆ, 1-2 ಅಡಿ ಪ್ರವಾಹ ಬರುತ್ತದೆ; ಮಕ್ಕಳುಗಳು ಸಹ ಓಡಿಹೋಗುವುದಕ್ಕೆ ಅವಕಾಶವಿರುತ್ತದೆ. ಸ್ವಲ್ಪ ಸ್ವಲ್ಪವಾಗಿ ಪ್ರವಾಹವನ್ನು ಬಿಡುವುದರಿಂದ ಆಗತಕ್ಕಂಥ ಅನಾಹುತವನ್ನು ತಪ್ಪಿಸಬಹುದೆಂದು ನಾನು ಸೂಚಿಸಿದೆನೇ ವಿನಾ, ಇನ್ನೇನಲ್ಲ. ಅವರ ಕಾರ್ಯಕ್ರಮವನ್ನು ನಾನು ಡಿಫೆಂಡ್ ಮಾಡಬೇಕಾದ ಅಗತ್ಯವಿಲ್ಲ; ತೀರ ಉಪೇಕ್ಷೆಮಾಡಿದರೆಂದು ಖಂಡಿಸಬೇಕಾದ ಅಗತ್ಯವೂ ಇಲ್ಲ. ಇಷ್ಟು ದಿನವೂ ಕನ್ನಂಬಾಡಿಕಟ್ಟೆಯಲ್ಲಿ ಕೃಷ್ಣರಾಜಸಾಗರ ಪ್ರವಾಹವನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವ ಸಾಧನೆಯನ್ನು ಉಪಯೋಗಿಸಿಕೊಳ್ಳಲಿಲ್ಲ. 1953 ನೆಯ ಇಸವಿಯಲ್ಲಿಯೂ ನಾನು ಬಹಳ ಅಗ್ರಹವಾಗಿ ಹೇಳಿದ್ದೇನೆ. ಆಗಲೂ ಶ್ರೀಮಾನ್ ಕಡಿದಾಳ್ ಮಂಜಪ್ಪನವರೇ ನನ್ನ ಅಗ್ರವನ್ನು ತಾಳಬೇಕಾಯಿತು. ಈಗಲೂ ಹೇಳುತ್ತಿದ್ದೇನೆ. 1953 ರಿಂದ ಇವೊತ್ತಿನವರೆಗೆ ಕನ್ನಂಬಾಡಿ ಕೃಷ್ಣರಾಜಸಾಗರ ಪ್ರವಾಹದ ಹತೋಟಿ ನಿಯಂತ್ರಣಕ್ಕೆ ಯಾವ ರೀತಿ ಉಪಯೋಗಿಸಿಕೊಂಡಿದ್ದೀರಿ ಎಂದು ಅವರನ್ನು ಕೇಳುತ್ತೇನೆ. ಒಂದನೆಯದು, ಪ್ರಕೃತಿಯ ಪ್ರಕೋಪವನ್ನು ತಪ್ಪಿಸುವುದಕ್ಕೆ ಮನುಷ್ಯನಿಗೆ ಸಾಧ್ಯವಿರಲಿಲ್ಲ. ಇಲ್ಲಿ ಆದ ಭಾಷಣಗಳು ಚೆನ್ನಾಗಿದ್ದುವು. ಆದರೆ ನಾವು ಇದುವರೆಗೆ ಈ ಪ್ರವಾಹದಲ್ಲಿ ನೊಂದವರಿಗೆ ಕೊಡತಕ್ಕಂಥ ಸೌಲಭ್ಯಗಳನ್ನು ಮಾನವೀಯತೆಯ ದೃಷ್ಟಿಯಿಂದ ಎಷ್ಟು ಮಟ್ಟಿಗೆ ಒದಗಿಸುವುದಕ್ಕೆ ಸಾಧ್ಯವಿದೆಯೋ ಅಷ್ಟುಮಟ್ಟಿಗೆ ಒದಗಿಸುವುದಕ್ಕೆ ಸಾಧ್ಯವಾಗಿಲ್ಲವೆಂದು ಹೇಳಬೇಕಾಗಿದೆ. ಈಗ ಅನೇಕ ಗ್ರಾಮಗಳು ಕೊಚ್ಚಿ ಹೋಗಿವೆ. ನಿರಾಶ್ರಿತರಾದವರಿಗೆ ನಿಲ್ಲಲು ನೆಲೆ ಇಲ್ಲ. ಅವರು ಇರತಕ್ಕಂಥ ಸ್ಥಳದಲ್ಲಿಯೇ ಪ್ರವಾಹ ಎಲ್ಲಾ ಹೋದ ಮೇಲೆ ಮನೆಗಳನ್ನು ಕಟ್ಟೋಣವೆಂದರೆ, ಅಲ್ಲಿ ಮುರುಕಲು ಗೋಡೆಗಳು, ಅರ್ಧ ಕೊಚ್ಚಿ ಹೋದ ಮನೆಗಳು ನಿಂತಿವೆ. ಅವರು ಅಲ್ಲಿ ವಾಸಮಾಡುವುದಕ್ಕಾಗುವುದಿಲ್ಲ. ಅವರಿಗೆ ಇರುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೇವೆ! ಒಂದೆರಡು ಕಡೆ ಹೋಗಿ ನೋಡಿ ಬಂದಿದ್ದೇನೆ. ಅವರು ಇದ್ದ ಸ್ಥಳಕ್ಕೆ ಒಂದು ಎರಡು ಫರ್ಲಾಂಗ್ ಹತ್ತಿರದಲ್ಲಿಯೇ ಎತ್ತರವಾದಂಥ ಭೂಮಿ ಇದೆ. ಅಲ್ಲಿ ವ್ಯವಸ್ಥೆ ಮಾಡೋಣವೆಂದರೆ, ಅಲ್ಲಿ ಅವಕಾಶವಿಲ್ಲ. ಅಧಿಕಾರಿಗಳನ್ನೂ ಆಕ್ಷೇಪಣೆ ಮಾಡುತ್ತಾ ಇಲ್ಲ. ಆ ಜಮೀನು ಮೇಲೆ ಹೋಗಿ

ವಾಸಮಾಡಿ ಎಂದು ಅಧಿಕಾರಿಗಳು ಹೇಳುವುದಕ್ಕೆ ಅವರಿಗೆ ಕಾನೂನಿನಲ್ಲಿ ಅವಕಾಶಗಳಿಲ್ಲ. ಆ ಜಮೀನಿನ ಮಾಲಿಕ ಒಪ್ಪಿದರೆ ಆಯಿತು. ಅವನು ಮಾನವೀಯತೆಯ ದೃಷ್ಟಿಯಿಂದ ಅವಕಾಶ ಕೊಟ್ಟರೆ, ಅಲ್ಲಿರುತ್ತೇವೆಂದು ಅವರು ಹೇಳಬಹುದು. ಇಲ್ಲದಿದ್ದರೆ ಸರ್ಕಾರ ಜಮೀನನ್ನು ತಾತ್ಕಾಲಿಕವಾಗಿಯಾದರೂ ಕಮ್ಯಾಂಡೀರ್ ಮಾಡಿ, ನಿರಾಶ್ರಿತರನ್ನು ನೇರವಾಗಿ ಅಲ್ಲಿ ಹೋಗಿ ಇರಿ ಎಂದು ಹೇಳುವುದಕ್ಕೆ ಕಾನೂನಿನಲ್ಲಿ ಸಾಧ್ಯವಿಲ್ಲ. ಇಂಥ ಸಂದರ್ಭ ಬಂದಾಗ ಏನು ಮಾಡಬೇಕೆಂಬುದನ್ನು ವಿಧಾನ ಸಭೆಯ ಶಾಸಕರಾದ ನಾವು ಆಲೋಚನೆ ಮಾಡಬೇಕು. ಇಂಥ ಸಂಧರ್ಭದಲ್ಲಿ ಜನರಿಗೆ ಕಾನೂನಿನ ನೆರವನ್ನು ಒದಗಿಸಿಕೊಡುವುದಕ್ಕೆ ಸರಿಯಾದಂಥ ಕಾನೂನುಗಳು ನಮ್ಮಲ್ಲಿವೆಯೇ ಎಂದು ಆಲೋಚನೆ ಮಾಡಬೇಕು. ಈಗ ನಮಗಿರತಕ್ಕದ್ದು ಲ್ಯಾಂಡ್ ಅಕ್ವಿಸಿಷನ್ ಆಕ್ಟ್. ಅದರ ಪ್ರಕಾರ ಜಮೀನನ್ನು ಸಂಪಾದಿಸಿ ಕೊಳ್ಳುವುಕ್ಕೆ, ಅಕ್ವೈಯರ್ ಮಾಡಿಕೊಡುವುದಕ್ಕೆ ಎಷ್ಟು ಕಾಲ ಬೇಕಾಗುತ್ತದೆಂಬುದು ನಮಗೆಲ್ಲರಿಗೂ ಅನುಭವವಿರುತ್ತದೆ. ಸರ್ಕಾರ ಮನಸ್ಸು ಮಾಡಿದರೂ ಕೊನೆಯ ಪಕ್ಷ ಮೂರು ತಿಂಗಳುಗಳಾದರೂ ಬೇಕಾಗುತ್ತವೆ. ನೀವು ಒಂದು ತಿಂಗಳಲ್ಲಿಯೆ ಮಾಡುತ್ತೇವೆಂದು ಹೇಳಬಹುದು. ಒಂದು ತಿಂಗಳವರೆಗೆ ನೊಂದವರು ಎಲ್ಲಿಗೆ ಹೋಗಬೇಕು ? ಈ ದೃಷ್ಟಿಯಿಂದ ನಾವು ಆಲೋಚನೆ ಮಾಡಬೇಕಾಗಿದೆ. ನಾನಾದರೂ ಸರ್ಕಾರಕ್ಕೆ ಸೂಚನೆ ಮಾಡಿದ್ದೇನೆ—ಈಗ ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ತರುವವರಿದ್ದೀರಿ. ಅದರಲ್ಲಿ ಸೂಕ್ತ ಕಾನೂನನ್ನು ಮಾಡಲೇಬೇಕಾಗುತ್ತದೆ. ಪ್ರಕೃತಿಯ ವಿಕೋಪಕ್ಕೆ ಒಳಗಾದಾಗ ಜನರು ನಿಲ್ಲಲು ನೆರೆ ಇಲ್ಲದಂತೆ ಆದಾಗ, ಮತ್ತು ಇಂಥ ಸಂದರ್ಭಗಳು ಬಂದಾಗ, ತಾತ್ಕಾಲಿಕವಾಗಿಯಾದರೂ ಜಮೀನನ್ನು ವಶಪಡಿಸಿಕೊಂಡು, ಅವರಿಗೆ ನಿಲ್ಲುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ, ನೆಲ ಮಾಡಿಕೊಡುವುದಕ್ಕೆ, ಸ್ಥಳೀಯ ಅಧಿಕಾರಿಗಳಿಗೆ ಕಾನೂನಿನ ಪ್ರಕಾರ ಅವಕಾಶವಿರಬೇಕು. ಕಾನೂನಿನ ಪ್ರಕಾರ ಜಮೀನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಅಧಿಕಾರವಿರಬೇಕು. ಜಮೀನು ಮಾಲೀಕನಿಗೆ ಆಗಬಹುದಾದಂಥ ನಷ್ಟ, ಆತನಿಗೆ ಕೊಡಬಹುದಾದಂಥ ಪ್ರತಿಫಲವನ್ನು ಅಧಿಕಾರಿಗಳು ಕೊಡುವುದಕ್ಕೆ ಹಣಕಾಸಿನ ದೃಷ್ಟಿಯಿಂದಲೂ ಕೂಡ, ಅಧಿಕಾರವಿರಬೇಕು. ಬರಿಯ ಕಾನೂನನ್ನು ಮಾಡಿದರೆ ಆಗುವುದಿಲ್ಲ. ಇಂಥ ಸಂದರ್ಭಗಳು ಬಂದಾಗ ಸ್ಥಳೀಯ ಅಧಿಕಾರಿಗಳ ಜಮೀನು ವಶಪಡಿಸಿಕೊಂಡು, ಜನರಿಗೆ ನೆರೆ ಮಾಡಿಕೊಡಲು ಕಾನೂನಿನಲ್ಲಿ ಅವಕಾಶವಿರಬೇಕು. ಅಷ್ಟೇ ಇದ್ದರೆ ಸಾಲದು. ಅಂಥ ಸಂದರ್ಭಗಳಲ್ಲಿ ಸ್ಥಳೀಯ ಅಧಿಕಾರಿ ತನ್ನ ವಿವೇಚನೆಯಿಂದ ಹಣ ಖರ್ಚು ಮಾಡುವುದಕ್ಕೆ ಮತ್ತು ಹಣ ಕೊಡುವುದಕ್ಕೆ ಕೂಡ ಆತನಿಗೆ ಅವಕಾಶ ವಿರುವಂತೆ ಸರ್ಕಾರ ಕಾನೂನನ್ನು ಮಾಡಬೇಕು.

ಈ ರೀತಿ ಸರ್ಕಾರ ಕಾನೂನನ್ನು ಮಾಡಿಲ್ಲ. ಹೀಗೆ ಕಾನೂನನ್ನು ಮಾಡಿದ ಮೇಲೆ ಜನರಿಗೆ ಅವಕಾಶ ದೊರೆಯುತ್ತದೆಯೇ ವಿನಾ, ನೆಲ ಒದಗಿಸಲು ಆಗುತ್ತದೆಯೇ ವಿನಾ, ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ.

1960ನೆಯ ಇಸವಿಯಲ್ಲಿ ಸರ್ಕಾರದವರು ಒಂದು ಆರ್ಡರ್ ಮಾಡಿದ್ದಾರೆ. ಅಂಥ ಸಂದರ್ಭ ಬಂದಾಗ, ಪ್ರವಾಹದ ಹಾವಳಿಯಿಂದ ನೊಂದವರಿಗೆ ಯಾವ ರೀತಿ ಹಣ ಒದಗಿಸಬೇಕು ಸರ್ಕಾರದವರೇ 1960ರಲ್ಲಿ ಆರ್ಡರ್ ಮಾಡಿದ್ದಾರೆ. ಆದರೆ ಆರ್ಡರ್‌ನಲ್ಲಿರತಕ್ಕಂಥ ಅನೇಕ ಸೌಲಭ್ಯಗಳನ್ನು ಜನರಿಗೆ ಕ್ಷಿಪ್ರವಾಗಿ ಒದಗಿಸಿ ಕೊಡುವುದಕ್ಕೆ ಆಗಿಲ್ಲ. ನೂರು ರೂಪಾಯಿಗಳವರೆಗೆ ಪರಿಹಾರ ಕೊಡಬಹುದೆಂದು ಸರ್ಕಾರದವರು ಆರ್ಡರ್ ಮಾಡಿದ್ದಾರೆ. ನಾಲ್ಕು ಜಿಲ್ಲೆಗಳಲ್ಲಿ ಪ್ರವಾಸ ಮಾಡುವ ಅವಕಾಶ ನನಗೆ ದೊರೆತಿತ್ತು. ಎರಡು ಮೂರು ಜಿಲ್ಲೆ ಪ್ರವಾಸ ಮಾಡುವವರೆಗೂ ಕೂಡ ಸರ್ಕಾರ ಈ ಆರ್ಡರ್ ಮಾಡಿರುತ್ತಾರೆಂಬುದೇ ಅಧಿಕಾರಿಗಳಿಗೆ ಗೊತ್ತಿರಲಿಲ್ಲ. ಸರ್ಕಾರದವರು ಎಷ್ಟು ಹಣವನ್ನು ಕಳುಹಿಸಿಕೊಟ್ಟಿದ್ದರೋ ಅಷ್ಟು ಹಣವನ್ನೂ ದಾಮಾಷಾ ಪ್ರಕಾರ ಹಂಚಿ ಬಿಟ್ಟಿದ್ದರು. ಮೈಸೂರು ಜಿಲ್ಲೆಗೆ 2 ಸಾವಿರ ರೂಪಾಯಿಗಳನ್ನು ಕಳುಹಿಸಿದ್ದರು

(ಶ್ರೀ ಕೆ. ಪುಟ್ಟಸ್ವಾಮಯ್ಯ)

ಅಲ್ಲಿ ಡೆಪ್ಯೂಟಿ ಕಮಿಷನರು ವಿವೇಚನೆ ಉಪಯೋಗಿಸಿ ಎಷ್ಟು ಜನ ಪ್ರವಾಹಕ್ಕೆ ತುತ್ತಾಗಿದ್ದರೋ ಅವರಿಗೆ ಕೊಡುವುದಕ್ಕೆ ಏರ್ಪಾಡು ಮಾಡಿದ್ದರು.

ಈಚೆಗೆ ನಾವು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ನನಗೆ ಕೇಳಿ ತಿಳಿದ ಅಂಶ ಏನೆಂದರೆ ಹತ್ತು ರೂಪಾಯಿಗಳನ್ನು ಕೊಡಲು ಅವಕಾಶ ಕೊಟ್ಟಿದ್ದಾರೆ ಎಂದು ತಿಳಿದು ಬಂದಿತು. ನಾನು ಚಿಕ್ಕಮಗಳೂರು ಜಿಲ್ಲೆಗೆ ಬಂದಾಗ ಅಲ್ಲಿನ ಅಧಿಕಾರಿಗಳು 100 ರೂಪಾಯಿಗಳವರೆಗೆ ಕೊಡಬಹುದು ಎನ್ನುವುದು ಗೊತ್ತಾಯಿತು. ಇದನ್ನು ನೋಡಿದರೆ ಅಧಿಕಾರಿಗಳಿಗೆ ಸಾಕಷ್ಟು ತಿಳುವಳಿಕೆಯನ್ನು ಕೊಟ್ಟಿರಲಿಲ್ಲ ಎನ್ನುವುದು ಗೊತ್ತಾಗುತ್ತದೆ. ಹಾಗೇ ನಾವು ಕೊಡಗು ಜಿಲ್ಲೆಗೆ ಹೋದಾಗ ಅಲ್ಲಿನ ಜಿಲ್ಲಾಧಿಕಾರಿಗಳು ಇಷ್ಟು ಹಣವನ್ನು ಕೊಡಬೇಕೆಂದು ಸರಕಾರಕ್ಕೆ ಶಿಫಾರಸು ಮಾಡಲಾಗಿದೆ ಎಂದು ಹೇಳಿದರು. ಸರಕಾರದಿಂದ ಹೊರಟ ಆರ್ಡರುಗಳು ಅಧಿಕಾರಿಗಳಿಗೆಲ್ಲರಿಗೂ ಗೊತ್ತಿಲ್ಲದೇ ಹೋದರೆ ಅವರು ಈ ಸಂದರ್ಭದಲ್ಲಿ ಏನು ಮಾಡಬೇಕು? ಪ್ರವಾಹದಲ್ಲಿ ನೊಂದವರಿಗೆ ಎಷ್ಟು ಸಹಾಯವನ್ನು ಮಾಡಬೇಕೆನ್ನುವುದು ಅಧಿಕಾರಿಗಳೆಲ್ಲರಿಗೂ ಗೊತ್ತು ಮತ್ತು ಅದರಂತೆ ಸಹಾಯವನ್ನು ಕೊಡಲು ಪ್ರಯತ್ನ ಪಟ್ಟಿದ್ದಾರೆ. ಎಲ್ಲಾ ಕಡೆಗಳಲ್ಲಿಯೂ ಖಾಸಗೀ ಜನರು ಮುಂದೆ ಬಂದು ಬಹಳ ಒಳ್ಳೆಯ ಉದ್ದೇಶದಿಂದ ಸಹಾಯ ಮಾಡಿದ್ದಾರೆ. ಆದರೆ ಅವರಿಗೆಲ್ಲಾ ಹೀಗೆ ಪ್ರವಾಹ ಬರುತ್ತದೆ ಎನ್ನುವುದು ಗೊತ್ತಿರಲಿಲ್ಲ. ಪ್ರವಾಹಕ್ಕೆ ಸಂಬಂಧಪಟ್ಟಂತೆ ಹೊರಡಿಸಲಾಗಿರುವ ಸರಕಾರಿ ಆರ್ಡರುಗಳು ಗೊತ್ತಿಲ್ಲ ಮತ್ತು ಅಧಿಕಾರಿಗಳಿಗೆ ಈ ವ್ಯವಹಾರದಲ್ಲಿ ಸರಕಾರಿ ಆರ್ಡರು ಬಂದಿತೋ ಇಲ್ಲವೋ ಎನ್ನುವುದೂ ಗೊತ್ತಿಲ್ಲ. ಸರಕಾರದವರು ಏನು ಹಣವನ್ನು ಕಳುಹಿಸಿದರೋ ಆ ಹಣವನ್ನು ಹಂಚಿದ್ದಾರೆ. ಸರಕಾರದವರು ಅಗತ್ಯವಾಗಿ ಈಗ ಏನು ಮಾಡಬೇಕೆಂದರೆ ಜಮೀನನ್ನು ಕಳೆದುಕೊಂಡಿರುವ ಜನಕ್ಕೆ ಬೇರೆ ಕಡೆಯಲ್ಲಿ ಜಮೀನನ್ನು ವಶಪಡಿಸಿಕೊಂಡು ಅವರುಗಳ ವಾಸಕ್ಕೆ ಅನುಕೂಲಗಳನ್ನು ಮಾಡಿಕೊಡಬೇಕು. ಎರಡನೆಯದು,—300 ರೂಪಾಯಿಗಳಷ್ಟು ಬೆಲೆಬಾಳುವ ಮರದ ಸಾಮಾನುಗಳನ್ನು ಕೊಡಬೇಕು ಎಂದು ಸರಕಾರದ ಆರ್ಡರಿದೆ. ಆದರೆ ಈ ರೀತಿಯಾಗಿ 300 ರೂಪಾಯಿಗಳಷ್ಟು ಬೆಲೆ ಬಾಳುವ ಮರದ ಸಾಮಾನುಗಳನ್ನು ಸರಕಾರದ ಡಿಪೋವಿಗೆ ಹೋಗಿ ತಂದು ಮನೆಗಳನ್ನು ಕಟ್ಟಿಕೊಳ್ಳಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಜನ ಅಪೇಕ್ಷೆ ಪಟ್ಟರೆ ಈ ಮುನ್ನೂರು ರೂಪಾಯಿಗಳಷ್ಟು ಹಣವನ್ನು ಅವರಿಗೇ ಕೊಟ್ಟು ಮನೆ ಕಟ್ಟಿಕೊಳ್ಳಬಹುದು ಎನ್ನುವ ಒಂದು ವಾದವೂ ಇದೆ.

1-00 P.M.

ಇನ್ನೊಂದು ವಾದ ನೂರು ರೂಪಾಯಿಗಳಷ್ಟು ಬೆಲೆ ಬಾಳುವ ಗುಡಿಸಲು ಹಾಳಾಗಿ ಹೋಗಿದ್ದರೆ ಅಂತಹವರಿಗೆ 300 ರೂಪಾಯಿಗಳಷ್ಟು ಪರಿಹಾರವನ್ನು ಮನೆ ಕಟ್ಟಿಕೊಳ್ಳಲು ಏಕೆ ಕೊಡಬೇಕು ? ಮುನ್ನೂರು ರೂಪಾಯಿಗಳ ಬೆಲೆಗೆ ಕೊಡುವಂತೆ ಆರ್ಡರಿರಬೇಕು ಎಂದು ಮತ್ತೆ ಕೆಲವರು ಹೇಳಿದರು. ನಾನಾದರೋ ಹೇಳುವುದಿಷ್ಟೇ ಒಂದು ನೂರು ರೂಪಾಯಿಗಳಷ್ಟು ಬೆಲೆ ಬಾಳುವ ಗುಡಿಸಲೋ ಅಥವಾ ಅದಕ್ಕಿಂತ ಕಡಮೆ ಬೆಲೆ ಬಾಳುವ ಗುಡಿಸಲೋ ನೀರಿನಲ್ಲಿ ಕೊಚ್ಚಿ ಹೋಗಿದ್ದರೆ ಅಂತಹ ಜನಕ್ಕೆ ಮನೆ ಕಟ್ಟಿಕೊಳ್ಳಲು ಮುನ್ನೂರು ರೂಪಾಯಿಗಳಷ್ಟು ಸಹಾಯವನ್ನು ಮಾಡುವುದು ಒಳ್ಳೆಯದು. ಆದುದರಿಂದ ಮುನ್ನೂರು ರೂಪಾಯಿಗಳವರೆಗೆ ಹಣ ಕೊಡಬಹುದು ಎಂದು ನಾನು ಸೂಚಿಸುತ್ತೇನೆ. 1953ನೆಯ ಇಸವಿಯಲ್ಲಿ ಪ್ರವಾಹಕ್ಕೆ ತುತ್ತಾದವರಿಗೆ ಸೈಟುಗಳನ್ನು ಒದಗಿಸಿಕೊಡಬೇಕು ಎಂದು ಸರಕಾರದವರು ಸುಮಾರು 10,000 ರೂಪಾಯಿಗಳನ್ನು ಟಿ. ನರಸೀಪುರದ ಪೌರಸಭೆಗೆ ಕೊಟ್ಟರು. ಅಲ್ಲಿ ಪ್ರವಾಹಕ್ಕೆ ತುತ್ತಾದ ಎರಡು ಗ್ರಾಮಗಳವರನ್ನು ಬೇರೆ ಕಡೆಗೆ ಸಾಗಿಸಲು ನಿವೇಶಗಳನ್ನು ತೆಗೆದುಕೊಳ್ಳುವುದಕ್ಕಾಗಿ ಈ ಪೌರಸಭೆಗೆ ಕೊಟ್ಟರು. ಆದರೆ ಇವೊತ್ತಿನವರೆಗೂ ಇವರಿಗಾಗಿ ಜಮೀನು ಅಕ್ವೈರು ಆಗಿಲ್ಲ ಮತ್ತು ಅವರುಗಳಿಗೆ ಸೈಟುಗಳನ್ನೂ ಒದಗಿಸಿಲ್ಲ. ಈ ಎರಡು ಗ್ರಾಮಗಳೂ

ಈಗ ಹಾಳೂರುಗಳಾಗಿವೆ. ಹೀಗೇಕೆ ತಾತ್ಸಾರವಾಯಿತು ಅಥವಾ ನಿಧಾನವಾಯಿತು ಎನ್ನುವುದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕಾದ ಕೆಲಸ. ಆದುದರಿಂದ ನಾನು ಹೇಳುವುದು ಪ್ರವಾಹದಿಂದ ನೊಂದವರಿಗೆ ಏನೇನು ಸಹಾಯವನ್ನು ಮತ್ತು ಹಣವನ್ನು ಒದಗಿಸಬೇಕು ಎಂದಿದ್ದರೋ ಅವನ್ನು ಕ್ಷಿಪ್ರವಾಗಿ ಒದಗಿಸಿ ಕೊಟ್ಟರೆ ಅನುಕೂಲವಾಗುತ್ತದೆ. ಅದನ್ನು ಬಿಟ್ಟು ನಿಧಾನ ಮಾಡಿದರೆ ಅವರುಗಳು ಈಗಿರುವ ಮನೆಗಳಲ್ಲೇ ಇದ್ದು ಬಿಡೋಣ ಎನ್ನುವ ಮನಸ್ಸು ಬಂದು ಅವರು ಅಲ್ಲಿಯೇ ವಾಸಮಾಡುತ್ತಾರೆ. ಬೇಗನೆ ಕೆಲಸಗಳನ್ನು ಮಾಡಿದರೆ ಅರ್ಧ ಮುಕ್ಕಾಲು ಪಾಲು ಜನರು ಬೇರೆ ಜಾಗಗಳಿಗೆ ಹೋಗಲು ಒಪ್ಪುತ್ತಾರೆ ಇಲ್ಲದೆ ಹೋದರೆ ಅಂತಹವರನ್ನು ಬೇರೆ ಜಾಗಗಳಿಗೆ ಹೋಗುವಂತೆ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. 1924ರಲ್ಲಿ ಪ್ರವಾಹ ಬಂದಿತ್ತು. 1953ರಲ್ಲಿ ಪ್ರವಾಹ ಬಂತು. ಅದು Man made floods. ಅದಾದ ಮೇಲೆ ಈಗ ಎಂದರೆ 1961ರಲ್ಲಿ 37-38 ವರ್ಷಗಳಾದ ಮೇಲೆ ಈ ತರಹದ ಪ್ರವಾಹ ಬಂದಿರುವುದು ಸಾಮಾನ್ಯವಾಗಿ ಈ ರೀತಿಯಾದ ಪ್ರವಾಹಗಳು 33-35 ವರ್ಷಗಳಿಗೊಂದಾವರ್ತಿ ಬರುತ್ತದೆ. ಆದುದರಿಂದ ಸದ್ಯಕ್ಕೆ ಇರುವ ಹಳೆಯ ಮನೆಯನ್ನೇ ರಿಪೇರಿ ಮಾಡಿಕೊಂಡು ಅಲ್ಲಿಯೇ ವಾಸ ಮಾಡೋಣ ಎನ್ನುವ ಭಾವನೆ ಬರುತ್ತದೆ. ಇದರಿಂದಾಗಿ ಜನರು ಎಲ್ಲಿದ್ದರೋ ಅಲ್ಲಿಯೇ ಉಳಿದು ಬಿಡುತ್ತಾರೆ. ಆದುದರಿಂದ ಮನೆಗಳನ್ನು ಕಳೆದುಕೊಂಡಿರುವ ಜನರು ನದಿಯ ಹತ್ತಿರದಲ್ಲಿರುವವರನ್ನು ಕ್ಷಿಪ್ರವಾಗಿ ಬೇರೆ ಕಡೆಗೆ ಸಾಗಿಸಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಹೋಗಲು ಜನ ಕೂಡಲೇ ಒಪ್ಪುವುದಿಲ್ಲ. ಹೀಗೆ ವರ್ಷ ವರ್ಷವೂ ಪ್ರವಾಹದಿಂದ ಜನ ಕಷ್ಟಕ್ಕೆ ಈಡಾಗುತ್ತಿದ್ದರೂ ಅಂತಹ ಜನ ಬೇರೆ ಕಡೆಗೆ ಹೋಗಲು ಇಷ್ಟಪಡದೇ ಹೋದರೆ ಅಂತಹವರನ್ನು ಬಲವಂತವಾಗಿ ಸಾಗಿಸುವುದಕ್ಕೆ ಅನುಕೂಲವಾಗುವಂತಹ ಒಂದು ಕಾನೂನನ್ನು ಮಾಡಬೇಕು. ಈ ಕಾನೂನನ್ನು ಯಾವ ರೂಪದಲ್ಲಿ ತರಬೇಕು ಎನ್ನುವುದನ್ನು ಸರಕಾರದವರು ಯೋಚನೆ ಮಾಡಬೇಕು. ನಾನು ಪ್ರವಾಸ ಹೋಗಿದ್ದ ವೇಳೆಯಲ್ಲಿ 1924ರಲ್ಲಿ ಪ್ರವಾಹ ಬಂದಿದ್ದಾಗ ಒಂದು ಗ್ರಾಮವನ್ನು ಬದಲಾಯಿಸಬೇಕು ಮತ್ತು ಅದಕ್ಕೆ ತಕ್ಕ ಜಮೀನನ್ನು ಅಕ್ವೈರು ಮಾಡಿಕೊಳ್ಳಬೇಕು ಎಂದು ಮಾಡಿದ್ದರೂ, ಇನ್ನೂ ಜಮೀನ್ನು ಅಕ್ವೈರ್ ಮಾಡಿಕೊಂಡಿಲ್ಲ, ಆ ಜನಗಳು ಬೇರೆ ಕಡೆಗೆ ಹೋಗಲಿಲ್ಲ. ಹೀಗೆ ಕೆಲವು ಗ್ರಾಮಗಳಲ್ಲಿ ಪ್ರವಾಹ ಬಂದಾಗಲೆಲ್ಲಾ ತೊಂದರೆಗೆ ಜನ ತುತ್ತಾಗುತ್ತಾರೆ. ಇದನ್ನು ತಪ್ಪಿಸಬೇಕಾದುದು ಸರಕಾರದ ಕರ್ತವ್ಯ. ಬಹುಶಃ ಸೌಲಭ್ಯಗಳನ್ನು ಕೊಟ್ಟರೆ ಅವರು ಬೇರೆ ಕಡೆಗೆ ಹೋಗಬಹುದು ಎಂದು ಇದ್ದರೂ, ಕೆಲವು ಸಂದರ್ಭಗಳಲ್ಲಿ ಸೌಲಭ್ಯಗಳನ್ನು ಕೊಟ್ಟಿದ್ದರೂ ಅವರು ಹೋಗದೇ ಇರುವುದೂ ಉಂಟು. ಅಂತಹವರನ್ನು ಬಲವಂತವಾಗಿ ಬೇರೆ ಕಡೆಗೆ ಹೋಗುವಂತೆ ಮಾಡಲು ತಕ್ಕ ಒಂದು ಕಾನೂನನ್ನು ಮಾಡುವುದು ಅನಿವಾರ್ಯವಾಗುತ್ತದೆ. ಈಗ ದೇಶಕ್ಕೆ ಬಂದು ಒದಗಿರುವ ವಿಪತ್ತು ಬಹಳ ಭಾರಿ ವಿಪ್ಪತ್ತು. ಇದರ ಬಗ್ಗೆ ಸರಕಾರದ ಅಧಿಕಾರಿಗಳು ಖಾಸಗೀ ಜನರು ಮತ್ತು ಇತರರೆಲ್ಲರೂ ಎಷ್ಟು ಮುತುವರ್ಜಿ ವಹಿಸಬೇಕಾಗಿತ್ತೋ ಅಷ್ಟು ಮುತುವರ್ಜಿಯನ್ನು ವಹಿಸಿದ್ದರೂ ಈ ಪರಿಸ್ಥಿತಿಯನ್ನು ಇನ್ನೂ ಸುಧಾರಿಸುವುದಕ್ಕೆ ಸಾಧ್ಯ, ವಾಗಿಲ್ಲ. ಪರಿಸ್ಥಿತಿಗೆ ತಕ್ಕಂತೆ ಸೌಲಭ್ಯಗಳನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಮುನ್ನೆಚ್ಚರಿಕೆಯಿಂದ ಇವನ್ನು ಗಮನಕ್ಕೆ ತೆಗೆದುಕೊಂಡು ಪ್ರವಾಹ ಬಂದಾಗ, ಜನಗಳು ಕಷ್ಟಕ್ಕೆ ಸಿಕ್ಕಿದಾಗ, ಅದನ್ನು ತಪ್ಪಿಸುವುದಕ್ಕೆ ಅನಿವಾರ್ಯವಾದ ಕಷ್ಟಗಳು ಬಂದಾಗ ಆ ವಿಪತ್ತನ್ನು ತಪ್ಪಿಸಲು ಏನೇನು ಸೌಲಭ್ಯಗಳನ್ನು ಒದಗಿಸಿ ಕೊಡಬಹುದು ಎನ್ನುವಬಗ್ಗೆ ಒಂದು ಕಾನೂನನ್ನು ಮಾಡುವುದು ಉತ್ತಮ ಎಂದು ಇಲ್ಲಿ ನಾನು ಸೂಚಿಸಬಯಸುತ್ತೇನೆ.

ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನೂ ವಂದಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

Mr. SPEAKER.—Now there is not much time left. It is getting late. Sri V. S. Patil and Sri Revannasiddappa are insisting on their right to speak. If these two members were also to be accommodated the reply by the Government will have to be postponed till tomorrow as that would be too late.

Sri KADIDAL MANJAPPA.—Then it will be on the condition that no further speeches will be allowed tomorrow.

Mr. SPEAKER.—No further speeches will be allowed tomorrow. Reply by the Government and voting on the substantive motion will take place tomorrow.

I, therefore, suggest that we may give chances to Sri V. S. Patil and also to Sri Revannasiddappa if possible and ask the Government to reply to the Debates tomorrow.

†Sri V. S. PATIL (Belgaum I).—Sir, I must thank you for giving me a chance to speak on this subject at least at the fag end of the debate. All the Hon'ble Members who have expressed their views before this House regarding the recent floods have given out their thoughts very cautiously and after studying the situation very deeply. I am of the same opinion and support the proposals made by several members of this House, but at the same time I should like to point out that what we are now proposing to do for the affected areas of our State is merely a patchwork. We are trying to mend what has been destroyed by the floods. We are not trying to find out the main causes of the floods and to prevent them. It is a principal accepted by all that prevention is better than cure. We are now trying simply to cure the malady and not trying to prevent them. For this purpose I should like to bring to the notice of the Government that we must try to find out by a deep and consistent research why these vagaries of monsoon happen and when and where they can be checked and found out. Our Meteorological Department gives us warning about 24 hours in advance and not before that. If this research is made in this Department I think we may be able to find out the currents of these monsoon or the heavy rains and if they are found out, then many of the evils that are now befalling our country can be averted.

The second thing that I should like to suggest is about the vulnerable position of our lands and houses and other properties likely to be affected by floods. We have to trace all of them and see that nothing happens to them in future. With that purpose I should like to suggest that the present village sites have to be changed. There is no alternative at all. The proposal made by the Government to give the affected persons about Rs. 300 or Rs. 400 or any amount or some materials such as zinc sheets or wooden poles is merely a pitchwork and it is not a lasting thing which is expected to be done. I suggest to the Government that we must shift the village sites from the present position where they are likely to be affected by floods. Not only that, but the Government must construct permanent houses for the cultivators. It is now in vogue in the whole of our country

that in urban areas especially in industrial areas in order to rehabilitate the workers and for their better housing so many things are being done. Why not we help the rural areas also in the same way ? Villages which are likely to be affected by floods should be shifted with a definite plan to some upper level of the village sites. Not only should the sites there be acquired by Government, but even houses should be built by Government for the cultivators. Why should such a scheme not be undertaken by the Government as a long range policy ? It is no use giving a few rupees or a few zinc sheets or some poles or materials and asking the people to build anywhere they like. It is completely a folly on the part of the Government and so in order to avoid a recurrence of such disasters Government should chalk out a policy of re-building the villages altogether.

Along with these two suggestions I should like to point out the condition of our area. We also come from Malnad area and the Malnad area throughout the whole of the State in the worst affected by the floods. All our lands with all the costly manures and fertilizers have been washed away and these must have been deposited in the maidan area on the banks of the rivers. So whatever has been washed away from our lands has been deposited there. Those lands have become richer. What is our loss has become practically their gain. There is no doubt about that. So something should be expected from the people of the maidan area help to us who are living in the Malnad area. That is expected of them as human beings, because even though we have not given them, still nature has forced us to give them all our soil and the manures and fertilizers that we had put in our lands. I hope that the appeal made by the Chief Minister as well as the parties to help us will be heard and that the maidan area people will come forward with help to give relief to the Malnad area people.

Sri A. R. PANCHAGAVI.—Relief is a different thing. If your manures and fertilizers have been washed away to our lands, then along with your manures and fertilizers our manures and fertilizers also have been washed away and all are deposited in the sea.

Sri V. S. PATIL.—Then we can claim some help from Madras and Andhra which have benefited by our manures and fertilizers flowing into their area.

So far as our part is concerned, it is affected by three rivers the Malaprabha, the Ghataprabha and the Markhandi. These three rivers have caused great devastation to our agricultural lands. Karwar, Haliyal, Supa, Khanapur and Belgaum taluks have been adveresely affected by the recent floods. Not only now, but during the monsoon in may also we had unprecedented rains in this part and all our paddy lands were washed away and heavy damage was caused. Government was pleased to sanction Rs. 75,000 to taccavi loan only to a part of Khanapur taluk. But as suggested by several members of this House, whatever grant or help emanates from the Government

(Sri V. S. PATIL)

Treasury, it is very difficult to reach in full to the actual cultivators. That is the experience of all of us. We know that since 1947-48 the Central Government has been spending along with the State Governments crores and crores of rupees every year under Grow More Food Campaign, but nobody cares to see what actually reaches the cultivator. The same thing has happened to the grant of Rs. 75,000 given by the Government.

Sri KADIDAL MANJAPPA.—Does the Hon'ble Member say that the amount disbursed in the month of May–June has not reached the cultivators ? We have got receipts and security bonds from them.

Sri V. S. PATIL.—That is all correct. I do not mean to say that there is a single pie uncovered by the bonds given by the cultivator. It is correct that the cultivator has to pay the whole amount. There is no question about that, but as the whole amount been actually received by him, that is the question.

Sri KADIDAL MANJAPPA.—I am prepared to hold an enquiry. If there is a complaint from any person who has signed the bond for the loan from us and if he comes forward and says that he has not received the loan and that his signature or thumb impression was taken without actually giving the loan or after giving only a portion of it, then I am prepared to hold an enquiry and if it is proved I am prepared to sack the person concerned.

Sri V. S. PATIL.—That is what I am suggesting. If the Hon'ble Minister is prepared to hold an enquiay into this matter, we are prepared to give any number of witnesses.

Sri KADIDAL MANJAPPA.—You please send a few petitions.

Sri V. S. PATIL.—I do not mean to say that no amount has been received by the persons concerned. They have received to some extent, not the whole of it. We are demanding 10 crores from the Central Government. The Central Government may contribute upto 50 per cent. This huge amount is going out of the treasury for the benefit of the cultivators but these intermediaries, if they are allowed to operate, will eat away most of the amount intended for the cultivators.

So far as the Taccavi are concerned, when such unprecedented natural calamities have overtaken us, I do not understand why the cultivator is to be charged for the loan. Why Government should not give all help ? The help being proposed to be given under the Government Orders is from 40 to 100 rupees.

Sri KADIDAL MANJAPPA.—Upto one thousand interest-free loan.

Sri V. S. PATIL.—I am not speaking about loans but about gratuitious grants. I do not know why the amount should vary in this manner. It should be uniform. If it is meant for a family of five members it should be given to all whether they have property or not.

If he has suffered, is he not entitled to get Government help ? Under the present circumstances, everybody has lost everything he had, whatever be the worth of his property. There should be no distinction while giving gratuitous amount and I suggest to the Government that uniform rules should be observed for giving grants for those people who lack sustenance. So far as the loans are concerned the proposal made by the Government is a reasonable one. At the same time I should like to suggest that the amount of Rs. 200 given for each family to bring the lands under cultivation is rather too small. I come from a paddy-growing area. To prepare lands which have been completely washed out requires a greater amount. First of all the soil has been eroded. All vitality has disappeared. Bunds and protecting lines have gone away. Therefore the amount proposed by the Government is too meagre as compared to the actual expenditure that has to be incurred to reclaim the land. I suggest that according to the circumstances of particular villages or taluks or districts, these amounts may be fixed by the Government on proper enquiry and report.

A suggestion has been made in this House concerning the appointment of a Committee. If committees are to be formed at a State level or at district levels. I have no objection. But so far as local committees are concerned instead of having a new committee, I support the proposal made here to give these grants or loans or benefits, through the village panchayats or the taluk boards. They are the proper agencies and they should be allowed to place before the Government the demands of the people as well as to see that the amounts that have been given by the Government are properly distributed. The Tahsildar is not the proper person. The Tahsildar will depend upon his circle officers and they will depend upon the shanbogues and talaties and the whole mischief originates there. That is why I suggest that the Taluk Board or Grampanchayats made the proper authorities for disare charging these functions.

So far as Belgaum proper is concerned there is field called Bellary Nalla. Nearly one thousand acres of the best paddy land are submerged and there is a proposal before the Government for the last 30 years which is pending enquiry. Nothing has been done. It is the most fertile land yielding about 25 bags per acre. This year more than a thousand acres are flooded. This scheme should be expedited and drainage work of this nalla should be got done this year. We have brought this to the notice of every Minister both when we were in the Bombay State and at the time when we were in the Indian State and now in the Mysore State also we have brought to the notice of the Hon'ble Minister and everybody has promised us, but nothing has been done. This is a long-standing grievance and I hope at least now, the Government will come forward to relieve our people from this tremendous loss.

About my own constituency, the Rakascope scheme has been practically completed. The reservor is complete, but the surrounding

(Sri V. S. PATIL)

villages have greatly suffered during the unprecedented rains. Grant of agricultural lands to these people is pending before the Government. Even the Hon'ble Chief Minister who had visited those sites had promised to help but as yet nothing has been done. I request the Government to expedite this matter and help those people whose lands have already been submerged. They are penniless now without any resources for maintaining themselves.

Due to the washing away of the Panset river dam which inundated Poona City, a doubt has been created about the Rakascope dam. Our dam is also an earthern one like the Panset dam. When we heard and read the news about Panset, we were troubled over it. The fear expressed by the people appears to be a real one. We were troubled over it that our dam also might give way due to the pressure of the waves and if that happens not less than 20 villages will be washed away. I request the Government to make a thorough enquiry into the tenability of these earthern dams where the rainfall is more than 100 inches per year. Suitable steps should be taken to safeguard the properties and persons living on the banks of such rivers.

2-00 P.M.

ಶ್ರೀ ಕೆ. ಪಿ. ರೇವಣಸಿದ್ಧಪ್ಪ (ತಿಪಟೂರು).—ಸ್ವಾಮಿ......

ಶ್ರೀ ಕಡಿದಾಳ್ ಮಂಜಪ್ಪ.—ಅವರ ತಾಲ್ಲೂಕಿನಲ್ಲಿ ಪ್ರವಾಹದಿಂದ ಅನಾಹುತವಾಗಿಲ್ಲ, ಸ್ವಾಮಿ.

†ಶ್ರೀ ಕೆ. ಪಿ. ರೇವಣಸಿದ್ಧಪ್ಪ.—ಈ ವರ್ಷ ಅಲ್ಲಿ ಪ್ರವಾಹದ ಹಾವಳಿಯಿಲ್ಲ. ಆದರೆ ಹೋದ ವರ್ಷ ಪ್ರವಾಹ ಬಂದು ಆಗಿರುವ ತೊಂದರೆಯನ್ನು ಇದುವರೆಗೂ ಸರಿಪಡಿಸಿಲ್ಲ. 240 ಕೆರೆ ಇರತಕ್ಕ ತಾಲ್ಲೂಕಿನಲ್ಲಿ 34 ಕೆರೆ ಒಡೆದುಹೋದರೂ ಇವೊತ್ತಿನವರೆಗೂ ಎಷ್ಟು ಕೆರೆಗಳಿಗೆ ಜಖಂ ಆಗಿದೆ ಎಂಬುದನ್ನು ಕಂಡುಹಿಡಿಯಲು ಸಾಧ್ಯವಿಲ್ಲದೆಯಿರುವಾಗ, ಮೈಸೂರು ದೇಶದ ಬಹು ಭಾಗದಲ್ಲಿ ಆಗಿರುವುದನ್ನು ಕಂಡುಹಿಡಿಯಬೇಕಾದರೆ ಎಷ್ಟು ದಿವಸಗಳ ಬೇಕಾಗುತ್ತವೆನ್ನುವುದನ್ನು ಅವರೇ ಹೇಳಬೇಕು. ಸರ್ಕಾರ ಮಾಡುವ ಆಜ್ಞೆಯನ್ನು ಅಧಿಕಾರಿಗಳು ಎಷ್ಟರಮಟ್ಟಿಗೆ ಅಸಡ್ಡೆ ಮಾಡುತ್ತಾರೆನ್ನುವುದಕ್ಕೆ ಇದೊಂದೇ ಉದಾಹರಣೆ ಸಾಕು. ನಮ್ಮ ತಾಲ್ಲೂಕಿನಲ್ಲಿ ಒಡೆದುಹೋದ ಕೆರೆಗಳನ್ನು ತಕ್ಷಣ ಸರಿಪಡಿಸಿಕೊಡುತ್ತೇವೆಂದು ನಮ್ಮ ಮಂತ್ರಿಗಳಲ್ಲಿ ಅರ್ಧ ಭಾಗದ ಜನ ವಾಗ್ದಾನ ಮಾಡಿಬಂದರೂ ಅದೆಲ್ಲ ಕಾಗದದ ಮೇಲೆಯೇ ಉಳಿದಿದೆಯೆಂದು ಕಾಣುತ್ತದೆ.

ನಮ್ಮ ಸ್ನೇಹಿತರು ಕೆಲವರು ಈಗಾಗಲೇ ಹೇಳಿರುವಂತೆ ಹಿಂದೆ ಪ್ರವಾಹ ಯಾವಾಗ ಬಂದಿತ್ತು, ಜನಗಳಿಗೆ ಏನು ತೊಂದರೆಯಾಗಿತ್ತು, ಮುಂದೆ ಪ್ರವಾಹದ ಹಾವಳಿಯಿಂದ ತೊಂದರೆ ಯಾಗದಂತೆ ಏನೇನು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವುಗಳನ್ನು ತೆಗೆದು ಕೊಳ್ಳದೆ ಸರ್ಕಾರದವರು ಹೀಗೆ ಮಾಡುತ್ತೇವೆ, ಹಾಗೆ ಮಾಡುತ್ತೇವೆಂದು ಹೇಳುವುದನ್ನು ನೋಡಿದರೆ......

ಅಧ್ಯಕ್ಷರು.—ಈಗ ಆಗುವುದಿಲ್ಲ. ನೀವು ಮಂತ್ರಿಗಳಾದಾಗ ಆಗುತ್ತದೆ.

ಶ್ರೀ ಕೆ. ಪಿ. ರೇವಣಸಿದ್ಧಪ್ಪ.—ನಾನು ಎಲ್ಲಿ ಆಗುತ್ತೇನೆ, ಸ್ವಾಮಿ! ನಾನು ಮಂತ್ರಿ ಯಾಗುವುದಿಲ್ಲ. ಮುಂದೆ ಏನಾಗಬೇಕು ಎಂದು ಯೋಚನೆ ಮಾಡುವ ಸ್ಥಿತಿಯೊಳಗೆ ಇವರು

ಇಲ್ಲ. ಇವರು ಪ್ರವಾಹಕ್ಕಿಂತ ಹೆಚ್ಚಾಗಿ ಮುಂದೆ ಬರಲಿರುವ ಚುನಾವಣೆಯ ಪ್ರವಾಹದಲ್ಲ ಆಗಲೇ ಧುಮುಕಿಬಿಟ್ಟಿದ್ದಾರೆ......

ಶ್ರೀ ಕಡಿದಾಳ್ ಮಂಜಪ್ಪ.—ನಾವು ಚುನಾವಣೆಯ ಪ್ರವಾಹದಲ್ಲ ಮುಳಿಗಿದ್ದೇವೆ, ನೀವು ಭಾಷಣದ ಪ್ರವಾಹದಲ್ಲಿ ಮುಳುಗಿದ್ದೀರಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ;—''ಸಂಕಟ ಬಂದದಾಗ ವೆಂಕಟರಮಣ'' ಎನ್ನುವಂತೆ ಅಥವಾ ''ಗದ್ದಕ್ಕೆ ಬೆಂಕಿ ಬಿದ್ದಾಗ ಬಾವಿ ತೆಗೆಯುವುದಕ್ಕೆ ಹೋದರು'' ಎನ್ನುವಂತೆ ಪ್ರವಾಹ ದಿಂದ ಕೊಚ್ಚಿ ಹೋದಾಗ ಸಹಾಯ ಮಾಡುವುದಕ್ಕಿಂತಲೂ ಪ್ರವಾಹದಿಂದ ಆಗಬಹುದಾದ ಹಾವಳಿಯನ್ನು ತಡೆಗಟ್ಟಲು ಸೂಕ್ತಕ್ರಮಗಳನ್ನು ತೆಗೆದುಕೊಳ್ಳಬೇಕು. ಸರ್ಕಾರದಿಂದ ಸಹಾಯ ಮಾಡುವಾಗ ಒಬ್ಬರಿಗೊಂದು, ಮತ್ತೊಬ್ಬರಿಗೊಂದು ಮಾಡಬಾರದು. ಚಿಕ್ಕ ಮಗಳೂರಿಗೆ ನೂರು ರೂಪಾಯಿಗಳನ್ನು ಕೊಟ್ಟು ತಿಪಟೂರಿಗೆ ಹತ್ತು ರೂಪಾಯಿಗಳನ್ನು ಕೊಡ ಬಾರದು; ಆ ರೀತಿ ಮಾಡಿಲ್ಲವೆಂದು ತಿಳಿದುಕೊಂಡಿದ್ದೇನೆ. ಹೋದ ವರ್ಷ ನಮ್ಮ ಕಡೆ ಆಗಿರುವ ತೊಂದರೆಗಳನ್ನು ಬೇಗ ಸರಿಪಡಿಸಬೇಕು. ಮುಂದೆ ಜನಗಳಿಗೆ ಇಂತಹ ತೊಂದರೆಗಳಾಗ ದಂತೆ ಈ ವಿಷಯದಲ್ಲ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿ, ಇಷ್ಟು ಅವಕಾಶ ಕೊಟ್ಟದಕ್ಕಾಗಿ ನಮ್ಮ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

Mr. SPEAKER.—The House will now rise and meet to-morrow at 9 A.M.

The House adjourned at Five Minutes past Two of the Clock to meet again at Nine of the Clock on Saturday, the 29th July 1961.